# ಅಪರಂಜಿ

ತಿಳಿನಗೆಯ ಕಾರಂಜಿ



ಜನವರಿ - 2014





# ಅಪರಂಜಿ

ತಿಳಿನಗೆಯ ಕಾರಂಜಿ




ಸಂಪಾದಕ ಮಂಡಳಿ

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

ಟ್ರಸ್ಟಿಗಳು
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

ವಿಶೇಷ ಆಹ್ವಾನಿತರು
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

ಗೌರವ ಸಲಹೆಗಾರರು
ಶ್ರೀ ಅ.ರಾ.ಸೇ.



**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ





**ಸಂಪುಟ 31**
**ಸಂಚಿಕೆ - 4**
**ಜನವರಿ - 2014**


## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ರಾಯಭಾರಿ ರಾಜಧರ್ಮ.. | **ವತ್ಸನ** | 3 |
| ಪೊರಕೆ ಪುರಾಣ | **ಅ.ರಾ. ಮಿತ್ರ** | 8 |
| ಅಮ್ಮ - ಮಗಳು | **ನೀಲತ್ತ ಹಳ್ಳಿ ಕಸ್ತೂರಿ** | 11 |
| ಎಲ್ಲೆಲ್ಲೂ ನಗುವೆ | **ಎಚ್.ಜಿ. ಸೋಮಶೇಖರ ರಾವ್** | 13 |
| ಅಕ್ರಮ - ಸಕ್ರಮ | **ಇ.ಆರ್. ರಾಮಚಂದ್ರನ್** | 15 |
| ಕೊರವಂಜಿ ಪದಬಂಧ | **ವಿದ್ಯಾ ವಿ. ಹಾಲಭಾವಿ** | 17 |
| ಲಗಣಾ ಆದ್ರ ಆರಾಮ! | **ಎಚ್. ಶಾಂತರಾಜ ಐತಾಳ್** | 18 |
| ತುಂತುರು | **ದಂನಾಆ** | 21 |
| ಈರುಳ್ಳಿ ಪರ್ವ | **ಸಿ.ಆರ್. ಸತ್ಯ** | 22 |
| ಹೌದಾ ಜೀವು? ಸರಿ.... | **ಹೆಚ್.ಆರ್. ಹನುಮಂತ ರಾವ್** | 26 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 36 |
| ಶುದ್ಧ ಅಸುದ್ದಿ | **ಎಚ್ಚೆನ್ಎ** | 39 |


**ಮುಖಪುಟ ವ್ಯಂಗ್ಯಚಿತ್ರ - ಗುಜ್ಜಾರ್**


*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*
ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanji42@hotmail.com



ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

# ಅಪರಂಜಿ ಕಿಡಿ

● ಪ್ರಕಾಶ್



''ಬಿ.ಜೆ.ಪಿ. ನಾಗಾಲೋಟ'' ಚುನಾವಣೆ ಸುದ್ದಿ

**● ''ಕೆಸರಿನ ಕಮಲ'' ಎನ್ನಬಾರದು ಈಗ !!**

★★★

ಬಿ.ಜೆ.ಪಿ.ಗೆ ಯಡಿಯೂರಪ್ಪ?? – ಪತ್ರಿಕೆ

**● ಯಕ್ಷಪ್ರಶ್ನೆ ಅಂದರೆ ಇದೇ !!**

★★★

ಜನತೆಗೆ ಕಾಂಗ್ರೆಸ್ ಬಗ್ಗೆ ವಿಶ್ವಾಸವಿಲ್ಲ – ರಾಹುಲ್

**● ಅವರಿಗೆ ಅದು ಹೊಳೆದದ್ದೇ ಆಶ್ಚರ್ಯ !!**

★★★

ಕಾಮೆಡ್ ಕೆ ನಡೆಸಿದ ಪರೀಕ್ಷೆಗಳಲ್ಲಿ ಅಕ್ರಮ; ತನಿಖೆ – ಪತ್ರಿಕೆ

**● ಕಾಮೆಡ್ ಆರೋಗ್ಯ ಹದಗೆಟ್ಟಿದೆ !!**

★★★

ಬಿ.ಜೆ.ಪಿ. ಸೇರಲು ನಾನು ಷರತ್ತುಗಳನ್ನು ಹಾಕಿದ್ದೇನೆ ಎಂಬ ಸುದ್ದಿ ಕೇಳಿ ನನಗೆ ಕಣ್ಣೀರು ಬಂತು – ಶ್ರೀ ಯಡಿಯೂರಪ್ಪ

**● ಮೊಸಳೆಗಳೆಲ್ಲಾ ನಕ್ಕವಂತೆ !!**

★★★

ಕಿರುತೆರೆ ಕಲಾವಿದರ ಮನೆಯಲ್ಲಿ ದರೋಡೆ – ಸುದ್ದಿ

**● ಅಲ್ಲಿ ಸಿ.ಸಿ.ಟಿ.ವಿ. ಇಲ್ಲದ್ದು ಶೋಚನೀಯ !!**

★★★

ಯುದ್ಧದಲ್ಲಿ ಪಾಕ್ ಗೆಲ್ಲದು – ಸಿಂಗ್

**● ಅವರ ವಾರ್-ಸಾಂಗ್ ಕೇಳಿ ಅಪರಂಜಿ ಬೆರಗಾದಳಂತೆ !!**

★★★

ಸೂಪರ್ ಕಂಡಕ್ಟರ್ ಖ್ಯಾತಿಯ ಸೂಪರ್ ವಿಜ್ಞಾನಿ ಡಾ|| ಸಿ.ಎನ್.ಆರ್. ರಾವ್ ಅವರಿಗೆ ಹಾರ್ದಿಕ ಶುಭಾಶಯಗಳು

★★★

ಮೊಬೈಲ್‌ನಿಂದ ಕ್ಯಾನ್ಸರ್ ಬರುವುದಿಲ್ಲ – ಸುದ್ದಿ

**● ಹೌದು, ಬಿಲ್ ಮಾತ್ರಾ ಬರುತ್ತೆ !!**

★★★



# ರಾಯಭಾರಿ ರಾಜಧರ್ಮ ಪ್ರಕರಣ

**- ವತ್ಸನ**

**ಅಂ**ದು ಬೆಳಗ್ಗೆ ಸರೋಜಮ್ಮ ಅವರೇಕಾಳು ಹಾಕಿದ ಅಕ್ಕಿತರಿ ಉಪ್ಪಿಟ್ಟು ಮಾಡಿದ್ದರು. ಇದನ್ನು ನಮ್ಮ ಪೂರ್ವಿಕರು ಮಿಟ್ಟಿಗೆ ಅನ್ನುತ್ತಿದ್ದರಂತೆ.

''ಸರೋಜಮ್ಮ, ನೀವು ಹೀಗೆ ರುಚಿರುಚಿಯಾಗಿ ಅಡುಗೆ ಮಾಡಿದರೆ ನಾನು ಪಥ್ಯಮಾಡಿದ ಹಾಗೇ ಇದೆ'' ಅಂತ ಶರಲೇಖ ಅವರ ಕೌಶಲ್ಯಕ್ಕೆ ಮೆಚ್ಚುಗೆ ತೋರಿಸಿದ್ದೂ ಆಯಿತು. ಕಾಫಿ ಕುಡಿಯುತ್ತಿದ್ದಾಗ ಶರಲೇಖ, ''ನನ್ನ ಗೆಳೆಯ ಉನ್ನಿ ಕೃಷ್ಣನ್ ನೆನಪಿದೆಯೇ?'' ಅಂತ ಕೇಳಿದ.

''ನೆನಪಿಲ್ಲದೇ ಏನು, ಬಹು ದೊಡ್ಡ ಹೋಟೆಲ್ ಉದ್ಯಮಿ ಅಲ್ಲವೇ ಅವನು. ಹಿಂದೊಮ್ಮೆ ಅವನ ಹೋಟೆಲಿನ ಸಸ್ಯಾಹಾರಿ ಅಡುಗೆ ಮನೆಯಲ್ಲಿ ಕಾರಣವಿಲ್ಲದೇ ಎಲುಬಿನ ತುಂಡುಗಳು ಕಾಣಿಸಿಕೊಳ್ಳಲು ಶುರುವಾದಾಗ ನೀನೇ ತಾನೇ ಅವನ ಸಮಸ್ಯೇನ ಪರಿಹರಿಸಿದ್ದು. ಚೆನ್ನಾಗಿ ನೆನಪಿದೆ. ಅವನ ವಿಷಯ ಯಾಕೆ ಬಂತು ಈಗ?'' ಅಂತ ನಾನು ಕೇಳಿದೆ.

''ಅವನು ವೇನಾಡಿನಲ್ಲಿ ಹೊಸದಾಗಿ ಒಂದು ರಿಸಾರ್ಟ್ ಪ್ರಾರಂಭ ಮಾಡಿದ್ದಾನೆ. 'ಒಂದೆರಡು ದಿನ ಬಂದು ಹೋಗಿ ಚೆನ್ನಾಗಿರುತ್ತೆ. ಯಾಕೆ ಯಾವಾಗಲೂ ಬೆಂಗಳೂರಿನಲ್ಲೇ ಕೊಳೀತೀರಾ' ಅಂತ ಮೊನ್ನೆ ಫೋನ್ ಮಾಡಿ ಆಹ್ವಾನಿಸಿದ. ನಿನ್ನನ್ನು ಕೇಳಿ ಹೇಳ್ತೀನಿ ಅಂತ ಹೇಳಿದೆ. ಏನಂತೀಯಾ?'' ಅಂತ ಕೇಳಿದ ಶರಲೇಖ.

ಹಲವು ವಾರಗಳ ಹಿಂದೆ ತದ್ರೂಪಿ ಪ್ರಕರಣದ ನಂತರ ನಾನು ಸುಸ್ತಾಗಿ ಹೋಗಿದ್ದೆ. ಪುನಃ ಲವಲವಿಕೆ ಪಡೆಯೋಕ್ಕೆ ಇದೊಂದು ಉತ್ತಮ ಅವಕಾಶ ಅನ್ನಿಸಿತು. ವೇನಾಡಿಗೆ ಹೋಗಲು ಒಪ್ಪಿದೆ.

ಬೆಳಗ್ಗೆ ಕಾರಿನಲ್ಲಿ ಹೊರಟು, ಮೈಸೂರು ಮಾರ್ಗವಾಗಿ ಹೆಗ್ಗಡದೇವನ ಕೋಟೆ ತಲುಪಿದಾಗ ಹನ್ನೊಂದಾಗಿತ್ತು. ದಾರಿ ಪಕ್ಕದ ದಾಬಾದಲ್ಲಿ ಕಾಫಿ ಕುಡಿದು ಪುನಃ ವೇನಾಡಿನ ದಾರಿ ಹಿಡಿದೆವು. ಕೇರಳದ ಗಡಿ ದಾಟಿ, ಕಾಲ್‌ಪೆಟ್ಟದಲ್ಲಿದ್ದ ರಿಸಾರ್ಟ್ ಸೇರಿದಾಗ ಮಧ್ಯಾಹ್ನ ಒಂದು ಗಂಟೆ. ರಿಸೆಪ್ಷನ್ನಿನಲ್ಲಿ ಸ್ವತಃ ಉನ್ನಿಯೇ ನಿಂತಿದ್ದು ನಮ್ಮನ್ನು ಬಹು ಆತ್ಮೀಯತೆಯಿಂದ ಸ್ವಾಗತಿಸಿದ. ಸ್ವಾಗತಿಸುವ ಹಜಾರದಲ್ಲಿ, ಹಸಿರು ಮಿಶ್ರಿತ ಚಿನ್ನದ ಜರಿ ಅಂಚಿನ ಬಿಳಿಯ ಸೀರೆ ಉಟ್ಟಿದ್ದ ಮೋಹಕ ಯುವತಿಯೊಬ್ಬಳು ಕೊಟ್ಟ ಹಣ್ಣಿನ ರಸವನ್ನು ಕುಡಿದ ನಂತರ ನಮಗಾಗಿ ಕಾದಿರಿಸಿದ್ದ ಕೊಠಡಿಗೆ ಹೋದೆವು. ಅದೇನು ರಾಜವೈಭವ ಅಂತೀರಿ ಈ ರಿಸಾರ್ಟು! ಕೊಠಡಿಯ ಬಾಲ್ಕನಿಯಿಂದ ಕೇರಳದ ಪ್ರಕೃತಿ ಸೌಂದರ್ಯ ಉಸಿರು ಸಿಕ್ಕಿಕೊಳ್ಳುವಷ್ಟು

ಮೋಹಕವಾಗಿತ್ತು. ದೂರದಲ್ಲಿ ಹಸಿರು ಹೊದ್ದ ಬೆಟ್ಟಗಳು, ಅವುಗಳ ಮುಂದೆ ವಿಶಾಲವಾದ ಹರಹಿನ ಸರೋವರ, ರಿಸಾರ್ಟಿನ ಆವರಣದಲ್ಲಿ ತುಂಬಿ ತುಳುಕುತ್ತಿದ್ದ ಹಣ್ಣಿನ ಮರಗಳು, ಬಹು ಚೆನ್ನಾಗಿ ಆಲೋಚಿಸಿ ನಿರ್ಮಿಸಿದ್ದ ಕಾಟೇಜುಗಳು ಇವನ್ನೆಲ್ಲಾ ನೋಡಿ ಬೆರಗಾದೆ. ಶರಲೇಖ ರೂಮಿನಲ್ಲಿ ತನ್ನ ಬ್ಯಾಗು ಬಿಸಾಕಿ ಉನ್ನಿಯ ಹತ್ತಿರ ಮಾತನಾಡಲು ಹೊರಟು ಹೋಗಿದ್ದ. ಸರಿ, ಇಲ್ಲೂ ಏನೋ ಕೆಲಸ ಇಟ್ಟುಕೊಂಡೇ ಬಂದಿದೆ ಪ್ರಾಣಿ. ಇಂತಹ ಸೌಂದರ್ಯಾನ ಅನುಭವಿಸುವುದಕ್ಕೂ ಪಡೆದು ಬಂದಿರಬೇಕು ಅಂದುಕೊಳ್ಳುತ್ತಾ ನಾನು ಬಾತ್‌ರೂಮ್ ನೋಡಲು ಹೋದೆ.

ಸ್ವಲ್ಪ ಹೊತ್ತಿನ ಬಳಿಕ ಕೊಠಡಿಯ ಫೋನ್ ರಿಂಗಾಯಿತು. ಆ ಬದಿಯಲ್ಲಿ ಶರಲೇಖ, ''ಇಲ್ಲೇ ರೆಸ್ಟುರಾದಲ್ಲಿ ಉನ್ನಿಯ ಜೊತೆ ಕೂತಿದ್ದೇನೆ. ನೀನು ಊಟಕ್ಕೆ ಸಿದ್ಧನಾಗಿದ್ದರೆ ಇಲ್ಲೇ ಬಂದುಬಿಡು'' ಅಂದ ನನ್ನ ಮಿತ್ರ. ನಾನು ರೆಸ್ಟುರಾಗೆ ಹೋದೆ.

ಶರಲೇಖ ಕುಳಿತಿದ್ದ ಮೇಜಿನಲ್ಲಿ, ಉನ್ನಿಯ ಜೊತೆ ಬಿಳಿಯ ದಂಪತಿಗಳಿಬ್ಬರು ಕುಳಿತಿದ್ದರು. ನಾನು ಅಲ್ಲಿಗೆ ಹೋದೊಡನೆಯೇ ಎಲ್ಲರೂ ಎದ್ದು ನಿಂತು ಪರಸ್ಪರ ಪರಿಚಯದ ಸಂಪ್ರದಾಯವನ್ನು ನೆರವೇರಿಸಿದರು.

ಜಿಮ್ ಮತ್ತು ಜೆಸ್ಸಿಕಾ ಅಮೆರಿಕನ್ನರು. ಅಮೆರಿಕೆಯ ದೂತಾವಾಸದಲ್ಲಿ ಜಿಮ್ ಒಬ್ಬ ಮಧ್ಯಮ ದರ್ಜೆಯ ಅಧಿಕಾರಿ. ಜೆಸ್ಸಿಕಾ ವೃತ್ತಿಯಲ್ಲಿ ಶಿಲ್ಪಿ. ಇಬ್ಬರಿಗೂ ಭಾರತ ಮತ್ತು ಇಲ್ಲಿನ ಸಂಸ್ಕೃತಿಯನ್ನು ಕಂಡರೆ ಬಹು ಅಭಿಮಾನ. ಇಷ್ಟು ಮಾಹಿತಿ ಮೊದಲ ಮಾತುಕತೆಗಳಲ್ಲಿಯೇ ತಿಳಿಯಿತು. ಉನ್ನಿಗೆ ಈ ದಂಪತಿಗಳ ಪರಿಚಯ ಚೆನ್ನಾಗಿದ್ದ ಹಾಗೆ ಕಂಡಿತು. ಶರಲೇಖನನ್ನು ಉನ್ನಿ ''ಬಹು ಪ್ರತಿಭಾವಂತ, ಬಹುವಾದ, ವೈವಿಧ್ಯಮಯವಾದ ಅನುಭವಗಳನ್ನು ಹೊಂದಿರುವ ಹಿರಿಯ ಪ್ರಜೆ'' ಎಂದು ಈ ದಂಪತಿಗಳಿಗೆ ಪರಿಚಯಿಸಿದ್ದ. ಅವನ ಪತ್ತೇದಾರಿಯ ವೃತ್ತಿಯನ್ನು ಏಕೆ ಮುಚ್ಚಿಟ್ಟಿದ್ದನೋ ನನಗೆ ತಿಳಿಯಲಿಲ್ಲ. ನಾನು ಈ ಗುಂಪನ್ನು ಸೇರಿದಾಗ ಶರಲೇಖ ಕೊಡಗಿನ ಸೌಂದರ್ಯವನ್ನು ನಮ್ಮ ಅತಿಥಿಗಳಿಗೆ ಬಣ್ಣಿಸುತ್ತಿದ್ದ. ನನ್ನ ಬರವಿಗೆ ಕಾಯುತ್ತಿದ್ದ ರೆಸ್ಟುರಾ ಸೇವಕರು ಎಲ್ಲರಿಗೂ ಸೂಪ್ ತಂದು ತಮ್ಮ ಆತಿಥ್ಯದ ಜವಾಬ್ದಾರಿಯನ್ನು ನಿರ್ವಹಿಸತೊಡಗಿದರು.

ಊಟಮಾಡುತ್ತಲೇ, ಆಗಲೇ ಪ್ರಾರಂಭಿಸಿದ್ದ ತನ್ನ ಅನುಭವಗಳ ವಿವರಣೆಯನ್ನು ಶರಲೇಖ ಮುಂದುವರಿಸಿದ. ನಾನು ಮಧ್ಯದಲ್ಲಿ ಸೇರಿಕೊಂಡೆ.

''ನಾನು ಮಡಿಕೇರಿಯಲ್ಲಿದ್ದಷ್ಟು ಕಾಲವೂ ನನಗೆ ವತ್ಸನನ ಗೆಳೆಯ ಬೆಳ್ಳಿಯಪ್ಪನೇ ಅತಿಥೇಯ. ಅವನೊಬ್ಬ ಒಳ್ಳೆಯ ಶಿಕಾರಿ. ಹೇಗಿದ್ದರೂ ಕೊಡವರಿಗೆಲ್ಲಾ ತುಪಾಕಿಗಳನ್ನು ಹೊಂದುವುದು ಆಜನ್ಮ ಸಿದ್ಧ ಹಕ್ಕು ಅಲ್ಲವೇ. ಹಾಗಾಗಿ ಅವನು ತುಪಾಕಿ ಹಿಡಿದು ಕಾಡಿಗೆ ಹೊರಟರೆ ನಾನೂ ಹಿಂಬಾಲಿಸುತ್ತಿದ್ದೆ. ಈಗಿನ ವನ್ಯಜೀವಿ ಸಂರಕ್ಷಣ ಕಾಯಿದೆಯ ದಿನಗಳಲ್ಲಿ ಅವನಿಗೆ ಶಿಕಾರಿ ಮಾಡಲು ಹಕ್ಕಿಗಳನ್ನು ಬಿಟ್ಟರೆ ಬೇರಾವ ಪರವಾನಗಿಯೂ ಇರಲಿಲ್ಲ. ಬೆಳ್ಳಿಯಪ್ಪನಿಗೆ ಶಿಕಾರಿ ಒಂದು ನೆವ. ಮುಖ್ಯವಾಗಿ ಅವನಿಗೆ ನನ್ನೊಂದಿಗೆ ಕಾಡಿನಲ್ಲಿ ಅಲೆದಾಡುವುದೇ ಒಂದು ಮೋಜು. ಅವನೊಂದಿಗೆ ನಾನಿದ್ದ ದಿನಗಳಲ್ಲೇ ಅವನ

ಪರಿಚಯದ ಕ್ರಾಫರ್ಡ್ ಎಂಬ ಒಬ್ಬ ಬ್ರಿಟಿಷರವನು ಅವನನ್ನು ನೋಡಲು ಬಂದ. ವೃತ್ತಿಯಲ್ಲಿ ಕ್ರಾಫರ್ಡ್ ಒಬ್ಬ ಆ್ಯಂಟೀಕ್ ವ್ಯಾಪಾರಿ. ಅಂದರೆ ಪುರಾತನ ವಿಗ್ರಹಗಳನ್ನು ಖರೀದಿಸಿ ಪಾಶ್ಚಾತ್ಯ ದೇಶಗಳಲ್ಲಿ ಹೆಚ್ಚಿನ ಲಾಭಕ್ಕೆ ಮಾರಾಟ ಮಾಡುವುದು ಅವನ ಕಸುಬು.''

ಮಡಿಕೇರಿಗೆ ಬಂದಾಗಲೆಲ್ಲಾ ಅವನು ಆರೆಂಜ್ ಕೌಂಟಿ ರಿಸಾರ್ಟಿನಲ್ಲಿಯೇ ಬಿಡಾರ. ಅಂದು ಬೆಳಗ್ಗೆ ಅವನು ಬೆಳ್ಳಿಯಪ್ಪನನ್ನು ಕುರಿತು, ''ಸುಂಟಿಕೊಪ್ಪದ ಬಳಿ ಇರುವ ಕಾಡಿನಲ್ಲಿ ಒಂದು ಪುರಾತನ ದೇವಾಲಯ ಇರುವುದಂತೆ. ಅಲ್ಲಿನ ಪೂಜಾರಿಯೊಂದಿಗೆ ನಾನು ಮಾತನಾಡಬೇಕು. ಅಲ್ಲಿನ ದಾರಿಗಳ ಪರಿಚಯ ನಿನಗೆ ಚೆನ್ನಾಗಿ ತಿಳಿದಿದೆ. ನನ್ನೊಂದಿಗೆ ಬರಲೇಬೇಕು. ಬೇಕಿದ್ದರೆ ನಿನ್ನ ಅತಿಥಿ ಶರಲೇಖರವರನ್ನೂ ಕರೆದುಕೊಂಡು ಬರಬಹುದು. ಕಾರಿನಲ್ಲಿ ಬೇಕಾದಷ್ಟು ಜಾಗ ಇದೆ'' ಅಂತ ದುಂಬಾಲು ಬಿದ್ದ. ಸ್ನೇಹಕ್ಕೆ ಕಟ್ಟುಬಿದ್ದು ಬೆಳ್ಳಿಯಪ್ಪ ಅವನೊಡನೆ ಹೊರಟ. ಬೇರೇನೂ ಕೆಲಸವಿಲ್ಲದ್ದರಿಂದ ನಾನೂ ಅವರೊಂದಿಗೆ ಹೊರಟೆ.

ಸುಂಟಿಕೊಪ್ಪದಿಂದ ಒಂದು ಕಾಲುದಾರಿಯಲ್ಲಿ ಕಾರು ಸಾಗುತ್ತಿತ್ತು. ಬರುಬರುತ್ತಾ ಆ ದಾರಿಯೂ ಮಾಯವಾಯಿತು. ಕಾರಿನಿಂದ ಇಳಿದು ನಡೆಯುತ್ತಲೇ ಹೊರಟೆವು. ನಾವು ಸೇರಬೇಕಾದ ಜಾಗ ಇಗ್ಗುತ್ತಪ್ಪನ ದೇವಸ್ಥಾನ. ಇಗ್ಗುತ್ತಪ್ಪ ಸುಬ್ರಮಣ್ಯ ದೇವರ ಇನ್ನೊಂದು ರೂಪ. ಸ್ವಲ್ಪ ದೂರ ನಡೆದ ನಂತರ, ದೇವಸ್ಥಾನ ಕಣ್ಣಿಗೆ ಬಿತ್ತು.

ಪುಟ್ಟ ದೇವಸ್ಥಾನವಾದರೂ ಬಹು ಪುರಾತನ ದೇವಸ್ಥಾನದಂತೆ ಕಾಣುತ್ತಿತ್ತು ಅದು. ಹೊರಗಿನ ಪ್ರಾಕಾರದ ಗೋಡೆಗಳೆಲ್ಲಾ ಮುರಿದು ಬಿದ್ದಿದ್ದವು. ದೇವಸ್ಥಾನದ ಕಟ್ಟಡ ಮಾತ್ರ ಕಲ್ಲಿನಿಂದ ಕಟ್ಟಿದ್ದು ಭದ್ರವಾಗಿದ್ದಂತೆ ಕಾಣುತ್ತಿತ್ತು. ಗರ್ಭಗುಡಿಗೆ ಹಳೆಯ ಕಾಲದ ಮರದ ಬಾಗಿಲುಗಳನ್ನು ಜೋಡಿಸಿದ್ದರು. ಬಾಗಿಲಿಗೆ ಹಿತ್ತಾಳೆಯ ಗುಬುಟುಗಳನ್ನು ಹೊಂದಿಸಿದ್ದರು. ಬಾಗಿಲು ಮುಚಿತ್ತು. ಗರ್ಭಗುಡಿಯ ಎಡಪಾರ್ಶ್ವದಲ್ಲಿ ಒಬ್ಬ ವ್ಯಕ್ತಿ (ಬಹುಶಃ ಪೂಜಾರಿ) ನಮ್ಮ ಬರವನ್ನು ಕಾಯುತ್ತಿದ್ದ.

ಬೆಳ್ಳಿಯಪ್ಪ ದೈವಭಕ್ತ. ಹಾಗಾಗಿ ಪೂಜೆಗೆಂದು ತಂದಿದ್ದ ಹಣ್ಣು ಕಾಯಿಗಳನ್ನು ಆ ಪೂಜಾರಿಗೆ ನೀಡಿದ. ಆತ ಗರ್ಭಗುಡಿಯ ಮುಂದೆ ನಿಂತು ಆ ಧಡೂತಿ ಬಾಗಿಲುಗಳನ್ನು ನೂಕಿದ. ಬಾಗಿಲುಗಳು ಕಿರ್ರೆಂದು ಸದ್ದುಮಾಡುತ್ತಾ ತೆರೆದು ಕೊಂಡವು. ನಾವೆಲ್ಲಾ ಒಳಕ್ಕೆ ನಡೆದೆವು. ಅರ್ಚಕರು ಸಾಂಗವಾಗಿ ದೇವರನ್ನು ಪೂಜಿಸಿ ಮಂಗಳಾರತಿ ಕೊಟ್ಟರು. ಮಂಗಳಾರತಿಯ ಬೆಳಕಿನಲ್ಲಿ ನಾನು ಸುತ್ತ ನೋಡಿದೆ. ದಟ್ಟ ಕತ್ತಲಿನಲ್ಲಿ ಮಂಗಳಾರತಿಯ ಮಂದ ಪ್ರಕಾಶ ಗರ್ಭಗುಡಿಯನ್ನು ಬೆಳಗಿತ್ತು. ಅಲಂಕೃತ ದೇವರ ವಿಗ್ರಹದ ಮುಂದೆ ಕಲ್ಲಿನಿಂದ ಕಡೆದಿದ್ದ ನವಿಲಿನ ಪುಟ್ಟ ವಿಗ್ರವೊಂದನ್ನು ಒಂದು ಪೀಠದ ಮೇಲೆ ಇರಿಸಿದ್ದರು. ಪುಕ್ಕ ತೆರೆದುಕೊಂಡಿದ್ದ ನವಿಲು ದೇವರ ಮುಂದೆ ನರ್ತನಮಾಡುತ್ತಿರುವಂತೆ ಭಾಸವಾಗಿತ್ತು.

ಗರ್ಭಗುಡಿಯಿಂದ ಹೊರಗೆ ಬಂದನಂತರ ನಮ್ಮ ಬ್ರಿಟಿಷ್ ಗೆಳೆಯ ಕ್ರಾಫರ್ಡ್ ಬೆಳ್ಳಿಯಪ್ಪನನ್ನು ಕುರಿತು, ''ಆ ನವಿಲಿನ ವಿಗ್ರಹ ಬಹು ಸುಂದರವಾಗಿದೆ. ಖಂಡಿತ ನೂರಿನ್ನೂರು ವರ್ಷಗಳಷ್ಟಾದರೂ ಹಳೆಯದಿರಬೇಕು. ಅದನ್ನು ನನಗೆ ಮಾರುವಂತೆ ಆ ಪೂಜಾರಿಯ ಮನವೊಲಿಸುವೆಯಾ?'' ಅಂತ ಕೇಳಿದ.

ಬೆಳ್ಳಿಯಪ್ಪ ಕೋಪಗೊಂಡಿದ್ದನ್ನು ನಾನು ನೋಡಿಯೇ ಇರಲಿಲ್ಲ. ಅವನು ಈ ಮಾತನ್ನು ಕೇಳಿ ಕನಲಿ ಕೆಂಡವಾದ. ''ಇಂತಹ ಅಪವಿತ್ರ ಭಾವವನ್ನು ಕನಸಿನಲ್ಲಿಯೂ ಯೋಚಿಸಬೇಡ. ಸುಮ್ಮನೆ ಹಿಂತಿರುಗೋಣ'' ಅಂತ ಹೇಳಿ ಸುಮ್ಮನಾದ. ಎಲ್ಲರೂ ಮಾತಿಲ್ಲದೇ ಮೌನದಿಂದ ಹಿಂತಿರುಗಿದೆವು. ನಮ್ಮನ್ನು ಮನೆಯಲ್ಲಿ ಬಿಟ್ಟು ಕ್ರಾಫರ್ಡ್ ತನ್ನ ರಿಸಾರ್ಟಿಗೆ ಹಿಂತಿರುಗಿದ. ಹಿಂತಿರುಗುವ ಮುನ್ನ ಅವನು ಬೆಳ್ಳಿಯಪ್ಪನ ಕ್ಷಮಾಪಣೆಯನ್ನು ಕೇಳುವುದನ್ನು ಮರೆಯಲಿಲ್ಲ.

ಇದಾದ ಮೂರುದಿನಗಳ ನಂತರ ಮಡಿಕೇರಿಯ ತಪೋವನ ಹಾಸ್ಪಿಟಲ್‌ನಿಂದ ಬೆಳ್ಳಿಯಪ್ಪನಿಗೆ ಕರೆಯೊಂದು ಬಂದಿತು. ಕ್ರಾಫರ್ಡ್ ತೀವ್ರ ಜ್ವರದಿಂದ ಆಸ್ಪತ್ರೆಗೆ ದಾಖಲಾಗಿದ್ದ. ಜ್ವರ ಇಳಿಯುವ ಸೂಚನೆಯೇ ಕಾಣದಿದ್ದುದರಿಂದ ಅವನ ಗೆಳೆಯ ಎಂಬ ಕಾರಣದಿಂದ ಡಾಕ್ಟರ್ ಬೆಳ್ಳಿಯನ್ನು ಸಂಪರ್ಕಿಸಿದ್ದರು. ನಾವಿಬ್ಬರೂ ರೋಗಿಯನ್ನು ನೋಡಲು ಹೋದೆವು. ಕ್ರಾಫರ್ಡ್ ನಿತ್ರಾಣನಾಗಿ ಮಲಗಿದ್ದ. ಬೆಳ್ಳಿಯನ್ನು ನೋಡಿದ ಕೂಡಲೇ ಅಳುವುದಕ್ಕೇ ಪ್ರಾರಂಭಿಸಿದ. ಆಮೇಲೆ ಕ್ಷೀಣದನಿಯಲ್ಲಿ, ''ನಾನು ನಿಜಕ್ಕೂ ಪಾಪಿ. ಆ ದಿನ ಸುಂಟಿಕೊಪ್ಪದಿಂದ ನಿಮ್ಮೊಂದಿಗೆ ಹಿಂತಿರುಗಿದ ಮೇಲೆ ನಾನು ಪುನಃ ಆ ಪೂಜಾರಿಯ ಹತ್ತಿರ ಹೋಗಿ ಆ ಕಲ್ಲಿನ ನವಿಲನ್ನು ಖರೀದಿಸಿಯೇ ಬಿಟ್ಟೆ. ಅದನ್ನು ತಂದ ದಿನವೇ ನನಗೆ ಕೆಂಡಾಮಂಡಲ ಜ್ವರ. ಡಾಕ್ಟರುಗಳು ಏನೇನು ಮಾಡಿದರೂ ಜ್ವರ ಇಳಿಯವಲ್ಲದು. ನಿನ್ನೆ ರಾತ್ರಿ ನನ್ನ ಕನಸಿನಲ್ಲಿ, ಆ ನವಿಲನ್ನು ಇವತ್ತು ದೇವಸ್ಥಾನಕ್ಕೆ ಹಿಂತಿರುಗಿಸದಿದ್ದರೆ ಇದೇ ನನ್ನ ಕಡೆಯ ದಿನ ಅಂತ ಯಾರೋ ಹೇಳಿದಂತಾಯಿತು. ದಯವಿಟ್ಟು ನನ್ನನ್ನು ಅಲ್ಲಿಗೆ ಪುನಃ ಕರೆದುಕೊಂಡು ಹೋಗು ಪ್ಲೀಸ್. ಅದನ್ನು ನಾನೇ ಹಿಂತಿರುಗಿಸಬೇಕು'' ಎಂದು ಅಲವತ್ತುಕೊಂಡ ಕ್ರಾಫರ್ಡ್.

ಕ್ರಾಫರ್ಡ್ ಪ್ರಯಾಣಮಾಡುವ ಸ್ಥಿತಿಯಲ್ಲಿ ಇರಲಿಲ್ಲ. ನಾನು ಅವನನ್ನು ಕುರಿತು, ''ನಿನಗೆ ಪಶ್ಚಾತ್ತಾಪ ಆಗಿರುವುದು ಮುಖ್ಯ. ನೀನೇ ಅಲ್ಲಿಗೆ ಹೋಗಬೇಕೆಂದೇನೂ ಇಲ್ಲ, ನಾವಿಬ್ಬರೂ ನಿನ್ನ ಪರವಾಗಿ ಅಲ್ಲಿಗೆ ಹೋಗಿ ಆ ನವಿಲನ್ನು ಹಿಂತಿರುಗಿಸುತ್ತೇವೆ'' ಅಂತ ಹೇಳಿದೆ. ಬಡಪಾಯಿ ಕೇಳಲಿಲ್ಲ. ಬರುವುದಾಗಿ ಹಠ ಹಿಡಿದ. ವಿಧಿಯಿಲ್ಲದೇ ನಾವೆಲ್ಲರೂ ಕಾರಿನಲ್ಲಿ ಸುಂಟಿಕೊಪ್ಪಕ್ಕೆ ಹೊರಟೆವು. ಕ್ರಾಫರ್ಡ್ ಹಿಂದಿನ ಸೀಟಿನಲ್ಲಿ ಶಾಲು ಹೊದ್ದು ಮಲಗಿದ್ದ. ಕಾಲುದಾರಿಯಲ್ಲಿ ಕಾರು ನಿಲ್ಲಿಸಿ, ''ಇಲ್ಲಿಂದ ಮುಂದೆ ನಡೆದೇ ಹೋಗಬೇಕು. ನೀನು ಇಷ್ಟು ದೂರ ಬಂದಿರುವುದು ಸಾಕು. ಕಾರಿನಲ್ಲೇ ಇರು'' ಅಂತ ಕ್ರಾಫರ್ಡನಿಗೆ ಹೇಳಿ ಬೆಳ್ಳಿ ಮತ್ತು ನಾನು ಆ ನವಿಲನ್ನು ಆ ಪೂಜಾರಿಗೆ ತಲುಪಿಸಿ ಬಂದೆವು. ಹಿಂದಕ್ಕೆ ಬಂದು ನಾನು ಕ್ರಾಫರ್ಡನ ಹಣೆ ಮುಟ್ಟಿದೆ. ಧಾರಾಕಾರವಾಗಿ ಬೆವರು ಸುರಿಯುತ್ತಿತ್ತು. ಜ್ವರ ಬಿಟ್ಟಿತ್ತು.

ಶರಲೇಖನ ವೃತ್ತಾಂತವನ್ನು ಉನ್ನಿ, ಜಿಮ್ ಮತ್ತು ಜೆಸ್ಸಿಕಾ ತದೇಕ ಚಿತ್ತದಿಂದ ಕೇಳುತ್ತಿದ್ದರು. ಊಟ ಮುಗಿದಿತ್ತು. ನಾವೆಲ್ಲರೂ ಪರಸ್ಪರ ವಿದಾಯ ಹೇಳಿ ನಮ್ಮ ರೂಮ್ ಸೇರಿದೆವು.

ನಾವು ರೂಮು ಸೇರಿದಾಗ ''ಅಲ್ಲಾ, ಆದ್ಯಾವಾಗ ನನಗೆ ತಿಳಿಯದೇ ಬೆಳ್ಳಿಯನ್ನು ನೋಡಲು ಹೋಗಿದ್ದೆಯೋ?'' ಅಂತ ನಾನು ಶರಲೇಖನನ್ನು ಪ್ರಶ್ನಿಸಿದೆ. ಶರಲೇಖ,

ಅದನ್ನೆಲ್ಲಾ ನಾಳೆ ಹೇಳುತ್ತೇನೆ. ಈಗ ಇಲ್ಲೇ ಹತ್ತಿರದಲ್ಲಿರುವ ಬಾಣಾಸುರ ಅಣೆಕಟ್ಟನ್ನು ನೋಡಲು ಹೋಗೋಣ. ಉನ್ನಿ ಟ್ಯಾಕ್ಸಿ ವ್ಯವಸ್ಥೆ ಮಾಡಿದ್ದಾನೆ. ಜಗತ್ತಿನಲ್ಲೇ ದೊಡ್ಡ ಮಣ್ಣಿನ ಅಣೆಕಟ್ಟಂತೆ ಅದು'' ಎಂದ.

ಅಂದು ಸಂಜೆ ಮತ್ತು ಮಾರನೆಯ ಬೆಳಗ್ಗೆ ವೇನಾಡಿನ ಆಸುಪಾಸನ್ನೆಲ್ಲಾ ಸುತ್ತಾಡಿದೆವು. ಮನಂತವಾಡಿಯಲ್ಲಿನ ವಲ್ಲಿಯೂರ್ಕ್ಕಾವು ಭಗವತಿ ದೇವಸ್ಥಾನ ಬಹು ಚೆನ್ನಾಗಿತ್ತು. ದುರ್ಗೆಯ ಮೂರು ಅವತಾರಗಳಾದ ಭದ್ರಕಾಳಿ, ವನದುರ್ಗೆ ಹಾಗೂ ಜಲದುರ್ಗೆ ದೇವತೆಗಳ ಮೂರ್ತಿಗಳು ನಿಜಕ್ಕೂ ಭಕ್ತಿ ಶ್ರದ್ಧೆಯನ್ನು ಮೂಡಿಸುವಂತಿದ್ದವು. ಉನ್ನಿ ಕೂಡಲೇ ನಮ್ಮೊಂದಿಗೆ ಬಂದಿದ್ದ. ದೇವರ ದರ್ಶನ ಮಾಡಿ ಪ್ರಾಕಾರದಲ್ಲಿ ಸ್ವಲ್ಪ ಹೊತ್ತು ಕುಳಿತಾಗ ಉನ್ನಿ ಮಾತನಾಡಲು ಪ್ರಾರಂಭಿಸಿದ.

''ಜಿಮ್ ಮತ್ತು ಜೆಸ್ಸಿಕಾ ಇವತ್ತು ಬೆಳಗ್ಗೆ ದೆಹಲಿಗೆ ಹೊರಟುಬಿಟ್ಟರು. ಅದರ ಯಶಸ್ಸೆಲ್ಲಾ ಶರಲೇಖನಿಗೇ ಸೇರಬೇಕು'' ಅಂತ ಹೇಳಿದ.

''ನಿಮ್ಮ ಮಾತು ನನಗೆ ಅರ್ಥವೇ ಆಗದು. ಸ್ವಲ್ಪ ಬಿಡಿಸಿ ಹೇಳಿ'' ಅಂತ ನಾನು ವಿನಂತಿಸಿದೆ. ಉನ್ನಿ ತನ್ನ ವಿವರಣೆ ಶುರು ಮಾಡಿದ.


''ಶಿಲಾ ಶಿಲ್ಪಿಯಾದ ಈ ಜೆಸ್ಸಿಕಾಗೆ ಈ ಭಗವತಿ ದೇವಸ್ಥಾನದ ಉಗ್ರಾಣದಲ್ಲಿರುವ ಜಲದುರ್ಗೆ ಒಂದು ಬಿಡಿ ಮೂರ್ತಿಯ ಮೇಲೆ ಕಣ್ಣಿತ್ತು. ಅದನ್ನು ಖರೀದಿಸಿ ಅಮೆರಿಕೆಗೆ ಸಾಗಿಸುಕ್ಕೆ ಎಲ್ಲಾ ಏರ್ಪಾಟುಗಳನ್ನೂ ಮಾಡಿದ್ದು ನನಗೆ ತಿಳಿದುಬಂತು. ನಮ್ಮ ದೇಶದ ಅಮೂಲ್ಯ ವಿಗ್ರಹಗಳನ್ನು ಈ ರೀತಿ ಕಳೆದುಕೊಳ್ಳುವುದು ನನಗೆ ಸಮ್ಮತವಾಗಲಿಲ್ಲ. ಪೋಲೀಸರಿಗೆ ತಿಳಿಸೋಣವೆಂದರೆ ಈಕೆಗೆ ಡಿಪ್ಲೊಮ್ಯಾಟಿಕ್ ಇಮ್ಯೂನಿಟಿ ಇದೆ. ಹಾಗಾಗಿ ಶರಲೇಖನ ಸಲಹೆ ಕೇಳಿದೆ. ಅವ ಇಲ್ಲಿಗೆ ಬಂದು ಅವರೊಂದಿಗೆ ತನ್ನ ಅನುಭವವನ್ನು ಹಂಚಿಕೊಂಡ ಮೇಲೆ ದೇವತೆಯ ಶಾಪದ ಮುಂದೆ ತಮ್ಮ ಇಮ್ಯೂನಿಟಿ ನಡೆಯುವುದಿಲ್ಲವೆಂದು ಮನದಟ್ಟಾಗಿ ಇಲ್ಲಿಂದ ಕಂಬಿಕಿತ್ತರು'' ಎಂದು ವಿವರಿಸಿದ ಉನ್ನಿ.

''ಅರೆ ನನಗೆ ತಿಳಿಯದೇ ನೀನು ಯಾವಾಗ ಮಡಿಕೇರಿಗೆ ಹೋಗಿದ್ದೆಯೋ?'' ಅಂತ ನಾನು ಶರಲೇಖನನ್ನು ಪ್ರಶ್ನಿಸಿದೆ.

''ಮಡಿಕೇರಿನೂ ಇಲ್ಲ, ಏನೂ ಇಲ್ಲ. ಖ್ಯಾತ ಶಿಕಾರಿ ಕೆನ್ನೆತ್ ಆ್ಯಂಡರ್ಸನ್ ಇಪ್ಪತ್ತರ ದಶಕದಲ್ಲಿ ನಡೆದ ಘಟನೆಯನ್ನು ಆಧರಿಸಿ, ದ ಕ್ವೀರ್ ಸೈಡ್ ಆಫ್ ಥಿಂಗ್ಸ್ ಅಂತ ಒಂದು ಕಥೆ ಬರೆದಿದ್ದ. ಅದನ್ನು ಇಪ್ಪತ್ತೊಂದನೆಯ ಶತಮಾನಕ್ಕೆ ಆಮದು ಮಾಡಿ ಒಂದು ಅನುಭವ ಹೆಣೆದೆ ಅಷ್ಟೇ. ಹೇಗಿದ್ದರೂ ಈಗ ಡಿಪ್ಲೊಮ್ಯಾಟಿಕ್ ಇಮ್ಯೂನಿಟಿ ಸೀಜನ್ ಅಲ್ಲವೇ'' ಎಂದು ನಕ್ಕ ಶರಲೇಖ.

''ಓಹೋ, ದೇವಯಾನಿ ಖೋಬ್ರಗಾಡೆ ಬಗ್ಗೆ ಹೇಳ್ತಿದೀಯಾ?'' ಅಂತ ಉನ್ನಿ ಕೇಳಿದ. ಶರಲೇಖ ತಕ್ಷಣ ಉತ್ತರಿಸಲಿಲ್ಲ. ಆಮೇಲೆ ನಿಧಾನವಾಗಿ, ''ದೇವಯಾನಿ? ದಾನವರ ಗುರು ಶುಕ್ರಾಚಾರ್ಯರ ಮಗಳಲ್ಲವೇನೋ ಆಕೆ?'' ಎಂದ ಶರಲೇಖ.

✤



# ಪೊರಕೆ ಪುರಾಣ

**- ಅ.ರಾ. ಮಿತ್ರ**

**ನ**ಮ್ಮ ಸಮಾಜದಲ್ಲಿ ಮಹಿಳೆಯರ ಆತ್ಮರಕ್ಷಣೆಗೆ ಮತ್ತು ಜನರಿಗೆ ಭಯ ಹುಟ್ಟಿಸಲು ನಿರ್ಮಾಣಗೊಂಡ ಈ ಪೊರಕೆ ಮನೆಯ ಕಸ ಗುಡಿಸುವುದರ ಜತೆಗೆ ನೀತಿಗೆಟ್ಟವರ ದುರಭಿಮಾನದ ಕಸವನ್ನೂ ಗುಡಿಸಿಹಾಕಲು ಸಮರ್ಪಕವಾದ ಒಂದು ಕಡಿಮೆ ಖರ್ಚಿನ ಆಯುಧವಾಗಿದೆ. ಪೊರಕೆ ಅಂಥ ಹಿಂಸಾತ್ಮಕ ಆಯುಧವೇನೂ ಅಲ್ಲ, ಆದರೂ ಹೆಂಗಸರ ಕೈಯಲ್ಲಿ ಈ ಆಯುಧವಿದ್ದಾಗ ಸಭ್ಯರು, ಅಸಭ್ಯರು ಎಲ್ಲರೂ ಅದಕ್ಕೆ ಹೆದರುತ್ತಾರೆ. ಈ ವಿಷಯವನ್ನು ನಮ್ಮ ಸಿನಿಮಾಗಳಲ್ಲಿ ನಿದರ್ಶನಪೂರ್ವಕವಾಗಿ ದಾಖಲು ಪಡಿಸಿವೆ. ಈ ಅಸ್ತ್ರವನ್ನು ಝಳಪಿಸಿದಾಗ ಎಲ್ಲರೂ ಕ್ಷಮೆ ಕೇಳಿ ಓಡಿಹೋಗುತ್ತಾರೆ. ಮಹಿಳೆಯರು ಈ ನಿರ್ಬಲ ಅಸ್ತ್ರವನ್ನು ಹೇಗೆ ಭಯಾನಕ ಅಸ್ತ್ರವನ್ನಾಗಿ ಪರಿವರ್ತಿಸಿದರು ಎಂಬುದಕ್ಕೆ ನಮ್ಮಲ್ಲಿ ಸರಿಯಾದ ಪುರಾವೆಗಳಿಲ್ಲ. ಋಷಿ ಶಾಪದಿಂದ ಜೊಂಡುಗಳಿಗೂ ಒನಕೆಯ ಬಲ ಬಂದು ಯಾದವ ವಂಶದ ಪತನಕ್ಕೆ ನಾಂದಿ ಹಾಡಿತು ಎಂಬುದನ್ನು ಮಹಾಭಾರತದಲ್ಲಿ ತಿಳಿದಿದ್ದೇವೆ. ಪೊರಕೆಯ ಪೂರ್ವಾಶ್ರಮದ ಹೆಸರು ಹುಲ್ಲು ಅಥವಾ ಇಷಿಕ. ಅಶ್ವತ್ಥಾಮನು ಈ ಹುಲ್ಲು ಕಡ್ಡಿಗೇ ಸತ್ವ ತುಂಬಿ ಉತ್ತ್ರೆಯ ಗರ್ಭವನ್ನೇ ಕತ್ತರಿಸಲು ಪ್ರಯತ್ನಿಸಿದ ಸಂಗತಿಯೂ ಮಹಾಭಾರತದಲ್ಲಿ ತಿಳಿದು ಬರುತ್ತದೆ. ಹುಲ್ಲು ಅಥವಾ ಪೊರಕೆ ಕಡ್ಡಿ ಸಾಮಾನ್ಯ ಜನ ವರ್ಗವನ್ನು ಪ್ರತಿನಿಧಿಸುವ ಒಂದು ನಿರ್ಬಲ ಅಸ್ತ್ರ. ಅದನ್ನು ಹೆಂಗಸರು ತಮ್ಮ ಅಸ್ತ್ರವಾಗಿ ಬಳಸಿಕೊಂಡು ಗಂಡು ಕುಲವನ್ನೆಲ್ಲಾ ಒಂದು ಭಯದ ಆವರಣದಲ್ಲಿ ನಿಲ್ಲಿಸಿ ನಿಯಂತ್ರಣ ಸಾಧಿಸುತ್ತಿದ್ದಾರೆ.

**ಸಣ್ಣ ಪೊರಕೆಯೊಂದು ದೆಹಲಿಯ ಮೂಲಕ ಇಡೀ ರಾಷ್ಟ್ರಕ್ಕೆ ಎಚ್ಚರಿಕೆಯ ಗಂಟೆಯನ್ನು ಬಾರಿಸಿರುವುದು ಒಂದು ಅಪೂರ್ವ ಘಟನೆ...**

ಪೊರಕೆ-ಚಮರಿ ಈ ಎರಡು ಶಬ್ದಗಳು ಕುವೆಂಪು ಅವರ ದೃಷ್ಟಿಯಲ್ಲಿ ಬಡತನ ರಾಜವೈಭವಗಳ ಸಂಕೇತಗಳಾಗಿವೆ.

*ಚವರಿ ಹಿಡಿದರೆ ಮೇಲೆ?*

*ಪೊರಕೆ ಹಿಡಿದರೆ ಕೀಳೆ?*

ಎಂದು ಕುವೆಂಪು ಅವರ ಜಲಗಾರ ಪ್ರಶ್ನಿಸುತ್ತಾನೆ. ಚವರಿ ಎಂಬುದು ಚಮರೀ ಮೃಗದ ಮೈಗೂದಲಿನಿಂದ ಮಾಡಿದ ಒಂದು ಬೀಸಣಿಗೆ. ರಾಜರುಗಳಿಗೆ ಈ ಚಾಮರ ಸೇವೆಯನ್ನು ರಾಜದೂತರು ರಾಜದೂತಿಯರು ಮಾಡಿ ಅವರ ಸೆಖೆಯನ್ನು ಹೋಗಲಾಡಿಸುತ್ತಾರೆ.

ಅರಮನೆಗಳಲ್ಲಿ ರಾಜರ ಎಡಬಲಗಳೆಡರ ಬದಿಯಲ್ಲಿ ನಿಂತು ರಾಜಸೇವಕಿಯರು ಬೀಸುವುದನ್ನು ಕಂಡಿರಬಹುದು. ಕುವೆಂಪು ಅವರ ಪ್ರಕಾರ ಬೀದಿಯ ಕಸಗುಡಿಸುವ 'ಜಲಗಾರ'ನ ಪೊರಕೆ ಕೀಳೇನಲ್ಲ. ಎರಡೂ ಸಮಾನ ಗೌರವಕ್ಕೆ ಪಾತ್ರವಾಗಿವೆ. ಆದರೆ 'ಗೃಹಚಾಮರ' ಎನ್ನಿಸಿಕೊಂಡಿರುವ ಪೊರಕೆಯ ಸೇವೆಯನ್ನು ಯಾರೂ ಬಯಸುವುದಿಲ್ಲ. ಕನ್ನಡದಲ್ಲಿ ಪೊರಕೆಯ ಕುರಿತು ವಿಚಾರಪೂರ್ಣವಾಗಿ ಬರೆದವರೆಂದರೆ ಅ.ನ.ಕೃ. ಅವರು ಪೊರಕೆಯ ಸಮಾಜಸೇವೆಯನ್ನು ಸ್ವಚ್ಛತಾ ಪ್ರಜ್ಞೆಯನ್ನು ತುಂಬಾ ಹೊಗಳಿದ್ದಾರೆ.

ಪೊರಕೆಯನ್ನು ಲಾಂಛನವನ್ನಾಗಿ ಮಾಡಿಕೊಂಡ ಆಮ್ ಆದ್ಮಿ ಪಕ್ಷದ 'ಕ್ರೇಜಿ'ವಾಲ್ ಅವರು ಈ ಹೊಸ ಪೊರಕೆ ಹಿಡಿದು ದೆಹಲಿಯ ಕಾಂಗ್ರೆಸ್ಸನ್ನು ಗುಡಿಸಿಹಾಕಿದ್ದಾರೆ. ಸಣ್ಣ ಪೊರಕೆಯೊಂದು ದೆಹಲಿಯ ಮೂಲಕ ಇಡೀ ರಾಷ್ಟ್ರಕ್ಕೆ ಎಚ್ಚರಿಕೆಯ ಗಂಟೆಯನ್ನು ಬಾರಿಸಿರುವುದು ಒಂದು ಅಪೂರ್ವ ಘಟನೆಯಾದ್ದರಿಂದ ಇದರ ಯೋಗ್ಯತೆಯನ್ನು ಪರೀಕ್ಷಿಸುವ ಆಸೆ ನನ್ನದಾಗಿದೆ.

ಪೊರಕೆಯ ಕೆಲಸ ತಾನೆ ಏನು? ನಿರ್ದಾಕ್ಷಿಣ್ಯವಾಗಿ ಕಸವನ್ನೆಲ್ಲ ಗುಡಿಸಿಹಾಕುವುದು ತಾನೆ? ಈ ಪೊರಕೆ ವಿದೇಶಿ ಬ್ಯಾಂಕುಗಳಲ್ಲಿ ಕಸವಾಗಿ ಬಿದ್ದಿರುವ ಭಾರತೀಯರ ಕಪ್ಪು ಹಣವನ್ನು ನಮ್ಮ ದೇಶಕ್ಕೆ ತರಲು ಸಹಾಯ ಮಾಡುತ್ತದೆಯೆ? 'ಜಮಾ'ದಾರನ ಸುಳಿವು ಮೂಸಿ, ಹಿಡಿದು ಕೊಡಬಲ್ಲದೆ? ಕೊಟ್ಟರೂ ನಮ್ಮ ದೇಶೀಯ ಕೇಂದ್ರೀಯ ರಾಜಕಾರಣಿಗಳು ಮತ್ತು ಅಧಿಕಾರಿಗಳು ಸರಕಾರದ ಆಜ್ಞೆಯನ್ನು ಅಮಲುಗೊಳಿಸುತ್ತಾರೆಯೆ? ಇದು ಬಯಲಾದರೆ ಎಲ್ಲ ರಾಜಕೀಯ ಪಕ್ಷಗಳ ಬಣ್ಣ ಬದಲಾಗುವುದಿಲ್ಲವೆ? ಇಂಥ ಕರಿಯ ಕೊರಳಪಟ್ಟಿಯ ಜನರನ್ನೆಲ್ಲ ಬಂಧಿಸಲು ನಮ್ಮ ದೇಶದ ಕಾರಾಗೃಹಗಳು ಸಾಕಾಗುತ್ತವೆಯೆ?

ಇವರದಿರಲಿ ಇನ್ನು ಕಾರ್ಪೊರೇಟ್ ಧನಿಕರ ಪಾಡೇನು? ಸರಕಾರಿ ಅಧಿಕಾರಿಗಳೂ ಸಿಕ್ಕಿಬೀಳುವ ಅಪಾಯ ಕಾದಿರುವುದಿಲ್ಲವೆ? ಪ್ರಪಂಚದ ನಾನಾ ಭಾಗಗಳಲ್ಲಿ ವ್ಯಾಸಂಗ ಮಾಡುತ್ತಿರುವ ಈ ಕರಿಯ ಬಂಟರ ಮಕ್ಕಳುಗಳ ಪಾಡೇನು? ಪಾಪ, ಬೆಳಗಾದರೆ ಶ್ರೀಮಂತರಾಗಲಿರುವ ಉತ್ಸಾಹಿಗಳ ಗತಿಯೇನು? ಅವರ ರಾಷ್ಟ್ರಭಕ್ತಿಯ ಗತಿಯೇನು? ಸರಕಾರ ಗೊತ್ತಿದ್ದೂ ಸುಮ್ಮನಿರುವುದರಿಂದ ಆ ಮಸಿ ಹತ್ತಿದ ಧನಿಕರ ವಿಳಾಸ ಹೇಗೆಂದು ಕಂಡುಹಿಡಿಯುವುದು? ಆಮ್ ಆದ್ಮಿಯಂಥ ಪ್ರಾಮಾಣಿಕತೆಯನ್ನು ಘೋಷಿಸುತ್ತಿರುವ ಪಕ್ಷದ ಭಕ್ತರು ನಾಳೆ ಹಿರಿಯಕ್ಕನ ದಾರಿಯನ್ನೇ ತುಳಿಯುವುದಿಲ್ಲ ಎಂದು ಗ್ಯಾರಂಟಿ ಎಲ್ಲಿ?

ನನಗೆ ದಿಗ್ಭ್ರಮೆ! ಪೊರಕೆಯ ಒಂದೊಂದು ಕಡ್ಡಿಯೂ ಬೇರೆಬೇರೆಯಾಗಿ ನನ್ನ ಮೇಲೆ ಉದುರುತ್ತಿದೆ! ನಾನು ಹೇಗೆ ಈ ಹೊಡೆತದಿಂದ ಪಾರಾಗಲಿ? ಈ ಪೊರಕೆ ಹಿಡಿದವರೇ ಮುಂದೆ ಬಂದು ಅಳಿದುಳಿದ ಕಪ್ಪು ಹಣವನ್ನು ವಿದೇಶೀ ಬ್ಯಾಂಕಿನ ಹಜಾರದೊಳಗೆ ತರಲು ಯತ್ನಿಸುತ್ತಿದ್ದಾರಲ್ಲ, ಅವರ ಕಾಟ ತಪ್ಪಿಸಿಕೊಳ್ಳಲು ನಾನು ಯಾರ ಜೊತೆ ಸೇರಲಿ? ಏನು ಮಾಡಲಿ, ಬೇಡ 'ಇಟ್ಹಾಂಗೆ ಇರುವೆನು ಹರಿಯೆ' ಎಂದು ಹಾಡುತ್ತಾ ಕ್ರೈಕಟ್ ಬಾಯ್

ಮುಚ್ ಎಂಬ ಮಕ್ಕಳ ಸೂತ್ರವನ್ನು ಪಠಿಸುತ್ತೀನಿ. ಬಹು ಹಿಂದೆಯೇ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರು ಲೋಕದಲ್ಲಿ ಕಸವೇ ತುಂಬಿದೆಯೆಂದು ಗೋಳಾಡುತ್ತಾ

*ಈ ಜಗವೆಂಬುದೊಂದು*

*ಕಸತುಂಬಿದರಮನೆಯೋ*

*ಯುಗಯುಗದಿ ಒಂದೊಂದು*

*ಹಿರಿಯ ಪೊರಕೆಯು ಬಂದು*

*ಗುಡಿಸುವುದು ಈ ಮನೆಯ*

ಎಂಬ ಭರವಸೆಯನ್ನು ನೀಡಿದ್ದಾರೆ. ಈಗ ಒಂದು ರಾಜಕೀಯ ಪಕ್ಷವೇ ಗಂಡು ಹೆಣ್ಣೆಂಬ ಭೇದವಿಲ್ಲದೆ ಕಿರುಪೊರಕೆಗಳನ್ನು ಹಿಡಿದು ನಿಂತಿರುವಾಗ ನಮ್ ರಾಷ್ಟ್ರಕ್ಕೆ ಎಲ್ಲಿ ಚಿತ್ತ ಶುದ್ಧಿಯಾದೀತೊ, ಜನ ಎಲ್ಲಿ ನಿಜವಾಗಿ ಸುಧಾರಿಸಿಬಿಡುತ್ತಾರೋ ಎಂಬ ಹೆದರಿಕೆ ಪ್ರಧಾನ ರಾಜಕೀಯ ಪಕ್ಷಗಳಿಗಿರುವಂತೆ ನನಗೂ ಇದೆಯಲ್ಲ ಏನು ಮಾಡಲಿ?

✤

---

**ಕೋರವಂಜಿ ಅಪರಂಜಿ ಟ್ರಸ್ಟ್ ಅರ್ಪಿಸುವ**

**ಅಪರಂಜಿ ಸಂಜೆ**

**ಡಾ. ಓಂಪ್ರಕಾಶ್ ಅವರಿಂದ ಅನಿಸಿಕೆಗಳು**

**ವಿಷಯ**

**ಸಾಹಿತಿ ರಾ.ಶಿ.ಯವರ ವೈದ್ಯಕೀಯ ಆಯಾಮ**

**ಸೋಮವಾರ, 27ನೇ ಜನವರಿ 2014 ಸಂಜೆ 6.30ಕ್ಕೆ**



**ಸ್ಥಳ**

**ಗಾಂಧೀ ಸಾಹಿತ್ಯ ಸಂಘ**

**ಎಂಟನೇ ಅಡ್ಡರಸ್ತೆ, ಮಲ್ಲೇಶ್ವರಂ**

**ಬೆಂಗಳೂರು - 560 003**



ಎಲ್ಲರಿಗೂ ಸುಸ್ವಾಗತ

## ಶ್ರೀ ನೀಲತ್ತಹಳ್ಳಿ ಕಸ್ತೂರಿ



ಮೊದಲಿನಿಂದಲೂ ಕೊರವಂಜಿ ಅಪರಂಜಿ ಅಭಿಮಾನಿಗಳಾಗಿದ್ದ ಶ್ರೀ ನೀಲತ್ತಹಳ್ಳಿ ಕಸ್ತೂರಿಯವರು ಇತ್ತೀಚೆಗೆ ನಮ್ಮನ್ನಗಲಿದ್ದಾರೆ. ಅವರ ಉಸ್ತುವಾರಿಯಲ್ಲಿದ್ದ ಬೆಂಗಳೂರಿನ ಮಲ್ಲೇಶ್ವರದ ಗಾಂಧೀ ಸಾಹಿತ್ಯ ಸಂಘವನ್ನು ನಮ್ಮ ಅನೇಕ ಕಾರ್ಯಕ್ರಮಗಳಿಗೆ ಬಿಟ್ಟುಕೊಟ್ಟಿದ್ದಾರೆ. ಸ್ವತಃ ರಾಶಿಯವರೊಂದಿಗೆ ಒಡನಾಟಹೊಂದಿದ್ದ ಕಸ್ತೂರಿಯವರು ಅಪರಂಜಿಗೆ ಅನೇಕ ಲೇಖನಗಳನ್ನೂ ಕೊಟ್ಟಿದ್ದಾರೆ. ಅವುಗಳ ಪೈಕಿ ಒಂದು ಲೇಖನವನ್ನು ಇಲ್ಲಿ ಕೊಡಲಾಗಿದೆ. ಹಾಸ್ಯ ಬ್ರಹ್ಮ ಟ್ರಸ್ಟ್ 18-6-1995ರಂದು ಉದ್ಘಾಟನೆಯಾದದ್ದೂ ಗಾಂಧೀ ಸಾಹಿತ್ಯ ಸಂಘದಲ್ಲೇ. ಆ ಸಮಯದಲ್ಲಿ ಕಸ್ತೂರಿಯವರೂ ಹಾಜರಿದ್ದು ಹರಸಿದ್ದರು. ಕೊರವಂಜಿ ಅಪರಂಜಿ ಟ್ರಸ್ಟ್ ಹಾಗೂ ಹಾಸ್ಯ ಬ್ರಹ್ಮ ಟ್ರಸ್ಟ್ ಇವುಗಳ ಕಾರ್ಯಕ್ರಮಗಳಲ್ಲಿ ಅವರೂ ಭಾಗವಹಿಸುತ್ತಿದ್ದರು ಮತ್ತು ಈ ಎರಡೂ ಟ್ರಸ್ಟ್‌ಗಳ ಸದಸ್ಯರ ಉತ್ಸಾಹಕ್ಕೆ ಸದಾ ಪ್ರೋತ್ಸಾಹ ಕೊಡುತ್ತಿದ್ದರು. ಗಾಂಧೀವಾದಿಗಳಾಗಿದ್ದ ಕಸ್ತೂರಿಯವರು ತೀರಾ ಸರಳ ಬದುಕು ನಡೆಸಿದವರು. ಕೊರವಂಜಿ ಅಪರಂಜಿ ಟ್ರಸ್ಟ್ ಮತ್ತು ಹಾಸ್ಯಬ್ರಹ್ಮ ಟ್ರಸ್ಟ್ ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತದೆ.

# ಅಮ್ಮ - ಮಗಳು

**- ನೀಲತ್ತ ಹಳ್ಳಿ ಕಸ್ತೂರಿ**

**ಕೊ**ರವಂಜಿ ಅಂತ ಒಬ್ಬ ಕಣಿ ಹೆಂಗಸು ಇದ್ದಳು. ತಿಂಗಳು ತಿಂಗಳೂ ತಪ್ಪದೇ ಬರುತ್ತಿದ್ದಳು. ಆಕೆ ಇದ್ದುದು ಇಪ್ಪತ್ತೈದು ವರ್ಷ. ಒಂದು ತಿಂಗಳೂ ಬರುವುದು ತಪ್ಪಿಸಲಿಲ್ಲ. ಒಂದು ತಿಂಗಳೂ ತಡ ಆಗಲಿಲ್ಲ. ಪ್ರತಿ ತಿಂಗಳ ಮೊದಲನೆಯ ದಿನ ಕರಾರುವಕ್ಕಾಗಿ ಹಾಜರು. ಸಂಬಳವಾದರೂ ಒಮ್ಮೆ ಇಮ್ಮೆ ತಪ್ಪೀತು, ತಡವಾದೀತು. ಕೊರವಂಜಿ ಹಾಗಲ್ಲ. ತಪ್ಪದೆ ಕಾಲಕ್ಕೆ ಸರಿಯಾಗಿ ಹಾಜರಾಗುತ್ತಿದ್ದಳು.

ಕೊರವಂಜಿ ಕಣಿ ಹೇಳುತ್ತಿದ್ದಳು. ಅಂದರೆ ಕಾಗಕ್ಕ ಗುಬ್ಬಕ್ಕ ಕತೆ ಅಲ್ಲ, ಆಗದ ಹೋಗದ ಭವಿಷ್ಯವಲ್ಲ, ಕಣಿ ಅಲ್ಲ - ಅವಳು ಹೇಳುತ್ತಿದ್ದ ಕಣಿ, ನಿತ್ಯ ಜೀವನದ ಸಂಗತಿಗಳು. ಬಾಳಿನ ಬಿಗುವನ್ನು ಸಡಿಲಿಸಿ ಗಂಟಿಕ್ಕಿಕೊಂಡ ಮುಖಗಳನ್ನು ಬಿಡಿಸಿ ನಗಿಸುವಂತಹ ಕಣಿ. ಬಾಳು ಸನಿಯ, ಸಾವು ದೂರ ಅಥವಾ ನೋವು ಇಲ್ಲವೇ ಗೋಳು ದೂರ ಎಂದು ತಿಳಿಸುವಂಥ ಕಣಿ ಹೇಳುತ್ತಿದ್ದಳು.

ನಗುವುದು ಸಹಜ, ಅದು ಪ್ರಕೃತಿ, ನಗಿಸುವುದು ಹಾಗೂ ಇತರರು ನಕ್ಕಾಗ ತಾನೂ ನಗುವುದು, ಸುತ್ತಮುತ್ತಲೆಲ್ಲಾ ನಗೆಯ ಮಲ್ಲಿಗೆಯನ್ನು ಚೆಲ್ಲುವುದು. ಮುಖಗಳ ಮೇಲೆ ದುಕ್ಕಗಟ್ಟಿದ ಗೆರೆಗಳನ್ನು ಬಿಡಿಸುವುದು ಇದೇ ಸಂಸ್ಕೃತಿ. ತನಗೆ ನೋವು ಆದರೂ, ಅದನ್ನು ಜಗಕ್ಕೆ ಹರಡದೆ, ಕೇವಲ ನೆಲವನ್ನೇ ನೀಡುವುದು ಸುಸಂಸ್ಕೃತಿ.

ಕೊರವಂಜಿ ಕಣಿ ಹೆಂಗಸು. ಆದರೂ ಅರಳದು ಇಂಥ ಸುಸಂಸ್ಕೃತಿ. ನನಗೆ ತಿಳಿದಂತೆ, ಆಕೆ ಅತ್ತದ್ದೇ ಇಲ್ಲ, ಒಂದು ಸಲ ಬಿಟ್ಟು, ಆಕೆ ಅತ್ತದ್ದು ಒಂದೇ ಸಲ. ಅದು ಭಾರತವೆಲ್ಲಾ ಅತ್ತಾಗ, ಭಾರತ ಏಕೆ ಜಗತ್ತೇ ಅತ್ತಾಗ. 1948ರ ಫೆಬ್ರವರಿಯಲ್ಲಿ ಕೊರವಂಜಿ ಬಂದದ್ದು

ಅಳುಮುಂಜಿಯಾಗಿ, ಭಾರತದ ಬಾಪು, ಜಗತ್ತಿನ ದಾರಿ ದೀಪ ಆರಿ ಹೋದಾಗ. ಕೊರವಂಜಿ ''ನಾನು ಈಗ ಅಳುಮುಂಜಿ ಎಂದು ಕಣ್ಣೀರು ಹಾಕುತ್ತಾ ಬಂದಿದ್ದಳು.''

''ಹೀಗೆ ಇಪ್ಪತ್ತೈದು ವರ್ಷ ಬಾಳಿದಳು. ನಗಿಸಿ ನಲಿದಳು. ನಗಿಸುವವರನ್ನು ಸೃಷ್ಟಿಸಿದಳು. ನಗೆಯ ಪರಂಪರೆಯನ್ನೇ ಆರಂಭಿಸಿದಳು. ಇಪ್ಪತ್ತೈದು ಆಯಿತು. ಇದ್ದಕ್ಕಿದ್ದಂತೆ ಹೊರಟೇ ಹೋದಳು. ನಿಸೂರಾಗಿ ಹೊರಟುಹೋದಳು.'' ''ನನಗೆ ಪೇಟೆ ಸಹವಾಸ ಸಾಕು, ಕಾಡಿಗೇ ಹೋಗುತ್ತೀನಿ'' ಅಂತ ನಗುನಗುತ್ತಲೇ ಟಾಟಾ ಹೇಳಿ ಮಾಯವಾದಳು. ಹೇಗೆ ಬಂದಳೋ ಹಾಗೆಯೇ ಹೋದಳು. ಅಯ್ಯೋ ಕೊರವಂಜಿ, ನೀನು ಇದ್ದದ್ದೇ ಗೊತ್ತಾಗಲಿಲ್ಲವಲ್ಲೆ'' ಎಂದು ಎಷ್ಟೋ ಜನ ದೇಶಾವರಿ ಪೆದ್ದು ನಗೆ ಸೂಸಿದರು ಆಗ ಅದಕ್ಕೂ ನಕ್ಕಿರಬೇಕು. ಅಯ್ಯೋ ಹೋಗಯ್ಯ, ಕನ್ನಡ ದಾಸಯ್ಯ, ನಿನಗೆ ನಾನೇಕೆ ಬೇಕು? ನಿನ್ನ ನಾಡಿಗಿಂತ ನನಗೆ ಕಾಡೇ ಚಂದ'' ಎಂದುಕೊಂಡಿರಬೇಕು. ಕೈಬೀಸಿಕೊಂಡು ನಡೆದೇ ಬಿಟ್ಟಳು.

ಆಗ ಹಲವರಿಗಾದರೂ ಹೊಟ್ಟೆ ಚುರ್ ಎಂದಿತ್ತು. ''ಅಯ್ಯೋ, ಕೊರವಂಜಿ ಹೋಗೇ ಬಿಟ್ಟಳಲ್ಲ, ನಮಗೆಲ್ಲ ಎಂಥ ಮಲ್ಲಿಗೆ ಕಂಪು ಹಂಚುತ್ತಿದ್ದಳು, ರುಚಿರುಚಿ ಗರಿಗರಿ ಕುರುಕಲು ತಿಂಡಿ ಕೊಡುತ್ತಿದ್ದಳು. ಕೊರವಂಜಿ ಕಾಡಿಗೆ ಹೋದ ಮೇಲೆ ನಮಗೆ ನಾಡೇ ಕಾಡು'' ಎಂದು ಕೊರಗಿದವರೂ ಉಂಟು. ಕನ್ನಡಿಗರ ಹಣೇಬರಹವೇ ಇಷ್ಟು, ನಗುವುದಕ್ಕೆ ಬಾರದು, ನಗಿಸುವವರು ಬಂದರೆ ಅವರನ್ನು ಬಾಳಗೊಡರು. ಅಳುಮುಂಜಿಯೇ ನಮಗೆ ಖಾಯಂ! ಹೀಗೆ ಪೇಚಾಡುತ್ತಿದ್ದುದೂ ಉಂಟು.

ಆದರೆ ''ಅಷ್ಟು ನಿರಾಸೆ ಬೇಕಾಗಿಲ್ಲ. ಕೊರವಂಜಿ ಹೋದಳು ನಿಜ, ಆದರೆ ನಾನು ಅವಳ ಮಗಳು ಇದೋ ಬಂದಿದ್ದೇನೆ, ಅಪರಂಜಿ! ಅಮ್ಮನಷ್ಟು ಅಲ್ಲಾವಾದರೂ, ಸಾಕಷ್ಟು ಅಂಥದೇ ಕಣಿ ನಾನೂ ಹೇಳುತ್ತೀನಿ. ಅಮ್ಮನ ನಗೆಯನ್ನೇ ಮತ್ತೆ ನೆನಪುಮಾಡಿಕೊಡುತೀನಿ'' ಹೀಗೆ ಭರವಸೆ ಕೊಡುತ್ತ ಬಂದಿದಾಳೆ. ಇವಳೂ ಏನು ಕಡಿಮೆ ಇಲ್ಲ, ಅಮ್ಮ ಕೊರವಂಜಿ ಮಗಳು ಅಪರಂಜಿ. ಆದರೆ, ಈ ಮಗಳು ಅಪರಂಜಿ ಸವರನ್ನು! ಸ್ವಲ್ಪ ಬೆರಕೆ ಆದರೂ ಕೆಲಸಕ್ಕೆ ಬರುತ್ತಲ್ಲ. 'ಅಪರಂಜಿ'ನೂ ಹಾಗೇ ಇವಳಿಗೂ ಈಗ ಪ್ರಾಯ, ಇಪ್ಪತ್ತೈದರ ಹರೆಯ. ಈಗ ಹುಷಾರು, ಅಪರಂಜಿ ಅಮ್ಮಾ ಹೋದ ಹಾಗೆ ನೀನೂ ಹೊರಟು ಹೋಗುವುದಿಲ್ಲ ತಾನೇ! ಈಗ ವಾಸಿ ಕನ್ನಡನಾಡು. ಸ್ವಲ್ಪ ಗೆಲುವಾಗಿದೆ. ಅಂದ ಹಾಗೆ ಈಗ ಹೋಗಲು ಕಾಡೆಲ್ಲಿದೆ? ನಾಡೇಕಾಡು ಆಗಿ ಹೋಗುತ್ತಿದೆಯಲ್ಲ, ಈ ಕಾಂಕ್ರೀಟು ಕಾಡೇ ಗತಿ. ಇದೇ ನಾಡು, ಇದೇ ಸರ್ವಸ್ವ. ಇಲ್ಲಿ ಇದ್ದುಕೊಂಡೇ ಈ ನಾಡವರಿಗೆ ಅಮ್ಮನ ಕಣಿಯನ್ನೂ, ನಿನ್ನ ಗೆಲುವು ನಗೆಯನ್ನೂ ಹಂಚುತ್ತಾ ಇರಮ್ಮ.

ಕೊರವಂಜಿ ನೆನಪು ಉಳಿಸುತಾ ಇದ್ದೀಯಾ, ನಿಲ್ಲಿಸಬೇಡ, ತಪ್ಪಿಸಬೇಡ, ಇನ್ನೂ ಸರಿಯಾಗಿ, ಹಸಿರಾಗಿ, ನವಿರಾಗಿ, ಪೊಗದಸ್ತಾಗಿ ಮುಂದುವರಿಸಮ್ಮ ಅಪರಂಜಿ!

'ಕೊರವಂಜಿ' ಕಾಲಕ್ಕೂ ಈಗಿಗೂ ವ್ಯತ್ಯಾಸ ಇದೆ. ಆಗ ಆಯುಷ್ಯ ಕಡಿಮೆ. ಈಗ ಜಾಸ್ತಿ. 70-80-90ರ ಮುದಿಯರೂ ಬೇಕಾದಷ್ಟು ಜನ ಇದ್ದಾರೆ. ಪತ್ರಿಕೆಗೂ ಹಾಗೇ ಆಗಲಿ. ಅಲ್ಪಾಯಸ್ಸು ಹಳೆಯಮಾತು ಆಗಲಿ.

'ಅಪರಂಜಿ' ತನ್ನ ತಾಯಿಯ ಉಳಿಕೆ ಶತಾಯುಷ್ಯವನ್ನೂ ಮೈಗೂಡಿಸಿಕೊಂಡು ಬಾಳಲಿ. 'ಕೊರವಂಜಿ' ಪರಂಪರೆ ಬತ್ತದಿರಲಿ, ಬಾಡದಿರಲಿ, ಬೆಳೆಯಲಿ, ಬೆಳಗಲಿ ಅನ್ನೋಣವೇ?

✤

# ಎಲ್ಲೆಲ್ಲೂ ನಗುವೆ

**- ಎಚ್.ಜಿ. ಸೋಮಶೇಖರ ರಾವ್**

**ನಾ**ನು ಲಯನ್ಸ್ ಕ್ಲಬ್(Lions Club)ನಲ್ಲಿ ಸದಸ್ಯನಾಗಿದ್ದು ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದೇನೆ. 20 ವರ್ಷಗಳ ಕಾಲ ಸದಸ್ಯನಾಗಿದ್ದು ನನ್ನ ಬ್ಯಾಂಕಿನ ಕೆಲಸದ ಬಿಡುವಿಲ್ಲದ ಕೆಲಸಗಳಿಂದಾಗಿ ರಾಜೀನಾಮೆ ಕೊಟ್ಟೆ. ಅನಂತರ ಕೆಲಸದಿಂದ ನಿವೃತ್ತನಾದ ಮೇಲೆ ಲಯನ್ಸ್ ಕ್ಲಬ್ ಮತ್ತು ರೋಟರಿ ಕ್ಲಬ್‌ಗಳಲ್ಲಿ ಭಾಷಣ ಮಾಡಿದ್ದೇನೆ. ವಿವಿಧ ವಿಷಯಗಳ ಬಗ್ಗೆ ಭಾಷಣ ಮಾಡಿದ್ದೇನಾದರೂ ಹೆಚ್ಚು ಸಂಖ್ಯೆಯಲ್ಲಿ ಹಾಸ್ಯದ ಬಗ್ಗೆ ಮಾತಾಡಿದ್ದೇನೆ. ಒಮ್ಮೆ ರೋಟರಿ ಕ್ಲಬ್‌ನಲ್ಲಿ ಮಾತಾಡುವಾಗ ಹಾಸ್ಯ ಎಷ್ಟು ಚೇತನಕಾರಿ ಎಂದು ಪ್ರಾರಂಭಿಸಿ ಒಂದು ಜೋಕನ್ನು ಹೇಳಿ ನನ್ನ ಭಾಷಣ ಮುಂದುವರಿಸಿದೆ. ಅದೇನೆಂದರೆ – ಮನೆಯಲ್ಲಿ ತಾಯಿ ತನ್ನ ಮಗನಿಗೆ ಪಾಠ ಮಾಡುತ್ತಿದ್ದಳು. ಮುಗ್ಧ ಮನಸ್ಸಿನ ಮಗು ತಾಯಿಯನ್ನು ಒಂದು ಪ್ರಶ್ನೆ ಕೇಳಿತು. ''ಅಮ್ಮ, ಪ್ರಾಣಿಗಳ ಬಗ್ಗೆ ನೀನು ಏನೇನೋ ಹೇಳಿದಿ. ಸರಿ ನನಗೆ ಒಂದು ಪ್ರಶ್ನೆ ಕೇಳುವುದಿದೆ. ಏನೆಂದರೆ ಹುಲಿಗಳು (Lions) ಹೇಗೆ ಪ್ರೀತಿಸುತ್ತವೆ? ಎಂದು. ಅದಕ್ಕೆ ಉತ್ತರವಾಗಿ ತಾಯಿ ಹೇಳಿದಳು. ''ಮಗೂ, ಅದು ನನಗೆ ಗೊತ್ತಿಲ್ಲ. ಏಕೆಂದರೆ ನಿನ್ನಪ್ಪ ರೋಟೇರಿಯನ್'' ಎಂದು ಇರಲಿ.

ನಗು ಬದುಕಿಗೊಂದು ರುಚಿಕೊಡುವ ಆಹಾರ. (Humour is the spice of life). ನಗು ನಮ್ಮ ಕಷ್ಟಗಳನ್ನು – ದುಗುಡಗಳನ್ನು ದೂರಮಾಡುವ ದಿವ್ಯೌಷಧ. (Humour helps to laugh away the blues) ನಾವು ಈಗ ಒತ್ತಡದ ವಾತಾವರಣದಲ್ಲಿದ್ದೇನೆ. ಗಡಿಬಿಡಿಯ ಬಿರುಸಿನ ಬದುಕು. ಜೀವನದ ನಿಜಮೌಲ್ಯಗಳ ಸುಖಕ್ಷಣಗಳನ್ನು ಅನುಭವಿಸಲು 'ಟೈಂ' ಇಲ್ಲ, ಕೆಲಸದ ಒತ್ತಡ. ಅದರಿಂದ ಬರುವ ಆದಾಯದ ಕಡೆ ಗಮನ; ಯಾವುದಕ್ಕೂ ಟೈಂ ಇಲ್ಲ, "Getting and Spending" ಅಷ್ಟರಲ್ಲೇ ಬದುಕು. ಗಂಡ–ಹೆಂಡತಿಯರಿಬ್ಬರೂ ನೌಕರಿಯಲ್ಲಿದ್ದರೆ ಬದುಕಿನ ರೀತಿಯೇ ಬೇರೆ. ದಿನದ ಪ್ರತಿಕ್ಷಣವೂ ಒತ್ತಡದಿಂದಿದ್ದು ಅದಕ್ಕೆ ಸಂಬಂಧಿತರಾದ ಚಿಂತನೆ – ಆತುರ – ಆತಂಕ – ಗಡಿಬಿಡಿ – ಅವಸರ – ಇದು ಜೀವನ ಕ್ರಮವಾಗಿದೆ. ಹೀಗೆ Sickly hurryಯಲ್ಲಿ ಪ್ರೀತಿ, ಪ್ರೇಮ, ಗೆಳೆತನ, ಕೌಟುಂಬಿಕ ಸಂಬಂಧಗಳೆಲ್ಲಾ ಇಂದು ಒಂದು ರೀತಿಯ ವಿನಿಮಯ (Exchange) ಆಗಿದೆ. ಇದೊಂದು ರೀತಿಯ ವ್ಯಾಪಾರ!

ಹೀಗಾಗಿ ಬದುಕಿನಲ್ಲಿ ಹಾಸ್ಯದ ಉಪಯೋಗ ಕಡಿಮೆಯಾಗಿದೆ. ಮಹಾತ್ಮಗಾಂಧಿ ಇಡೀ ದೇಶದ ಸಮಸ್ಯೆಗಳನ್ನು ಪರಿಹರಿಸುವ ಮಧ್ಯೆಯೂ ತಮ್ಮ ಹಾಸ್ಯ ಪ್ರಕೃತಿಯನ್ನು ಮರೆಯಲಿಲ್ಲ. ಅವರೇ ಹೇಳಿದ ಹಾಗೆ.... "but for my sense of humour, I would have committed suicide" ಎಂಬ ಮಾತು ಗಮನಾರ್ಹ. ಬದುಕನ್ನು ಧನಾತ್ಮಕವಾಗಿ ನೋಡುವ ರೀತಿಯಿದು. ಚೆನ್ನಾಗಿ ಬದುಕಬೇಕೆನ್ನುವವರಿಗೆ ನಿರಾಶಾವಾದ (Pessimisms) ಸಲ್ಲ, ಅದು ಜೀವನ ವಿರೋಧಿ ದಾರಿ. ಬದುಕಿಗೆ ಬೇಕು – ದೃಢವಾದ ನಿಲುವು, ಪ್ರಸನ್ನತೆ, ನೆಮ್ಮದಿ, ಇತರರನ್ನು ಅರ್ಥಮಾಡಿಕೊಳ್ಳುವ ಬುದ್ಧಿ – ಎಲ್ಲಕ್ಕಿಂತ ಹೆಚ್ಚಾಗಿ ಹಾಸ್ಯ ಪ್ರವೃತ್ತಿ.

ನಗಬೇಕು – ನಗಿಸಬೇಕು – ನಗುನಗುತ ಬದುಕಿನ ಭಾರವನ್ನು ಹೊರಬೇಕು. ಕವಿ ಬೇಂದ್ರೆ ಹೇಳಿದಂತೆ – ''ನಕ್ಕಾವ ಗೆದ್ದಾವ'' ಎಲ್ಲಿದೆ ಹಾಸ್ಯ? ಉತ್ತರ – ಅದು ಎಲ್ಲಕಡೆ ಇದೆ ಸರ್ವವ್ಯಾಪಿ. ಹಾಸ್ಯಕ್ಕೆ ಬೇಕಾದ ವಸ್ತು ನಮ್ಮ ಸುತ್ತಲೇ ಇರುತ್ತೆ. ವಿಪರೀತ ಒತ್ತಡದ ಪರಿಸ್ಥಿತಿಯಲ್ಲೂ ನಗುವಿಗೆ ಅವಕಾಶವಿದೆ. ವೈದ್ಯನಾಗಿರಬಹುದು, ಇಂಜಿನಿಯರ್ ಆಗಿರಬಹುದು, ಬ್ಯಾಂಕರ್ ಆಗಿರಬಹುದು. ಅವರವರ ನಿತ್ಯದ ಕೆಲಸವನ್ನು ಮನಸ್ಸಿಟ್ಟು ಮಾಡಬೇಕಲ್ಲವೆ? ''ಅಯ್ಯೋ ಬಿಡಿ, ನಿತ್ಯನಮ್ಮದು ಅದೇ ಕೆಲಸ – ಮತ್ತದೇ ಕೆಲಸ – ನಿಸ್ಸಾರ – ನಮಗದು ಬೇಸರ'' ಎಂದು ಗೊಣಗುವವರಿದ್ದಾರೆ.

ಒಬ್ಬ ಬುದ್ಧಿವಂತ ಸಂಸತ್ತಿನ ಸದಸ್ಯ ಭಾಷಣ ಮಾಡುತ್ತಾ ''ಈ ಸಭೆಯಲ್ಲಿರುವ ಅರ್ಧ ಜನಗಳು ಕತ್ತೆಗಳು'' ಅಂದಾಗ ಇತರ ಸದಸ್ಯರು ತಮ್ಮ ತೀವ್ರ ವಿರೋಧವನ್ನು ವ್ಯಕ್ತಪಡಿಸಿದರು. ಆಗ ಆ ಸದಸ್ಯ ''ತಪ್ಪಾಯಿತು. ಕ್ಷಮಿಸಿ. ಸಭೆಯಲ್ಲಿರುವ ಅರ್ಧಜನರು ಕತ್ತೆಗಳಲ್ಲ'' ಅಂದ!! ನಾನು ಬ್ಯಾಂಕಿನಲ್ಲಿದ್ದಾಗ ಒಂದು ದಿನದ ರಜೆಗಾಗಿ ಒಬ್ಬ ನೌಕರನಿಂದ ಅರ್ಜಿ ಬಂದಿತ್ತು. ಏನೆಂದರೆ – ''ನಾನು ನಮ್ಮತ್ತೆಯನ್ನು ಆಸ್ಪತ್ರೆಗೆ ಸೇರಿಸಿದ್ದೇನೆ ಮತ್ತು ದೀಪಾವಳಿ ಹಬ್ಬವನ್ನು ಆಚರಿಸುತ್ತಿದ್ದೇವೆ...'' ಎಂದು ಅರ್ಜಿ ಕಳಿಸಿದ್ದ. ನಾನು ಒಂದು ದಿನ ನನಗೆ ಪರಿಚಯನಿದ್ದ ನರ್ಸಿಂಗ್ ಹೋಮ್‌ಗೆ ಅಲ್ಲಿದ್ದ ನನ್ನ ಸ್ನೇಹಿತನನ್ನು ಕಾಣಲು ಹೋಗಿದ್ದೆ. ಆಗ ನನಗೆ ಚೆನ್ನಾಗಿ ಗೊತ್ತಿದ್ದ ಡಾಕ್ಟರ್ ನನ್ನನ್ನು ಕಂಡು ''ಏನು ರಾಯರು... ಬಹಳದಿನ ಆಯ್ತು... ನೀವು ಬಂದೇ ಇಲ್ಲ... ಸ್ವಲ್ಪ ಕಾಯಬೇಕು... ಪರೀಕ್ಷೆ ಮಾಡುತ್ತೇನೆ'' ಎಂದರು. ಇಲ್ಲದ ಕಾಯಿಲೆಯನ್ನು ನಾನೆಲ್ಲಿ ತರಲಿ?!

ನನ್ನ ತಾಯಿ ತೀರಿಕೊಂಡಾಗ ದೇಹವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ ದಹನ ಕ್ರಿಯೆಗಾಗಿ ವ್ಯವಸ್ಥೆ ಮಾಡಲು ಹೊರಟೆ. ಆಗ ಕೂಡಲೇ ಪ್ರತ್ಯಕ್ಷನಾದ ಸ್ಮಶಾನದ ಉಸ್ತುವಾರಿ ವ್ಯಕ್ತಿ. ''ಸ್ವಾಮಿ....'' ಅಂತ ಕೈಚಾಚಿದ. ದುಃಖದಲ್ಲಿದ್ದಾಗಲೂ ಜೇಬಿನಿಂದ ಸ್ವಲ್ಪ ಹಣ ಕೊಟ್ಟೆ. ಆದರೆ ಅವನ ಮುಖದಲ್ಲಿ ಅಸಮಾಧಾನ ತುಂಬಿ... ''ಏನ್ ಸ್ವಾಮಿ, ಇಷ್ಟೇನ? ಏನೋ ಅಪರೂಪಕ್ಕೆ ಬಂದಿವ್ರಿ... ದಿನಾ ಬರ್ತೀರಾ?'' ಅಂದ. ಮತ್ತಷ್ಟು ಹಣಕೊಟ್ಟೆ. ''ಸ್ವಾಮಿ, ನಾಳೆ ಒತ್ತಾರೆ ಬಂದ್ಬುಡಿ... ಮೂಳೆ – ಬೂದಿ ಎಲ್ಲ ಚೆನ್ನಾಗಿ ಮಡಕೇಲಿ ಮಡಗಿರ್ತೀನಿ...'' ಅಂದ. ದುಃಖ–ದುಮ್ಮಾನಗಳ ಮಧ್ಯೆ ನನಗೆ ಸಣ್ಣದಾಗಿ ನಗುಬಂತು.

ನಾನು ಒಮ್ಮೆ ದೆಹಲಿಯಿಂದ ಬೆಂಗಳೂರಿಗೆ ವಿಮಾನದಲ್ಲಿ ಬರುತ್ತಿದ್ದೆ. ನನ್ನ ಪಕ್ಕದ ಸೀಟ್‌ನಲ್ಲಿ ಚೆನ್ನಾಗಿದ್ದ ಬಟ್ಟೆಧರಿಸಿದ್ದ ಒಬ್ಬಳು ಕೂತಿದ್ದಳು. ಕೈಯಲ್ಲಿ ಒಂದು ಇಂಗ್ಲೀಷ್ ಮ್ಯಾಗಜೀನ್ ಹಿಡಿದು ಏನೋ ಓದುತ್ತಿದ್ದಳು. ಅದನ್ನು ಮುಗಿಸಿ ಕೈಯಲ್ಲಿ ಹಿಡಿದು ಸುಮ್ಮನೆ ಕೂತಿದ್ದಾಗ – "Can I have it" ಅಂದೆ. ಅವಳಿಗೇನು ಅರ್ಥವಾಯಿತೋ ಕಾಣೆ – ಚಾಚಿದ ಕೈಗೆ ಮ್ಯಾಗಜೀನ್ ಕೊಟ್ಟಳು.. Thanks ಅಂದಾಗ 'ಪರವಾಗಿಲ್ಲ' ಅಂತ ಕನ್ನಡದಲ್ಲಿ ಹೇಳಿದಳು. ''ದೆಹಲಿಯಲ್ಲಿ ಕೆಲಸದಲ್ಲಿದ್ದೀರಾ? ಯಾರ ಕಂಪನಿ'' ಅಂದೆ. "House" ಅಂದಳು.... ನನಗೆ ಅರ್ಥವಾಗದೆ ''ಗಂಡ ಏನು ಮಾಡುತ್ತಾರೆ'' ಮರುಮಾತಿಲ್ಲ, ನಾನು ಮ್ಯಾರೇಜ್ ಆಗಿದೆಯಾ ಅಂತ ಪ್ರಶ್ನಿಸಿದೆ. ಅದೇನು ಅರ್ಥಮಾಡಿಕೊಂಡಳೋ ಗೊತ್ತಿಲ್ಲ..'' ಸ್ವಲ್ಪ–ಸ್ವಲ್ಪ ಆಗಿದೆ ಅಂದಳು. ಹೀಗೆ... ಎಲ್ಲೆಲ್ಲೂ ನಗುವಿಗೆ ಅವಕಾಶವಿದೆ. ನಕ್ಕು ಬಿಡೋಣ....

✤

# ಅಕ್ರಮ – ಸಕ್ರಮ

**– ಇ.ಆರ್. ರಾಮಚಂದ್ರನ್**

‘ರಾಮೂ, ನಿನ್ನೆ ನಮ್ಮ ಸೀತಮ್ಮ ಹೇಳ್ತಿದ್ರು, ನಮ್ಮ ಸರ್ಕಾರ ‘ಅಕ್ರಮ–ಸಕ್ರಮಾಂತ’ ಮಾಡಿದಾರಂತೆ.. ಏನೋ ಅದು?’

‘ಅಜ್ಜಿ! ನಿನ್ನ ಫ್ರೆಂಡು ಏನಾದ್ರೂ ಗೊಟಾಲದಲ್ಲಿ ಸಿಕ್ಹಾಕ್ಕೊಂಡಿದಾರಾ?’

‘ಸೀತಮ್ಮ ಅಂಥಾವ್ರಲ್ಲ ಕಣೋ... ಯಾತಕ್ಕೆ ಹಾಗಂತಿಯಾ?’

ಅಕ್ರಮ–ಸಕ್ರಮ ತಪ್ಪು ಮಾಡಿ ತಿದ್ದಿಕೊಳ್ಳೋಕೆ ಸರ್ಕಾರ ಕೊಟ್ಟಿರುವ ‘ಎಸ್ಕೇಪ್ ರೂಟ್’.

**ಅಕ್ರಮ-ಸಕ್ರಮ ಎಲ್ಲಾ ದಿಕ್ಕುಗಳಿಗೂ ಹರಡ್ಬೇಕು**

‘ತಪ್ಪು ಮಾಡಿ ತಿದ್ದುಕೊಳ್ಳೋದಕ್ಕೆ ಒಂದು ಅವಕಾಶ ಕೊಟ್ಟಿದಾರೇಂದ್ರೆ ಒಳ್ಳೇದಲ್ವೇನೋ?’

‘ಅಜ್ಜಿ, ತಿಳೀದೆ ತಪ್ಪು ಮಾಡಿದ್ರೆ ನೀನು ಹೇಳೋದು ಸರಿ. ತಿಳಿದೂ ತಿಳಿದೂ ಮಾಡುವ ತಪ್ಪನ್ನು ಸರ್ಕಾರ ಮನ್ನಿಸಿ ಮಣೆ ಹಾಕಿದಾರೆ. ತಪ್ಪು ಮಾಡಿದ್ರೂ ಪರವಾಗಿಲ್ಲ.. ಫೈನ್ ಕಟ್ಬಿಡಿ ಅಂತ ನಮ್ಮ ಸರ್ಕಾರಾನೇ ಅಸೆಂಬ್ಲೀಲಿ ಮಸೂದೆ ‘ಪಾಸ್’ ಮಾಡಿದೆ.’

‘ಹಾಗಿದ್ರೆ ನಾವೆಲ್ಲಾ ಫೇಲೆ! ಎಂಥಾ ಸರ್ಕಾರನೋ ಅದು! ಸರಿಯಾಗಿ ಹೇಳು ಏನು ಅದು.’

‘ಅಜ್ಜಿ, ಈಗ ಮನೆ ಕಟ್ತಾರಲ್ಲಾ.. ಅವರು ತಮ್ಮ ಸೈಟಿನ ಅಕ್ಕಪಕ್ಕದ ಸೈಟೂ ಸೇರ್ಸಿ ಒಂದು ಕಡೆ ಕಕ್ಕಸ್ಸನ್ನು ಕಟ್ಸಿ, ಇನ್ನೊಂದು ಕಡೆ ಸೈಟ್ನಲ್ಲಿ ಅಡುಗೆ ಮನೆ ಕಟ್ಸಿದ್ರೆ...’

‘ಬೇರೆವ್ರ ಸೈಟ್ನೂ ಸೇರ್ಸಿ ತನ್ನ ಮನೆ ಕಟ್ತಾನಾ.... ಅವ್ನು ಮನೆಹಾಳ ಅಲ್ವೇನೋ...!’

‘ಅಥವಾ ಫುಟ್‌ಪಾತ್ನೂ ಸೇರಿಸ್ಕೊಂಡು ಮನೆ ಕಟ್ಟಿದ್ರೆ ಅದು ಅಕ್ರಮಾತಾನೆ ಅಜ್ಜಿ?’

‘ಅಕ್ರಮ ಸರಿ. ಅವನು ಅಧಮ ಕೂಡಾ! ಅವನ್ನ ಜೈಲಿಗೆ ಹಾಕ್ಬೇಕು. ಅದ್ಸರಿ... ಸರಿಯಾಗಿ ಕಟ್ಟಿದಾರೋ ಇಲ್ವೋ ಅದನ್ನ ನೋಡೋದಕ್ಕೆ ಕಾರ್ಪೊರೇಷನ್ನ ಇನ್ಸ್‌ಪೆಕ್ಟರ್ ಬಂದು ನೋಡಲ್ವಾ?’

‘ಅವರು ಬಂದಾಗ ಕೈಬೆಚ್ಚಗೆ ಮಾಡಿ ಎಲ್ಲಾ ಸರಿಯಾಗಿದೆ ಅಂತ ಮನೆ ಕಂಪ್ಲೀಷನ್ ಸರ್ಟಿಫಿಕೇಟ್ ತೊಗೊಳ್ತಾರೆ! ಹೀಗೆ ಏನೇನೋ ತಪ್ಪುಗಳಿವೆ. ಇದು ಮನೆ ಕಟ್ಟಿಸುವಾಗಲೇ ತಪ್ಪು ಮಾಡ್ತೀನೀಂತ ಚೆನ್ನಾಗಿ ಗೊತ್ತಿರುತ್ತೆ. ಗೊತ್ತಿದ್ದೂ ಅಕ್ರಮ ಮಾಡ್ದೋನಿಗೆ, ಅದನ್ನ ಸರಿಯಾಗಿದೆ ಅಂತ ಬರೆದ ಇನ್ಸ್‌ಪೆಕ್ಟರ್‌ನ ಜೈಲ್‌ಗೆ ಹಾಕೋದ್ಬಿಟ್ಟು ಅಕ್ರಮ ಮಾಡ್ದೋವ್ನಿಗೆ ಫೈನ್ ಕಟ್ಟಕ್ಕೆ ಹೇಳಿ ಅದನ್ನು ಸಕ್ರಮಾಂತ ಮಾಡೀದಾರೆ, ನಮ್ಮ ಸರ್ಕಾರ!’

‘ಬರೀ ಫೈನ್ ಅಷ್ಟೇನಾ? ಆ ಇನ್ಸ್ಪೆಕ್ಟರ್ಗೆ ಮುಂದೆ ಪ್ರಮೋಷನ್! ಸರಿ ಹೋಯ್ತು ಬಿಡು. ಇಬ್ರನ್ನೂ ಜೈಲಿಗೆ ಹಾಗ್ಬೇಕು.... ಜೈಲಾದ್ರೂ ಬೈಲು ತೊಗೊಂಡು ತಕ್ಷಣವೇ ಹೊರಗ್ಬರ್ತಾರೆ!’

‘ಆಸ್ಪತ್ರೆ ಕಟ್ಟುವಾಗ ಮಾಳಿಗೇಲಿ ಕಾರ್–ಸ್ಕೂಟರ್ ಇಡೋದಕ್ಕೆ ‘ಪಾರ್ಕಿಂಗ್ ಜಾಗ’ ಅಂತ ಪ್ಲಾನ್‌ನಲ್ಲಿ ತೋರ್ಸಿ, ಆಮೇಲೆ ಕಟ್ಟಿದಮೇಲೆ ಅಲ್ಲಿ ಲ್ಯಾಬ್ಗಳನ್ನು ಕಟ್ಟುತ್ತಾರೆ! ಅಂಗಡಿ ಕಟ್ಟಿ ಬಾಡಿಗೇಗೆ ಬಿಡ್ತಾರೆ! ಈ ಅಕ್ರಮಾನ ಸಕ್ರಮ ಮಾಡ್ಸಿ ‘ಅಡ್ಜಸ್ಟ್’ ಮಾಡ್ತಾರೆ!’

‘ಹಾಗಿದ್ರೆ ಅದೇ ತರಹ ಬಹಳ ಕೆಲಸಕ್ಕೆ ಅಕ್ರಮ–ಸಕ್ರಮ ಮಾಡ್ಬಹುದು.’

‘ಹ್ಯಾಗಜ್ಜಿ?’

‘ಹುಡುಗ್ರು ಪರೀಕ್ಷೇಲಿ ಚೆನ್ನಾಗಿ ಕಾಪಿ ಹೊಡೆಯೋದಕ್ಕೆ ಅನುಕೂಲ ಮಾಡ್ಕೊಟ್ಟು, ಆಮೇಲೆ ಫೈನ್ ಹಾಕ್ಬಹುದಲ್ಲೋ.. ಮೊಬೈಲ್ನಲ್ಲಿ ಬರ್ಕೊಂಡು ಕಾಪಿ ಮಾಡಿದ್ರೆ ಎಷ್ಟು ಫೈನು, ನೋಟ್ನ್ನ ಪ್ಯಾಂಟ್ನಲ್ಲೋ, ಸಲ್ವಾರ್ ಕಮೀಜ್ನಲ್ಲಿ ಮುಚ್ಚಿಟ್ಕೊಂಡು ಬರದ್ರೆ ಎಷ್ಟೂಂತ ಮುಂಚೇನೆ ಪಟ್ಟಿ ಮಾಡಿ ನೋಟಿಸ್ ಬೋರ್ಡ್‌ನಲ್ಲಿ ಹಾಕಿದ್ರೆ ಹುಡುಗ್ರುಗೂ ಸುಲಭ ಆಗುತ್ತೆ!’

‘ಅಜ್ಜಿ!’

‘ಬೇರೆ ಬೇರೆ ಕಸುಬಿನವ್ರಿಗೂ ಹೀಗೆ ಪಟ್ಟಿ ಮಾಡ್ಕೊಟ್ಟಿಟ್ರೆ ತಂಟೇನೇ ಇರಲ್ಲ ನೋಡು. ದಿನಸಿ ಅಂಗಡಿಯೋವ್ರಿಗೆ ಒಂದು ಕಿಲೋ ಸೋನಾಮಸೂರಿಗೆ ನೂರು ಗ್ರಾಂ ಬೆಣಚು ಕಲ್ಲು ಹಾಕಿದ್ರೆ ಎಷ್ಟು ಫೈನ್ ಕಟ್ಬೇಕು; ಒಂದು ಕಿಲೋ ಕಾಫಿ ಪುಡಿಗೆ ಇನ್ನೂರು ಗ್ರಾಂ ಹುಣಿಸೆ ಬಿತ್ತದ ಪುಡಿ ಸೇರಿಸಿದ್ರೆ ಎಷ್ಟು, ಒಂದು ಲೀಟರ್ ನಂದಿನಿ ತುಪ್ಪಕ್ಕೆ ಮುನ್ನೂರು ಗ್ರಾಂ ಹಂದಿ ಕೊಬ್ಬು ಹಾಕ್ತಾರಲ್ಲಾ, ಅವ್ರು ಎಷ್ಟು ಫೈನ್ ಕಟ್ಬೇಕೂಂತ ಪಟ್ಟಿ ಮಾಡಿ ಅಂಗಡಿಗಳಿಗೂ ಹಂಚಿ ಬಿಟ್ರೆ ಇನ್ನೂ ಒಳ್ಳೇದು. ಅಕ್ರಮ–ಸಕ್ರಮ ಎಲ್ಲಾ ದಿಕ್ಕುಗಳಿಗೂ ಹರಡ್ಬೇಕು.’

‘ದೇವ್ರೇ ಗತಿ!’

‘ನಮ್ಮ ಹಾರ್ಡ್‌ವೇರ್ ಹರಿಣಿ ಗಂಡ ಹೇಳಿದ್ರು.... ಮೈಸೂರ್ನಲ್ಲಿ ಡೂಪ್ಲಿಕೇಟ್ ಸಿಮೆಂಟ್ ಫ್ಯಾಕ್ಟರಿ ಇದೆಯಂತೆ. ಅಲ್ಲಿ ಒಂದು ಹತ್ತು ಕಿಲೋ ಒಳ್ಳೆ ಸಿಮೆಂಟು ತೊಗೊಂಡು, ಅದನ್ನು ಭೂದಿ, ಮಣ್ಣು ಜೊತೆ ಹೇರಳವಾಗಿ ಸೇರ್ಸಿ, ನೂರು ಕಿಲೋ ಮಾಡ್ತಾರಂತೆ ನೋಡು. ಅದಕ್ಕೆ ಮಾರ್ಕೆಟ್‌ನಲ್ಲಿ ಪ್ರಸಿದ್ಧಿಯಾದ ಕಂಪನಿಯ ಹೆಸರು ಅಚ್ಚು ಹಾಕಿ ಅದನ್ನು ಮೂಟೆಗಳಲ್ಲಿ ಮಾರ್ತಾ ಇದಾರಂತೆ. ಅದಕ್ಕೋಸ್ಕರವೇ ಒಂದು ಪ್ರಿಂಟಿಂಗ್ ಪ್ರೆಸ್ನೂ ಇಟ್ಕೊಂಡಿದಾರಂತೆ! ಆ ಸಿಮೆಂಟಿನಲ್ಲೇ ಗವರ್ನಮೆಂಟ್ ಆಫೀಸುಗಳು ಕಾಲುವೆ, ಸೇತುವೆ ಕಟ್ತಾರೆ! ಮೈಸೂರಿಗೆಲ್ಲಾ ನೀರು ಸರಬರಾಜು ಮಾಡುವ ಒಂದು ದೊಡ್ಡ ವಾಟರ್ ಟ್ಯಾಂಕ್ ಇದೆ. ಅದರರ್ಧ ಛಾವಣಿ ಹಾರೋಗಿದೆ, ಇನ್ನರ್ಧ ಹಪ್ಪಳದ ಹಾಗೆ ಮುರಿದು ಬಿದ್ದಿದೆ. ಆ ಟ್ಯಾಂಕಿಗೆ ಸಿಮೆಂಟ್ ವಾಸ್ನೇನೂ ತೋರ್ಸಿರಲ್ಲ... ಆ ಟ್ಯಾಂಕ್ನಲ್ಲಿ ನೀರಿನ ಜೊತೆ ಸತ್ತು ಬಿದ್ದ ಪಕ್ಷಿಗಳು, ಅಳಿಲು ಎಲ್ಲಾ ಸಿಗುತ್ತೆ. ಅದನ್ನೇ ‘ಕಾವೇರಿ’ ನೀರೂಂತ ಊರಿಗೆಲ್ಲಾ ಸಪ್ಲೈ ಮಾಡ್ತಾರೆ!’

‘ಇಂಥ ನೀರು ಕುಡೀತಿರೋ ಜನಗಳು ಇನ್ನೂ ಬದುಕಿದಾರೇಂದ್ರೆ ಆಶ್ಚರ್ಯನೇ!’

‘ಮತ್ತೊಂದು ಕಡೆ ಪೆಟ್ರೋಲ್ಗೆ ಕೆರೋಸಿನ್ ಸೇರ್ಸೋದು ಫ್ಯಾಕ್ಟರಿ ಇದೆಯಂತೆ. ಅದೆರಡನ್ನು ಕಲಬೆರೆಕೆ ಮಾಡಿ ಪೆಟ್ರೋಲ್ ಪಂಪಿಗೆ ಕೊಡೋದು. ಆಟೋರಿಕ್ಷಾದವರು ಅದಕ್ಕೆ ಮುಖ್ಯ ಗಿರಾಕಿಗಳು. ಅದಕ್ಕೇ ನೋಡು ಆಟೋರಿಕ್ಷ ಓಡುತ್ತಿರುವಾಗ ಅದರ ಹಿಂದೆ ರಾಕ್ಷಸನ ಹಾಗೆ ಹೊಗೆ ಬರ್ತಾ ಇರುತ್ತೆ! ಅದನ್ನು ಕುಡಿದ ಮಕ್ಕಳಿಗೆ, ಮುದುಕರಿಗೆ ದಮ್ಮು ಕಟ್ಟುತ್ತೆ, ಕೆಮ್ಮು ಬರುತ್ತೆ. ಅವನು ಅಕ್ರಮ–ಸಕ್ರಮಾದ ಮೆಂಬರ್ ಇರ್ಬೇಕು!’

‘ಅಜ್ಜಿ! ಇದೆಲ್ಲಾ ನೋಡಿದ್ರೆ ‘ಸರ್ಕಾರದ ಕೆಲಸ ದೇವರ ಕೆಲಸ’ ಅನ್ನೋದಕ್ಕೆ ಆಗುತ್ತಾ?’


‘ಸ್ವಲ್ಪ ಬದಲಾವಣೆ ಮಾಡ್ಬೇಕು ಅಷ್ಟೆ. ಇನ್ನೂ ಕಡಿಮೆ ಅಕ್ಷರದಲ್ಲಿ ಬರೆಸ್ಬೇಕು. ‘ದೆವ್ವ’ದ ಕೆಲಸಾಂತ!’

‘ಅಜ್ಜಿ ಸರಿಯಾಗಿ ಹೇಳ್ದೆ ನೀನು!’

✤

# ಕೊರವಂಜಿ ಪದಬಂಧ – 2

- ವಿದ್ಯಾ ವಿ. ಹಾಲಭಾವಿ




**ಎಡದಿಂದ ಬಲಕ್ಕೆ**

1. ಉಚಿತವಾಗಿ ಕೊಡುವುದು ಖಂಡಿತವಾಗಿಯೂ ನಿಶ್ಚಿತ ಸ್ವಾಮಿ! (3)
3. ದಾರ ಹಿಡಿದು ದಾರಿಯಲ್ಲಿ ನಡೆಯಲು ಬೇಕಂತೆ ಈ ಅಪ್ಪಣೆ ಚೀಟಿ (4)
5. ಪುಢಾರಿಯೂ ಕೂಡಾ ಪರಮ ಶತ್ರು (2)
6. ರವೆಯನ್ನು ಆನೆಯ ಮೇಲೆ ಸಾಗಿಸುವುದು (3)
8. ಕಸಿ ಮಾಡಿದ ಸಸಿ ನೆಡುವುದಕ್ಕೇ ಹೀಗೆ ತಳಮಳ (4)
9. ನಡುವಿದ್ದ ಮಾವ ಉಲ್ಟಾ ನಿಂತು ಒಂಭತ್ತು ತಿಂಗಳಾಯ್ತು! (4)
11. ಪದಕ ಧರಿಸಿದಾಕೆ, ಕದಕ್ಕೆ ಉಜ್ಜಿದ ಕೆನ್ನೆ (3)
13. ಈ ಸಿಟ್ಟಿನಲ್ಲಿ ಕೊಯ್ದ ಮೂಗು ಶಾಂತಿಯಲ್ಲಿ ಹತ್ತುವುದೇ? (2)
16. ದ್ವಾದಶಿ ನಂತರವೇ ಯೋಧ ಮದುವೆಯಾಗುತ್ತಾನಂತೆ (4)
17. ಆಜುಬಾಜು ಇರುವವರೆಲ್ಲಾ ಕುಳಿತಿರುವ ಹಡಗು (3)

**ಮೇಲಿಂದ ಕೆಳಕ್ಕೆ**

1. ನೋಡಿದರೆ ಗೊತ್ತಾಗಲಿಲ್ಲವೇ ಈತ ಕನ್ನಡ ಚಿತ್ರದ ವಿಲನ್ (5)
2. ಸ್ವಲ್ಪ ತಡಿ, ಇದು ತ್ರಾಸು (3)
3. ಆ ಚಾರನೊಡನೆ ಸೇರಿಕೊಂಡು ಮಾವನೇ ತಿರುಗಿ ನಿಂತು ಮಾಡಿದ ಮಾಟ (4)
4. ಉಲ್ಟಾ ಆದರೂ ಇದು ದುರಸ್ತಿಯೇ ಬಿಡಿ (3)
6. ಕರದಲ್ಲೇ ಸೀಕರಣೆ ಕುಡಿಯುತ್ತಿಹನಲ್ಲಾ ಈ ವಿಲಾಸಿ! (3)
7. ಒನಪು ತೋರಿದಾಗಲೇ ಬಂದ ಸ್ಮರಣೆ (3)
10. ಬರದಲ್ಲೂ ಸರದ ಪೂರೈಕೆ (3)
12. ಬೆಲೆಯಿಟ್ಟುಕೊಂಡೇ ಬಂದಿದ್ದಾನೆ ದಿಕ್ಕಿಲ್ಲದವ (4)
14. ಪತ್ರದೊಳಗೇ ಪುಣ್ಯಕರವಾದುದು ಇದೆ (3)
15. ಮಜದಲ್ಲೇ ಇದ್ದಾನಲ್ಲಾ ಈ ಮನುಷ್ಯ! (3)

*(ಉತ್ತರಕ್ಕೆ 20ನೇ ಪುಟ ನೋಡಿ)*

# ಲಗಣಾ ಆದ್ರ ಆರಾಮ !

**– ಎಚ್. ಶಾಂತರಾಜ ಐತಾಳ್**

**ದೇ**ವಲೋಕದಾಗ ಈಗ ದೇವ ದೇವಿಯರು ಎಷ್ಟು ಅದಾರ ಖಬರೈತೇನ್ರಿ? 'ಮೂವತ್ತಮೂರು ಕೋಟಿ' ಅಂತೀರಾ? ಯಾವ ಜಮಾನದಾಗ ಅದೀರ್ರಿ? ನೋಡ್ರಿ ಈಗ ಬರೋಬ್ಬರಿ ಮುವತ್ತೊಂಬತ್ತು ಕೋಟಿ ದೀಢ್‌ಶೆ ಅಂತ್ರಿ ಅವರ ಸಂಖ್ಯಾಬಲ. ಯದಕ್ಕ ಹೇಳಾಕ ಹತ್ತೀನಪ್ಪಾ ಅಂದ್ರ ಈ ದೇವ್ರ ಗುಂಪಿನಾಗ ನಂಬರ್‌ವನ್ ಅಂದ್ರ ನಂ ಶಿವಪ್ಪಾರ ಮಗ ಬೆನಕಪ್ಪ ನೋಡ್ರಿ ! ಇದಕ್ಕ ಕಾರಣ ಏನಪಾ ಅಂತ ಕೇಳ್ರಿ – ನಾ ಹೇಳ್ತೀನಿ. ಈ ಆನೇ ಸೊಂಡಿಲಿನ ಗಣಪ ಲಗಣಾ ಮಾಡ್ಕಂಡಿಲ್ಲ, ಹಿಂಗಾಗಿ ನೀವು ಏನಾರ ಬೇಡ್ಕೋರಿ – ತಾಬಡತೋಬ ಸ್ಯಾಂಕ್ಶನ್ ಮಾಡಿ ಬಿಡ್ತಾನ – ಹೆಂಡತಿದು ಗೋಣಗಾಟ ಇಲ್ಲ, ಅತ್ತಿಮನೀದು ವಕ್ರ ನೋಟ ಇಲ್ಲ. ಎಲ್ಲ ಅಗ್ದಿ ಸುರಳೀತ!

ನನಗ ಬುದ್ಧೀ ಬರೋ ಹೊತ್ನಾಗ ವರ್ಸಾ ನಲವತ್ತೆರಡು ಆಗಿತ್ರಿ. ನಮ್ಮ ಸಾಲಾ ಮಾಸ್ತರ ಶರಣಪ್ಪ ಬಿಂಗ್ರಿ ಅವರನ್ನ ಕೇಳಿದೆ ನೋಡ್ರಿ – 'ಸರ ನನಗೂ ಲಗಣಾ ಆಗಬೇಕ್ರಿ. ಆದರ ನಾ ಯಾರನ್ನ ಲಗಣಾ ಆದ್ರ ಆರಾಮ ಹೇಳ್ರಲ್ಲ – ಮ್ಯಾಟ್ರಿಕ್ ಫೇಲ್ ಆದಾಕಿ ಗೊಂಬಿ ಹಾಂಗ ಅದಾಳು. ಪಿ.ಯು.ಸಿ. ಫೇಲ್ ಹ್ಯಾಪ್ ಮ್ವಾರಿಯವಳು ಅದಾಳು' – ಅಂತಂದೆ. ಅದಕ್ಕೆ ಬಿಂಗ್ರೀ ಮಾಸ್ತರ – 'ಅಲ್ಲಲೇ ನಿದ್ದೀಹಾಳ! ಲಗಣಾ ಆದ್ರ ಆರಾಮ ಅಂತ ನಿನಗ್ಯಾವನ ಹೇಳ್ಯಾನಲೇ ನಿನಾವ್ನ? ಮದವೀ ಆಗ್ತಾನಂತ – ಆರಾಮ ಇರ್ತಾನಂತ – ಐಲನ್ನ ತಂದು!' ಅಂದು ಬಿಟ್ರು. ಲಗಣಾ ಮಾಡ್ಕೋ ಬೇಕು ಅನ್ನೋ ನನ್ನ ಯೋಚನಿ ಕಂಬಿ ಕಿತ್ಹೋದ ರೈಲುಗಾಡಿ ಆಗಿ ಬಿಡ್ತು ನೋಡ್ರಿ.

ಬಿಂಗ್ರೀ ಮಾಸ್ತರ ಹೇಳಿದ್ದು ಖರೇನೆ ಇರಬೇಕು ಅಂತ ನನಗೂ ಅನಸಾಕ ಹತ್ತೇದ. ಗಣಪತಪ್ಪ ಒಂದು ತಾಳಿ ಕಟ್ಟಿದ್ರ ಏನೆಲ್ಲ ಆಗ್ತಿತ್ತು ಹೇಳ್ರಲ್ಲಾ. ಆಕಿ ಸ್ವಲೂಪ ಮಾಡರ್ನ್ ಟೈಪ್ ಆದ್ರಂತೂ ಮುಗದೇ ಹೋತು.

'ನಿಮ್ಮ ಮೂಗ ಏಟೊಂದು ಉದ್ದರೀ ಶಿವ ಶಿವಾ! ಸ್ವಲ್ಪ ಸಣ್ಣದು ಮಾಡಸ್ಕೊಂಡು ಬರ್ರಲಾ, ಬಾಜೂ ಗಲ್ಲಿ ಒಳಗ ಡಾಕ್ಟರ್ ಸಿದ್ಧಪ್ಪಾ ಮೂಗಿನಮನಿ ಅದಾರಲ್ರಿ. ಭಲೋ ಪ್ಲಾಸ್ಟಿಕ್ ಸರ್ಜರಿ ಮಾಡ್ತಾರಂತ. ಆವತ್ತು ರಾಯಲ್ ಟಾಕೀಜದೊಳಗೆ ಸಿನಿಮಾ ನೋಡೀವಲ್ರಿ. ಅದ್ರಾಗ ಹಿರೊಯಿನ್ ಶ್ರೀದೇವಿ ಮೂಗು ನಿಮ್ಹಂಗೇ ಇತ್ತಂತ ನೋಡ್ರಿ. ಈಗ ಸರ್ಜರಿ ಮಾಡಸ್ಯಾಳ. ಹ್ಯಾಂಗ ಮೆರಿತಾಳ ನೋಡೀರಲ್ಲ, ನೀವೂ ಮಾಡಸ್ರಿ. ಪ್ಲೀಸ್'

'ಅಲ್ರೀ ಮಂದಿ ನಿಮ್ಮನ್ನ ಕರಿತಾರೆ ಖರೆ – ಬಾರೋ ಗಣಪ – ಅಂತ. ಆದರೆ ಅದ್ಯಾಕ ಹಗಲೆಲ್ಲ ಎಲ್ಲಾರ ಮನೀಗ ಭೆಟ್ಟಿ ಕೊಟ್ಟು, ಕೊಟ್ಟು ಉಂಡೀ, ಚಕ್ಲಿ, ಪಾಯಸಾ, ಮೋದಕ – ಎಲ್ಲ ಸಂಜೀತನಕ ದಬ್ಬಿ ದಬ್ಬಿ ಅದೇನು ಹೊಟ್ಟೆ ಬೆಳಸ್ತೀರಪ್ಪಾ, ಶಿವ್ನೇ! ನಾಳಿಂದ ನಾಲ್ಕಕ್ಕೆ

ಎಬ್ಬರಿಸ್ತೀನಿ ನೋಡ್ರಿ – ಒಲ್ಲೆ ಅನಬ್ಯಾಡ್ರಿ. ನಾನೂ ಸಾಥ್‌ಕೊಡತ್ತೀನಿ. ದಿನಾ ಅರ್ಧತಾಸು ಜಾಗಿಂಗ್ ಮಾಡೂಣ. ಕಬೂಲೈತಲ್ಲ?'

'ಅದೇನೋ ಜಾಹೀರಾತು ಬರ್ತತಲ್ರಿ. ನೀವು ತುಂಬ ದಪ್ಪಗಿದ್ದೀರಾ! ಎರಡೇ ತಿಂಗಳಲ್ಲಿ ತೆಳ್ಳಗಾಗಿ – ಅಂತ. ಅವರಿಗೆ ಫೋನಾದ್ರೂ ಮಾಡ್ರಿ. ನಮ್ಮನ್ನೇ ನೋಡ್ತಾರ್ರೀ – ಮೊನ್ನೆ ಒಬ್ಬಾಕಿ ಕೇಳೇ ಕೇಳ್ತಾಳ – ಏನವ್ವಾ 'ಹಾಥಿ ಮೇರೆ ಸಾಥಿ' ಪಿಚ್ಚರಿಗೆ ಹೊಂಟ್ಯಾ? ಅಂತ'

'ನಿಮ್ಗೊಂದು ಸರ್‌ಪ್ರೈಸ್ ಸುದ್ದಿ ಹೇಳಬೇಕೇನ್ರಿ? ನನಗೀಗ ಮೂರು ತಿಂಗಳು ತುಂಬೈತಿ. ತಾಬಡತೋಬ ಸ್ಕ್ಯಾನಿಂಗ್ ಮಾಡಸಾಕ ಹೊಂಟೇನ್ರಿ. ನನ್ನ ಹೊಟ್ಟೀ ವಳ್ಗ ಇರೋ ಕಂದಂಗೂ ಸೊಂಡ್ಲಾ ಇದ್ರ ಏನು ಗತಿರೀ ಶಿವ ಶಿವಾ!'

ಇಂತಾ ವಾಗ್ಬಾಣಗಳನ್ನು ಹಗಲೆಲ್ಲ ಕೇಳಬೇಕಾಗುತ್ತಿತ್ತು ನಮ್ಮ ಬೆನಕಪ್ಪ.

ಇನ್ನು ಪುರಾಣದೊಳಗೆ, ತ್ರೇತಾಯುಗದಲ್ಲಿ ನಂ ಹನುಮಪ್ಪ ಏನ–ಶಾಣ್ಯಾ ಇದ್ದ. ಪೈಲವಾನ ಆಗಿದ್ದ. ರಾಮನ ಜಿಗ್ರೀ ದೋಸ್ತ ಆಗಿದ್ದ – ಒಬ್ಬ ಹನುಮಂತಪ್ಪ ಇಲ್ಲದಿದ್ರೆ ರಾಮಾಯಣ ಎಲ್ಲಿರ್ತಿತ್ತು ಹೇಳಾರ ಹೇಳ್ರಲ್ಲ? ಅದೇ ಹನಮಪ್ಪ ಏನಾರ ಮದ್ವಿ, ಶೋಬ್ನಾ ಅಂತ ಹಚ್ಕೊಂಡಿದ್ರೆ ಸೀತವ್ವ ಲಂಕೀ ವಳಗೇ ಕೂತವ್ವ ಆಗಿಬಿಡ್ತಿದ್ಲು ನೋಡ್ರಿ. ಲಗಣಾ ಅಂತ ಮಾಡ್ಕೊಂಡಿದ್ರಂತೂ ಬೇಷಾಗಿ ಬಿಡತಿತ್ತು. ನಿನ್ನ ಬಾಲಾ ಕಟ್ ಮಾಡ್ಕೋ – ಮ್ವಾರಿ ಸರಿ ಮಾಡ್ಕೋ – ಮೈಮೇಲೆಲ್ಲ ರೋಮ ಐತಿ, ಬ್ಯೂಟಿಪಾರ್ಲರ್‌ನಾಗೆ ಶೇವ್ ಮಾಡಿಸ್ಕೊ – ಟೇಬಲ್ ಮ್ಯಾನರ್ಸ್ ಕಲತ್ಕೊ – ಹಿಂಗೆ ಒಂದಲ್ಲ ಎರಡಲ್ಲ – ಸಾಲು ಸಾಲು ಆರ್ಡರುಗಳ ಮಳೆ ಉದುರಿಸ್ತಿದ್ಲು ಅವನ ಹೆಣ್ತಿ ಆದೋಳು!

ನಾನು ಸಾಲೀ ವಳಗ ಓದುತ್ತಿದ್ದಾಗ ಬಿಂಗ್ರಿ ಮಾಸ್ತರ ಹಾಜರಿ ಹಾಕತಿದ್ದರ್ರಿ. ಕನ್ನಡ ಸಾಲಿ ನೋಡ್ರಿ. ನಮ್ಮ ಕ್ಲಾಸ್‌ನಾಗ ಎಂಟೇ ಮಂದಿ – ತೀರ್ತು. ಅದಕ್ಕೇ ಮಾಸ್ತರ, ನಂ ನಂಬರದ ಮುಂದ ಹಜರಿ ಹಚ್ಚತಿರ್ಲಿಲ್ಲ, ನಂ ಹೆಸರೇ ಕೂಗುತಿದ್ರು. ತಗೋರಿ ಹಿಂಗ ಒಂದು ಸರಿ – ಗೊರಕೆಪ್ಪಾ ನಿದ್ದೀಹಾಳಮಠ – ಅಂತ ನನ್ನ ಹೆಸರನ್ನು ಪೂರ್ತಿ ಒದರಿದ್ರು. ನಾ 'ಓರಿ' ಅಂದೆ.

ಮಾಸ್ತರ ಅಂದ್ರು – 'ನೋಡಪ್ಪಾ ಇವತ್ತು ಮೈಸೂರಿನ ದಿವಾನರಾಗಿದ್ದ ಇಂಜಿನಿಯರ್ ವಿಶ್ವೇಶ್ವರಯ್ಯರ ಕತಿ ಹೇಳತೀನಿ' – ಅಂತ. ಆ ಮ್ಯಾಗ ಏನೇನೋ ವದರಿದ್ರು. ಅದ್ರ ನನಗೆ ಒಂದು ಪಾಯಿಂಟ್ ಗೊತ್ತಾತು. ವಿಶ್ವೇಶ್ವರಯ್ಯಾರೂ ಮದುವಿ ಮಾಡಿಕೊಳ್ಳೋ ತೆಪ್ಪು ಮಾಡಿಲ್ಲಾಂತ.

ಹೂಂನ್ರಿ. ವಿಶ್ವೇಶ್ವರಯ್ಯರು ಲಗಣ, ಮಗಣ ಅಂತ ಮಾಡಿಕೊಂಡಿದ್ರೆ ಹೆಣ್ತಿಗೆ ಜೋತು ಬೀಳತಿದ್ರೋ ಏನೊ. ಅತ್ತಾಗೆ ಕೆ.ಆರ್.ಎಸ್. ಅಣೆಕಟ್ಟೂ ಇಲ್ಲ – ಇತ್ತಾಗೆ ಕಬ್ಬಿಣ ಕಾರ್ಖಾನೇನೂ ಇಲ್ಲ. ಮ್ಯಾಗಿಂದ ಆಕೀದು ಸುಭಾಷಿತಗಳ ಸುರಿಮಳೆ ಬ್ಯಾರೆ.

'ಅಲ್ರೀ ಭದ್ರಾವತಿಯಾಗ ಅದೇನು ಕಬ್ಣಾ ಮಾಡತೀರಂತಲ್ಲ, ಒಂದು ಲಾರಿ ಕಬ್ಣಾ ಇಲ್ಲಿಗೆ

ತರಸ್ರೀ. ಚಲೋ ಬಂಗ್ಲಾನಾದ್ರೂ ಕಟ್ಟಿಸಿ ಕೊಡ್ರಿ! ಸಾಕಾತಪ್ಪ – ನಿಮ್ಮ ಸರ್ಕಾರಿ ಕ್ವಾರ್ಟರ್ಸ್ ಒಳಗೆ ಜೀವನ ಮಾಡಿ'

'ಅದೇನು ಕೆ.ಆರ್.ಎಸ್. ಅಂತ ಹಗಲೆಲ್ಲ ಒದರ್ತೀರಲ್ಲ, ನನ್ನ ಒಂದ್ಸರಿ ಕರಕೊಂಡು ಹೋಗ್ರಿ ಅಲ್ಲಿಗೆ – ಅದೇನು ಆಣೆಕಟ್ಟೋ, ಸುಡುಗಾಡೋ ನಾನೂ ನೋಡಾರೆ ನೋಡ್ತೀನಿ'

'ಅಮೆರಿಕಕ್ಕೆ ಯದಕ್ಕ ನೀವೊಬ್ರೇ ಹೋಗ್ಬೇಕು. ನನಗೂ ತಿಳತತ್ರೀ – ನಾ ಏನು ಗುಮ್ಮನಗುಸಕೀ ಅಂತ ತಿಳಿದೀರೇನು? – ಅಲ್ಲಿ ಯಾವೋಳೋ ಕೆಂಪು ಮೂತಿ ಹೆಣ್ಮಗಳ ಜೋಡಿ ಮಸ್ತೀ ಮಾಡಾಕ ಹೊಂಟೀರಿ ಹೌದಿಲ್ಲೊ?'

'ನೀವು ದಿವಾನರಾಗೀರಲ್ರೀ–ಮತ್ತ–ನಂ ಚಿಗಪ್ಪನ ಮಗಂಗೆ ಸರ್ಕಾರಿ ನೌಕರಿ ಕೊಡಸ್ರಿ! ಮಹಾರಾಜರನ್ನ ನೋಡ್ರಿ – ನಿಂ ಬಾಸು – ಏನು ಪ್ಯಾಲೇಸ್ ಕಟ್ಟಿಸಿದಾರ್ರಿ–ನೀವು ದಡ್ಡ ಧರ್ಮರಾಯನ ಹಂಗೆ ಗಪ್ಪ ಕುಂದರಬ್ಯಾಡ್ರಿ – ನಾಲಕ್ಕು ಕಾಸು ಮಾಡಿ ನಾವೂ ಒಂದು ಪ್ಯಾಲೇಸ್ ಕಟ್ಟೋಣ ತಗೋರಿ'.

ಅಂತೂ ವಿಶ್ವೇಶ್ವರಯ್ಯ ಮದುವಿ ಆಗಿಲ್ಲ. ಚಲೋ ಆತು. ಕಾಮರಾಜ ನಾಡಾರ್ ಆಗಿಲ್ಲ. ಭೇಷಾತು. ಹಿಂಗ ನೋಡಿದ್ರ ವಾಜಪೇಯಿಯವರೂ ಒಂಟೀ ಹನುಮಪ್ಪ ಆಗೇ ಇದ್ರು ನೋಡ್ರಿ. ನಾನೂ ಹುಚ್ಚಖೋಡಿ – ಬಿಂಗ್ರಿ ಮಾಸ್ತರ ಮಾತು ಕಾಳಿ ಲಂಬೋದರ ಆಗಿ ಉಳದೀನಿ.

ಅಂದ್ಹಾಂಗ ನಮ್ಮಾವನ ಮಗಳು ರುದ್ರವ್ವಂಗೂ ವರ್ಸಾ ನಲವತ್ತಾತು. ಹಲ್ಲು ಸೊಲ್ಪ ವಕ್ರ – ಬಣ್ಣ ಕಾಡಿಗೆ – ಬಿಟ್ರೆ ಕನ್ಯಾ ಚಲೋ ಅದಾಳು. ನಮ್ಮಪ್ಪಾ ಅವ್ವಾರು ಹೇಳೇ ಹೇಳ್ತಾರ – ನೀ ಏನು ರಾಜಕಾರಣ ಮಾಡಾವ ಇದ್ದಿಯೇನು? ಡ್ಯಾಂ ಕಟ್ಟಸೋವ ಇದ್ದಿಯೇನು? ಹೆಣ್ಮಗಳು ಒಬ್ಬಾಕಿ ಸಿಗಾದು ತ್ರಾಸ ಕಣಲೇ – ಈಗ ಲಗೂನ ಲಗಣಾ ಆಗಿ ಬಿಡು – ಅಂತ

ಮುಂದಿನ ಬೇಸ್ತುವಾರ ಕೊಟ್ಟೂರು ಕಲ್ಲು ಚಪ್ಪರದಾಗ ನನ್ನ ಮದುವಿ ರುದ್ರವ್ವನ ಕೂಡೆ – ಮರೀಬೇಡ್ರಿ – ಬರ್ರಿ!

✤

---

## ಪದಬಂಧದ ಉತ್ತರ

**ಎಡದಿಂದ ಬಲಕ್ಕೆ**

1. ಖಚಿತ 3. ರಹದಾರಿ 5. ರಿಪು 6. ರವಾನೆ 8. ಕಸಿವಿಸಿ 9. ನವಮಾಸ 11. ಕದಪು 13. ಕೋಪ 16. ತ್ರಯೋದಶಿ 17. ಜಹಜು

**ಮೇಲಿಂದ ಕೆಳಕ್ಕೆ**

1. ಖಳನಾಯಕ 2. ತಕ್ಕಡಿ 3. ರಚಾಮಾವಾ 4. ರಿಪೇರಿ 6. ರಸಿಕ 7. ನೆನಪು 10. ಸರಬರಾಜು 12. ದರವೇಶಿ 14. ಪವಿತ್ರ 15. ಮನುಜ

# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

– ದಂನಆ

- ನನಗೆ ಗಣಿತ ಎಂದರೆ ಅಲರ್ಜಿ. ಆದರೆ ಹಣವನ್ನು ಎಣಿಸಲು ತುಂಬಾ ಇಷ್ಟ
- ಪುಣ್ಯ ಸ್ನಾನ? ಭಕ್ತಾದಿಗಳ ಕೊಳಕೆಲ್ಲ ಕೂಡಿ ನದಿಯೇ ತನಗೊಂದು ಸ್ನಾನಕ್ಕೆ ಕಾತರಿಸುತ್ತಿರುತ್ತದೆ.
- ಅಂತ್ಯವನ್ನು ಗಮನಿಸಿದಾಗ ಭೂರಿ ಭೋಜನಕ್ಕೂ ಸರಳ ಊಟಕ್ಕೂ ಯಾವುದೇ ವ್ಯತ್ಯಾಸವಿರದು. ಅಲ್ಲವೆ?
- ಹಳೆಯ ನಂಬಿಕೆ ಎನ್ನುವುದು ನಿಮ್ಮ ಹಳೆಯ ಬೂಡ್ಸು ಇದ್ದಂತೆ. ಅದನ್ನು ಹಾಕಿಕೊಂಡಾಗ ಎಷ್ಟು ಹಿತವಾಗಿರುತ್ತದೆ ಎಂದರೆ ಅದರಲ್ಲಾಗಿರುವ ತೂತನ್ನು ಗಮನಿಸುವುದೇ ಇಲ್ಲ.
- ನೀವು ಸುಂದರವಾಗಿದ್ದರೆ ಅದು ನಿಮ್ಮ ತಂದೆ-ತಾಯಿ ನಿಮಗೆ ಕೊಟ್ಟ ಉಡುಗೊರೆ. ನೀವು ನಿಮ್ಮ ಬದುಕನ್ನು ಸುಂದರವಾಗಿಟ್ಟುಕೊಂಡರೆ ಅದು ಅವರಿಗೆ ನೀವು ಕೊಡುವ ಉಡುಗೊರೆ.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಅಯ್ಯೋ! ಅವಳು ಕವಿತೆ ಬರೆಯುತ್ತಿದ್ದಾಳಂತೆ...! ಪಾಪ, ಆ ಮುದ್ದು ಮುದ್ದಾದ ಹುಡುಗಿಗೆ ಈ ಸ್ಥಿತಿ ಬರಬಾರದಿತ್ತು...!
- ಆತಂಕವೆ, ಗಡಿಬಿಡಿಯೆ? ನಿಮ್ಮ *calm* ಸೂತ್ರ ಯಾವುದು?
- ಬಿ ಡಿಟಾಚೆಡ್, ನಾಟ್ ಇನ್‌ಡಿಫರೆಂಟ್
- ಸರಿಯಾದ ಅವಕಾಶ ಎನ್ನುವುದು ಹಲವು ಸಂಗತಿಗಳ ಸಂಯೋಗದಿಂದ ಬರುತ್ತದೆ.
- ಕೆಲವರು ಮಳೆಯನ್ನು ಅನುಭವಿಸುತ್ತಾರೆ. ಉಳಿದವರು ಸುಮ್ಮನೆ ಒದ್ದೆಯಾಗುತ್ತಾರೆ.
- ಸುಳ್ಳನ್ನು ಮುಚ್ಚಿಡಲು ಬಳಸುವ ಸಾಧನವನ್ನು ಸಾಮಾನ್ಯವಾಗಿ ಭಾಷೆ ಎನ್ನುತ್ತಾರೆ.
- ಕನ್ನಡಿ ಸುಳ್ಳು ಹೇಳುವುದಿಲ್ಲ ನಿಜ. ಹಾಗೆಯೇ ಅದು ನಮ್ಮನ್ನು ನೋಡಿ ನಗುವುದೂ ಇಲ್ಲ.
- ಹುಲ್ಲು ತಿಂದ ಮುಗ್ಧ ಮೇಕೆಯನ್ನು ಕೊಚ್ಚಿ ಹಾಕಲಾಯಿತು; ಅದನ್ನು ತಿಂದ ನಿನಗೆ ಏನು ಶಿಕ್ಷೆ ಕಾದಿದೆ, ಓ ಮಾನವಾ?
- ಛಂದಗೆ ಊಟ ಬಡಿಸಾಕ ಕಲೀರಿ ಮೊದ್ಲ, ಆಡಿಗಿ ಹಿಂದಾಗಡೆ ಕಲೀವಂತ್ರಿ.
- ವಿಮಾನ ದರಗಳು ಮುಗಿಲು ಮುಟ್ಟುತ್ತಿವೆ!

# ಈರುಳ್ಳಿ ಪರ್ವ

**– ಸಿ.ಆರ್. ಸತ್ಯ**

ಪ್ರತಿ ವರುಷ ಡಿಸೆಂಬರ್ 31ರಂದು ನನ್ನ ಸೋದರಮಾವ ಕೋದಂಡುವಿನ ಮನೆಗೆ ಹೋಗಿ ಆಗಲೇ ಮುಗಿಯುತ್ತಿರುವ ವರ್ಷದ ಆಗುಹೋಗುಗಳನ್ನೆಲ್ಲಾ ಮೆಲಕು ಹಾಕಿ, 'ಹ್ಯಾಪಿ ನ್ಯೂ ಇಯರ್' ಹೇಳಿ ಬರೋದು ನನ್ನ ಒಂದು ಅಭ್ಯಾಸ. 2013ರ ಡಿಸೆಂಬರ್ 31ರ ರಾತ್ರಿ ಅವನ ಮನೆಯ ಬಾಗಿಲು ತಟ್ಟಿದಾಗ ಅವನ ಹೆಂಡತಿ ಬಾಗಿಲು ತೆರೆದು, ''ಇವತ್ತು ಯಾಕೋ ಅಪ್ಸೆಟ್ ಆಗಿದಾರೆ ಮಾವಯ್ಯ'' ಅಂತ ಒಂದು ಮುನ್ಸೂಚನೆ ಕೊಟ್ಟಳು. ಒಳಗೆ ಹೋದೆ. ಕೋದಂಡೂ ದಿವಾನ್ ಮೇಲೆ ಮೂಲೇಲಿ ಒರಗಿದ್ದ. ಕಣ್ಣುಗಳೂ ಕೆಂಪಾಗಿದ್ದವು. ಕಣ್ಣೀರು ಕೋಡಿ ಅವನ ಬನಿಯನ್ನೆಲ್ಲಾ ತೋಯಿಸಿತ್ತು.

**ವರ್ಷದ ಪೂರ್ತಿ ಗೂಳಿಯ ತರಹ ಓಡಾಡಿಕೊಂಡು ಇದ್ದ ಕೋದಂಡೂಗೆ ಯಾವಾಗ ಕಷ್ಟದ ದಿನಗಳು ಬಂದವು?**

''ಏನಾಯ್ತೊ ಕೋದಂಡೂ...? ಏನಾದ್ರೂ ಕಂಜೆಕ್ಟುವೈಟಿಸ್ಸೇ?'' ಅಂತ ಕೇಳಿದೆ. ಇಲ್ಲ ಅನ್ನೋ ಹಾಗೆ ತಲೆ ಅಲ್ಲಾಡಿಸಿದ. ''ಹೊಟ್ಟೆ ಅಪ್ಸೆಟ್ ಏನೂ?'' ಅಂತ ಕೇಳಿದೆ. ಅದಾದರೂ ಆಗಿದ್ರೆ ಟಾಯಿಲೆಟ್ಗೆ ಹೋಗಿ ರಿಲೀವ್ ಮಾಡಿಕೊಂಡು ಬರ್ತಾ ಇದ್ದೆ. ಅದಲ್ಲ ಪ್ರಾಬ್ಲಮ್ಮು'' ಅಂದ.

''ನಾಳೆಯಿಂದ ಹೊಸ ವರುಷ ಕಣೋ ಕೋದಂಡು. ನಗುನಗುತ್ತಾ ಇರೋ ದಿನಾ ಇದು. 2013 ಹೇಗಾಯಿತು ಅಂತ ಕೇಳೋಣಾ ಅಂತ ಬಂದೆ. ಯಾಕಿಷ್ಟೊಂದು ಕಣ್ಣೀರು?'' ಅಂತ ಪ್ರಶ್ನಿಸಿದೆ.

''ಈರುಳ್ಳಿ'' ಅಂದ ಕೋದಂಡು.

''ಈರುಳ್ಳಿ...? ಅದಕ್ಕೂ 2013ಕ್ಕೂ ಏನು ಸಂಬಂಧ'' ಅಂದೆ.

''ಮಾವ, ನಿನಗೆ ಇತ್ತೀಚೆಗೆ ಸೆನ್ಸಿಟಿವಿಟಿ ಅನ್ನೋದೇ ಇಲ್ಲ. ನನಗೆ ಈರುಳ್ಳಿ ಪಂಚ ಪ್ರಾಣ ಅಂತ ಮರೆತು ಹೋದ್ಯಾ? ನನಗೆ ಪ್ರತಿ ದಿನಾನೂ ಏನಾದರೂ ಒಂದು ಈರುಳ್ಳಿ ಐಟೆಮ್ ಊಟಕ್ಕೋ, ತಿಂಡೀಗೋ ಇರಲೇಬೇಕು. ಈರುಳ್ಳಿ ಹುಳೀ ಇರಬಹುದು, ಈರುಳ್ಳಿ ಪಲ್ಯ ಇರಬಹುದು, ಈರುಳ್ಳಿ ಗೊಜ್ಜು ಇರಬಹುದು, ಈರುಳ್ಳಿ ರೊಟ್ಟಿ ಇರಬಹುದು–''

''ಈರುಳ್ಳಿ ಬೋಂಡಾನೂ ಇರಬಹುದು...'' ಅವನ ಹೆಂಡತಿ ಬಾಯಿ ಹಾಕಿ ಹೇಳಿದಳು. ''ಹೌದು, ಬೋಂಡಾನೂ ಇರಬಹುದು. ಈರುಳ್ಳಿ ವಡೇನೂ ಇರಬಹುದು. ಒಟ್ಟಿನಲ್ಲಿ ನನ್ನ ಮೆನುನಲ್ಲಿ ಈರುಳ್ಳಿ ಇಲ್ಲದ ದಿನವೇ ಇರ್ತಾ ಇರಲಿಲ್ಲ...''

''ಗೊತ್ತಪ್ಪಾ. ನಿನ್ನ ಹೆಂಡತಿ ದಿನಾನೂ ಈರುಳ್ಳಿ ಕತ್ತರಿಸಿ ಕಣ್ಣೀರು ಹಾಕೋದೂ ನಾವೆಲ್ಲಾ ಕಂಡಿಲ್ಲವೆ? ಅಂತಹ ಹೆಂಡತಿಯನ್ನು ಪಡೆಯೋದಕ್ಕೆ ನೀನು ಪುಣ್ಯ ಮಾಡಿದ್ದೆ. ಅವಳಂತೂ ಕಣ್ಣೀರು ಸುರಿಸ್ತಾಳೆ, ಅವಳ ಕರ್ಮ. ಆದರೆ ನಿನ್ನ ಕಣ್ಣಲ್ಲಿ ಯಾಕೆ ನೀರು?'' ಅಂತ ಕೇಳಿದೆ.

''ನಾನು ಹೇಳಿದೆನಲ್ಲಾ ಮಾವಾ. ನಿನಗೆ ಏನೂ ಸೆಂಟಿಮೆಂಟ್ಸೇ ಇಲ್ಲ. 2013 ವರ್ಷ ಹೇಗೆ ಆಯಿತು ಅಂತ ಮೆಲಕು ಹಾಕ್ತಾ ಇದ್ದಾಗ ನನಗೆ ದೇವರು ಎಂತಹ ಕಷ್ಟದ ದಿನಗಳನ್ನು ಕೊಟ್ಟ ಅಂತ ನೆನಸಿಕೊಂಡು ದುಃಖ ಒತ್ತರಿಸಿಕೊಂಡು ಬರ್ತಿದೆ. ಅದಕ್ಕೇ ಈ ಕಣ್ಣೀರು ಅಂದ.

''ನನಗೆ ತಿಳಿದ ಹಾಗೆ, ವರ್ಷದ ಪೂರ್ತಿ ಗೂಳಿಯ ತರಹ ಓಡಾಡಿಕೊಂಡು ಇದ್ದಲ್ಲೋ ಕೋದಂಡೂ! ಇವನಿಗೆ ಯಾವಾಗಮ್ಮಾ ಕಷ್ಟದ ದಿನಗಳು ಬಂತು? ಅಂತ ಅವನ ಹೆಂಡತಿಯನ್ನು ಕೇಳಿದೆ.'' ಅದೇ ಮಾವಯ್ಯ, ಒಂದೆರಡು ತಿಂಗಳು ಈರುಳ್ಳಿ ಬೆಲೆ 75-100 ಕೆ.ಜಿ. ಆಗಿತ್ತಲ್ಲ - ಆವಾಗ ನಾನು ಈರುಳ್ಳಿ ಬದಲು ಸೊಪ್ಪು ಸದೆ ಚೀಪ್ ತರಕಾರಿಗಳನ್ನ ತರ್ತಾ ಇದ್ದೆ. ಈರುಳ್ಳಿ ಇಲ್ಲದ ಅಡಿಗೆ ದಿನಗಳು ಅವು. ಅದನ್ನ ನೆನಸಿಕೊಳ್ಳುತ್ತಾ ಇದಾರೆ ಅಂತ ವಿವರಣೆ ಕೊಟ್ಟಳು. ಈಗ ನನಗೆ ಅರ್ಥವಾಯಿತು - ಇಂತಹ ಸಾಧು ಪ್ರಾಣಿಗೆ 2013 ಎಂತಹ ಕಷ್ಟ ಕೊಡ್ತು ಅಂತ. ಅನುಕಂಪದಿಂದ ಅವನ ಕಡೆ ನೋಡಿದೆ.

''ಅದೆಂತಹ ಘೋರ ದಿನಗಳಾಗಿದ್ದವು ಮಾವ.... ಒಂದೇ ಏಟಿಗೆ ಈರುಳ್ಳಿ ಅಂಗಡಿಗಳಿಂದ ಮಾಯವಾಯ್ತು. ಯಾರೋ ಬ್ಲ್ಯಾಕ್ ಮಾರ್ಕೆಟ್‌ನಲ್ಲಿ ಕೆ.ಜಿ.ಗೆ 150ರೂ. ಹಾಗೆ ಕೊಡ್ತೀನಿ ಅಂದ್ರು. ದುಡ್ಡು ತೊಗೊಂಡು ಆಸಾಮಿ ಎಲ್ಲೋ ಓಡಿ ಹೋಗಿಬಿಟ್ಟ. ನಮ್ಮ ಪ್ರಾವಿಷನ್ ಅಂಗಡಿ ಶೆಟ್ಟರು ಪಾಕೀಸ್ತಾನ್‌ನಿಂದ ಇಂಪೋರ್ಟೆಡ್ ಈರುಳ್ಳಿ ತರಿಸಿಕೊಡ್ತೀನಿ ಅಂತ 500ರೂ. ಅಡ್ವಾನ್ಸ್ ತೊಗೊಂಡರು - ಆಮೇಲೆ ಅಂಗಡಿನೇ ಮುಚ್ಚಿಕೊಂಡು ಹೋದರು. ನಮ್ಮ ಮನೆ ಮುಂದೆ ಗಾಡೀಲಿ ತರಕಾರಿ ಮಾರೋನು ನಮಗೆ ಖಂಡಿತಾ ಒಳ್ಳೇ ರೇಟ್ನಲ್ಲಿ ಈರುಳ್ಳಿ ತಂದುಕೊಡ್ತೀನಿ ಅಂದ - ಅವತ್ತು ರಾತ್ರೀನೇ ಅವನ ಈರುಳ್ಳಿ ಸ್ಟಾಕ್‌ನೆಲ್ಲಾ ಯಾರೋ ಕದ್ದುಬಿಟ್ಟರಂತೆ, ಆದರೆ ಅವನ ಗಾಡೀನೂ ಮಿಕ್ಕಿದ ತರಕಾರಿಗಳನ್ನೂ ಹಾಗೇ ಬಿಟ್ಟಿದರಂತೆ! ಮಾರನೇ ದಿನ ಅವನೂ ನನ್ನ ಜೊತೆಗೆ ಕಣ್ಣೀರು ಹಾಕಿದ -''

''ಸ್ಟುಪಿಟ್ ಕೋದಂಡೂ, ಒಂದೆರಡು ದಿನಗಳು ಈರುಳ್ಳಿ ಇಲ್ಲದಿದ್ದರೆ ನೀನೇನೂ ಪ್ರಾಣ ಬಿಡ್ತಾ ಇದ್ಯಾ?'' ಅಂತ ಗಡುಸಾಗೇ ಕೇಳಿದೆ.

''ಆ ಸ್ಟೇಜ್‌ಗೇ ಬಂದಿದ್ದು ಮಾವಯ್ಯಾ. ಯಾರೋ ಹೇಳಿದ್ರು 'ನಿಮ್ಮ ಯಜಮಾನರನ್ನಾ ಡಿ ಅಡಿಕ್ಷನ್ ಸೆಂಟರ್‌ಗೆ ಕರೆದುಕೊಂಡು ಹೋಗೀಮ್ಮಾ, ಇಲ್ಲದಿದ್ದರೆ ಅವರಿಗೆ ಏನಾದ್ರೂ ಹೆಚ್ಚು ಕಮ್ಮಿ ಆಗಬಹುದು' ಅಂತ. ಆದರೆ...'' ಅಂತ ಅವನ ಹೆಂಡತಿ ಅಲ್ಲಿಗೇ ಮಾತು ನಿಲ್ಲಿಸಿದಳು.

''ಏನಾಯ್ತು?'' ಅಂತ ಕೇಳಿದೆ.

ಬಿಕ್ಕಿ ಬಿಕ್ಕಿ ಅಳುತ್ತಾ ಕೋದಂಡು, ''ನನ್ನ ನೋಡಿ, ಇದೊಂದು ಭಾರಿ ಡಿ ಅಡಿಕ್ಷನ್ ಕೇಸೂ.... ನಮಗೆ ಧೂಮಪಾನ, ಡ್ರಗ್ಸು, ಆಲ್ಕೋಹಾಲ್ ಅಭ್ಯಾಸ ಬಿಡಿಸೋದು ಗೊತ್ತು

ಅಷ್ಟೆ ಈರುಳ್ಳಿ ಡಿ ಅಡಿಕ್ಷನ್ ಅನ್ನೋದು ಈಗಲೇ ಕೇಳ್ತೀರೋದು. ಯಾವುದಾದರೂ ಮಂತ್ರವಾದಿ ಹತ್ತಿರ ಹೋಗಿ ಅಂತ ಹೇಳೋದೇ...?'' ಅಂತ ಕಣ್ಣೀರು ಒರಸಿಕೊಂಡ.

''ಹೀಗೆ ಸುಮಾರು ಒಂದು ತಿಂಗಳು ಒದ್ದಾಡಿದರು ಮಾವಯ್ಯ. ಆಫೀಸ್ಗೂ ರಜ ಹಾಕಿದ್ರು. ನಿದ್ರೆ ಕೆಡಸಿಕೊಂಡು ಓಡಾಡ್ತಿದ್ರು. ಪಾಪ, ಏನಿಲ್ಲಾ ಅಂದರೂ ಒಂದು 5 ಕೆ.ಜಿ. ಅಷ್ಟಾದರೂ ಮೈ ಭಾರಾನೂ ಕಳ್ಕೊಂಡರು...'' ಅಂತ ಗದ್ಗದ ದನಿಯಲ್ಲಿ ನೆನಸಿಕೊಂಡಳು.

''ಅದೇನು ಬಿಡಮ್ಮ, ಅವನು 10 ಕೆ.ಜಿ. ಕಮ್ಮಿ ಆದರೂ ನೋಡೋಕ್ಕೆ ಹಾಗೇ ಇರ್ತಾನೆ. ಸರಿ, ವರ್ಷದ ಕೊನೆಯಲ್ಲಿ ಈರುಳ್ಳಿ ಬೆಲೆ ಸ್ವಲ್ಪ ಇಳೀತಲ್ಲಾ?''

''ಹೌದು ಮಾವಯ್ಯ. 40-50ರೂ. ಕೆ.ಜಿ. ಅಂತ ಆಯ್ತು. ಈ ಸಲ ಸುಮಾರು 50 ಕೆ.ಜಿ.ಯಷ್ಟು ಒಂದೇ ಏಟಿಗೆ ಕೊಂಡ್ಕೊಂಡು, ಸ್ಟಾಕ್‌ನಲ್ಲಿ ಇಟ್ಟೆ. ಮುಂಚಿನ ಹಾಗೇ ಇವರ ನಿತ್ಯ ಪಥ್ಯ ಈರುಳ್ಳೀಲೇ ಶುರು ಮಾಡಿದೆ. ಡಿಸೆಂಬರ್‌ನಿಂದ ಚೆನ್ನಾಗಿ ಊಟ ಮಾಡ್ತಾ ಲವಲವಿಕೆ ಇಂದ ಇದಾರೆ'' ಅಂತ ನಿಟ್ಟುಸಿರು ಬಿಟ್ಟಳು.

''ಅದನ್ನ ನೋಡಿದರೇ ಗೊತ್ತಾಗುತ್ತೆ. ಐದು ಕೆ.ಜಿ. ಕಮ್ಮಿ ಆಗಿ ಈಗ ಹದಿನೈದು ಕೆ.ಜಿ. ಎಕ್ಸ್ಟ್ರಾ ಆಗಿದಾನೆ. ಅಂದ ಹಾಗೆ, 2014ರ ಪ್ಲಾನ್ಸ್ ಏನೋ ಕೋದಂಡೂ?'' ಅಂತ ವಿಚಾರಿಸಿದೆ.

''2014ರಲ್ಲಿ ಇಂತಹ ಆಘಾತ ಆಗಬಾರದು ಅಂತ ನೂರು ಕೆ.ಜಿ. ಈರುಳ್ಳೀನ ಕೊಂಡುಕೊಂಡು ಬ್ಯಾಂಕ್ ಲಾಕರ್‌ನಲ್ಲಿ ಇಡ್ತಾ ಇದೀನಿ. ಅದಲ್ಲದೇ ಒಂದು ಬಿಸಿನೆಸ್ ಐಡಿಯಾ ನೂ ಬಂದಿದೆ ಮಾವಾ'' ಅಂದ.

''ಏನೋ ಅದು?'' ಅಂತ ಕೇಳಿದೆ.

''ಒಂದು ಟನ್ ಅಷ್ಟು ಈರುಳ್ಳಿ ಸ್ಟಾಕ್ ಮಾಡ್ಕೊಂಡು ಯಾಕೆ ನನ್ನಂತಹವರಿಗೇ ಲಾಭಕ್ಕೆ ಮಾರಿ ದುಡ್ಡು ಮಾಡಿಕೋಬಾರದೂ ಅಂತ. ದಿಲ್ಲಿನಲ್ಲೂ ಏನಾದರೂ 2014ರಲ್ಲಿ ಯೂ.ಪಿ.ಎ. ಸರ್ಕಾರಾನೇ ಗೆದ್ದು ಬಂದರೆ, ಈರುಳ್ಳಿ ಬೆಲೆ ಕೆ.ಜಿ.ಗೆ 200ರೂ. ಆಗೋದಂತೂ ಖಂಡಿತ. ಹೇಗಿದ್ದರೂ ಎಷ್ಟು ದಿನಾ ಇಟ್ಟರೂ ಈರುಳ್ಳಿ ಏನೂ ಕೆಡೋದಿಲ್ಲ. ನನ್ನ ಬೆಡ್‌ರೂಮ್‌ನಲ್ಲೂ ಸ್ವಲ್ಪ ಜಾಗ ಇದೆ. ಅದನ್ನ ಈರುಳ್ಳಿ ಗೋಡೌನ್ ಆಗಿ ಮಾಡಿಕೋಬಹುದು.''

''ಹಾಗಾದರೆ, ನಿನ್ನ ಹೆಂಡತಿಯನ್ನ ಬೆಡ್‌ರೂಮ್‌ನಿಂದ ಹೊರಗೆ ಓಡಿಸ್ತೀಯೇನೋ ಕೋದಂಡೂ?'' ಅಂತ ಗಾಬರಿಯಿಂದಲೇ ಕೇಳಿದೆ.

''ಎಲ್ಲಾದರೂ ಉಂಟೇ ಮಾವ? ಈರುಳ್ಳಿ ನನ್ನ ಫಸ್ಟ್ ಲೌವ್ ಆದರೆ, ಅವಳು ನನ್ನ ಸೆಕೆಂಡ್ ಲೌವ್!'' ಅಂತ ನೋವಿನಿಂದ ನಕ್ಕ.

ಪಾಪ, ಅದಕ್ಕೇ ಅವನ ಹೆಂಡತಿ ನಾಚಿಕೆ ಪಟ್ಕೊಂಡಳು. ಆದರೆ ನನಗೆ ಯಾಕೋ ಹೆದರಿಕೆ ಆಯ್ತು. ಕೋದಂಡು ಇರೋದು ಸೆಕೆಂಡ್ ಫ್ಲೋರ್ ಫ್ಲಾಟ್ನಲ್ಲಿ, ಅವನ ಬೆಡ್‌ರೂಮಿನ

ಫ್ಲೋರಿಂಗ್ ಇವರ ತೂಕ (ಕೋದಂಡು 100, ಹೆಂಡತಿ 100 ಮತ್ತು ಈರುಳ್ಳಿ 1,000 = ಒಟ್ಟು 1200 ಕೆ.ಜಿ.) ತಡೆದುಕೊಳ್ಳುತ್ತೇ ಅಂತ ಅನುಮಾನ ಬಂದರೂ ಬಾಯಿ ಬಿಡಲಿಲ್ಲ. ಆದರೂ ಒಂದು ಸುಳ್ಳು ನಗೆ ಬೀರುತ್ತಾ, ''ಏನೇ ಆಗಲೀ, ಹ್ಯಾಪೀ ನ್ಯೂ ಇಯರ್ ಕೋದಂಡೂ. ನಿಮಗೆ ದೇವರು ಸಮಸ್ತ ಸಂತೋಷವನ್ನ ಕೊಡಲಿ. ನಿನ್ನ ಹೆಂಡತಿಯ ಕೈನಲ್ಲಿ ಎಂದೂ ಒಂದು ಈರುಳ್ಳಿ ಇರಲಿ ಅಂತ ಹಾರೈಸ್ತೀನಿ'' ಅಂತ ಹೇಳಿ ಹೊರಡೋದಕ್ಕೆ ಎದ್ದು ನಿಂತೆ.

ಇಬ್ಬರೂ ''ಥ್ಯಾಂಕ್ಸ್ ಮಾವಯ್ಯ, ವಿಷ್ ಯು ದಿ ಸೇಮ್'' ಅಂದರು.

ಅವನ ಹೆಂಡತಿ – ಒಳ್ಳೇ ಹುಡುಗಿ ಪಾಪ – ''ಈರುಳ್ಳಿ ಹುಳಿ ಮಾಡಿದೀನಿ ಮಾವಯ್ಯ. ಇಲ್ಲೇ ಊಟ ಮಾಡಿಕೊಂಡು ಹೋಗಿ'' ಅಂತ ಹೇಳಿದಳು. ಬಿಡ್ತೀನ್ಯೇ...?

''ಆಗಲಮ್ಮ'' ಅಂತ ಊಟಕ್ಕೆ ಹೊರಟೆ.

(ನಿಮ್ಮ ಹತ್ತಿರ ನಿಜ ಹೇಳಬೇಕು ಅಂದರೆ, ನನಗೂ ಈರುಳ್ಳಿ ಅಂದರೆ ಸ್ವಲ್ಪ ವೀಕ್‌ನೆಸ್ಸೇ! ಫ್ಯಾಮಿಲಿ ಟ್ರೈಟ್ ಅಂತ ಕಾಣುತ್ತೆ).

✤

---

**ಬೆಳಕನ್ನು ಹಾಗೇ ಉಳಿಸಿ ಹಣತೆ ಮರೆಯಾಯಿತು...**

ನಮ್ಮ ನಾಡಿನ ಹೆಮ್ಮೆಯ ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪನವರು ಇಹಲೋಕದ ವ್ಯಾಪಾರವನ್ನು ಮುಗಿಸಿ ಕಾಣದ ಊರಿಗೆ ಹೊರಟಿದ್ದಾರೆ. ಅವರೇ ಹೇಳಿದಂತೆ ಕಾಣದ ಊರಿಗೆ ಅವರ ಮನ ಹಂಬಲಿಸುತ್ತಿತ್ತೋ ಏನೋ, ಕವಿಗಳಿಗೆ ಸಾವಿಲ್ಲ, ಅವರು ಸದಾ ನಮ್ಮೊಂದಿಗೆ ಇದ್ದೇ ಇರುತ್ತಾರೆ. ಅವರ ಬರಹಗಳ ಮೂಲಕ, ಅವರು ರಚಿಸಿರುವ ಅನನ್ಯ ಕಾವ್ಯಗಳ ಮೂಲಕ, ಅದರಲ್ಲೂ ಸಿ. ಅಶ್ವಥ್ ಅವರು ಜಿ.ಎಸ್.ಎಸ್. ಅವರ ಗೀತೆಗಳಿಗೆ ಸಮರ್ಥವಾಗಿ ರಾಗಸಂಯೋಜನೆ ಮಾಡಿ ಅವುಗಳನ್ನು ಜನರ ಹೃದಯದಲ್ಲಿ ಶಾಶ್ವತವಾಗಿ ಸ್ಥಾಪಿಸಿಬಿಟ್ಟಿದ್ದಾರೆ. ಹೀಗಾಗಿ ಜಿ.ಎಸ್.ಎಸ್. ನಮ್ಮೊಂದಿಗೆ ಇದ್ದೇ ಇರುತ್ತಾರೆ.

ಜಿ.ಎಸ್.ಎಸ್. ಅವರು ಕೊರವಂಜಿ ಅಪರಂಜಿ ಅಭಿಮಾನಿಗಳೂ ಆಗಿದ್ದರು. ಈ ಹಿಂದೆ ಕೊರವಂಜಿಯಲ್ಲಿ ಅವರ ಕವನಗಳು ಪ್ರಕಟವಾಗಿದೆ. ಜಿ.ಎಸ್.ಎಸ್. ಕಸ್ತೂರಿಯವರ ಒಡನಾಡಿಯೂ ಆಗಿದ್ದರು.

ಕೊರವಂಜಿ ಅಪರಂಜಿ ಟ್ರಸ್ಟ್ ಜಿ.ಎಸ್.ಎಸ್. ಅವರ ಆತ್ಮಕ್ಕೆ ಶಾಂತಿ ಕೋರಿ ಅವರ ರಚನೆಗಳು ಇನ್ನೂ ನೂರ್ಕಾಲ ಜನಮನದಲ್ಲಿ ಹಾಸುಹೊಕ್ಕಾಗಿರಲಿ ಎಂದು ಆಶಿಸುತ್ತದೆ.

# ಹೌದಾ ಜೀವು? ಸರಿ ಹಾಗಾದ್ರೆ, ಎಲ್ಲಾ ಒಳ್ಳೇದಕ್ಕೇನೇ

**- ಎಚ್.ಆರ್. ಹನುಮಂತ ರಾವ್**

**ಭಾ**ನುವಾರದ ಬೆಳಿಗ್ಗೆ ಅರೆ ನಿದ್ರಾವಸ್ಥೆಯ ಕಣ್ಣು ತೆರೆದಾಗ, ಎದುರಿನ ಗೋಡೆ ಗಡಿಯಾರ 9 ಗಂಟೆ ತೋರಿಸುತ್ತಿತ್ತು. ಪಕ್ಕದಲ್ಲಿನ ಫೋನಿನ ಕರೆ ಗಂಟೆ ರಿಂಗುಣಿಸುತ್ತಿತ್ತು. ಸವಿನಿದ್ದೆಯನ್ನು ಕೆಡಿಸುವವರು ಯಾರಿರಬಹುದೆಂದು ರಿಸೀವರನ್ನು ಕೈಗೆ ತೆಗೆದುಕೊಂಡೆ, ಆ ಕಡೆಯಿಂದ ಜೋರಾಗಿ, ಎಂ.ಜಿ.ಎಂ. ಪಿಕ್ಚರ್ಸ್ನ ಸಿಂಹ ಗರ್ಜಿಸಿದ ತರಹ, ತೇಲಿ ಬಂದ ರೇಖಾ ಸೋದರತ್ತೆಯ ಧ್ವನಿ, ಅರೆನಿದ್ದೆಯಿಂದ ಹೊಡೆದೆಬ್ಬಿಸಿತು. ''ಇನ್ನಾ ನಿಮ್ಗೆ ಬೆಳಗಾಗಿಲ್ವೇನೋ ರಾಜೀವ? ರಾತ್ರಿ ಎಲ್ಲೆಲ್ಲೋ ಹೋಗಿ ಏನೇನ್ ಹೊಟ್ಟೆಗೆ ಹಾಕ್ಕೊಂಡು, ಯಾವಾಗ ಬರ್ತೀರೋ ಏನೋ, ಮನೇಲೂ ಇರಲ್ಲ, ಇದ್ರು ಫೋನೂ ಎತ್ತೊಲ್ಲಾ?''

ಆಕೆ ಯಾವಾಗ್ಲೂ ಹೀಗೆ, ಫೋನಲ್ಲಿ ಮಾತಾಡಿದ್ರೆ, ಪಕ್ಕದ ಮನೆವರ್ಗೂ ಕೇಳುತ್ತೆ.

ಬಹುಷಃ ಅವರಪ್ಪ ಅರಣ್ಯ ಇಲಾಖೇಲಿ ಇದ್ದದ್ದರಿಂದಲೋ ಏನೋ, ಬೇಟೆ ನಾಯಿಗಳನ್ನ ಸಾಕಿದ್ದು, ಆ ಪ್ರಭಾವ ಈಕೆ ಮೇಲೆ ಬೀರಿರ್ಬೇಕು! ನಮ್ಮನ್ನೆಲ್ಲಾ ಚಿಕ್ಕಂದ್ನಲ್ಲಿ ಮಮತೆಯಿಂದ ಸಾಕಿದ್ದವರು ಈಕೆ, ಅದಕ್ಕೆ ನಮಗೆಲ್ಲ ಸದರ. ನಮ್ಮ ಎಲ್ಲಾ ಅತ್ತೆಗಳ ಪೈಕಿ ಈಕೆ ನಮಗೆ ಏನ್ ಬಯ್ದರೂ ಆಶೀರ್ವಾದಾನೇ.

''ಸಾರ್, ಕಾಫಿ'' ಜೀವು ಬಿಸಿ ಬಿಸಿ ಕಾಫಿ ತಂದಿಟ್ಟು ಹೊರಡೋದ್ರಲ್ಲಿದ್ದ.

ಫೋನ್ನ ದೂರ ಇಟ್ಕೊಂಡು ಜೀವುಗೆ ''ಸ್ವಲ್ಪ ಇಲ್ಲೇ ಇರು ಜೀವು, ಆ ಕಡೆ ಆಲಿಕಲ್ಲು, ಗುಡುಗು ಎಲ್ಲ ಆಗ್ತಿದೆ.''

''ಏನಂದೆ?'' - ಅತ್ತೆ ಉವಾಚ.

''ಏನಿಲ್ಲ ಅತ್ತೆ, ಟೀವಿನಲ್ಲಿ ಸಂಜೆಗೆ ಮಳೆ, ಗುಡ್ಗು, ಮಿಂಚು ಸಮೇತ ಬರ್ಬೋದು ಅಂತ ಹೇಳ್ತಿದ್ದನ್ನ ಜೀವೂಗೆ ತಿಳಿಸ್ತಿದ್ದೆ. ಭಾನುವಾರ ಒಂದಿನ ಆದ್ರೂ ನಿಧಾನವಾಗಿ ಏಳೋಣಾಂದ್ರೆ, ಯಾಕೀ ಬೆಳಗ್ಗೆ, ಬೆಳಗ್ಗೇನೆ ಅವಸರದ ಫೋನು? ಮಾವ ಏನಾದ್ರೂ ನಿಮ್ಮೇಲೆ ಕ್ವಾಪ ಮಾಡ್ಕೊಂಡು ಮೌನವ್ರತ ಆಚರಸ್ತಿದಾರ?''

''ನನ್ನ ಗಂಡ ಮುನಿಸಿಕೊಂಡ್ರೆ ನಿಂಗೆ ಫೋನ್ ಮಾಡೋಷ್ಟು ದಡ್ಡಿ ಅಲ್ಲ ನಾನು. ಮುತ್ತಾ್ಳನ ತರಹ ಮಾತಾಡೋದನ್ನ ಇನ್ನಾದ್ರೂ ಬಿಡು. ಅಷ್ಟಕ್ಕೂ ಈ ವಯಸ್ನಲ್ಲಿ ನಿಮ್ಮಾವ ಮುನ್ನಿಕೊಂಡ್ರೆ ತಿರುಪಿನ ಚೆಂಬು, ಕಂಬಳಿ, ಡಮಾರ್ ಟ್ರಂಕು ಹಿಡಿದು ತೀರ್ಥಯಾತ್ರೆಗೆ ಹೋಗ್ಬೇಕಷ್ಟೆಯಾ.''

''ಈಗೆಲ್ಲಾ ಮಾಡ್ರನೈಸ್ ಆಗಿರ್ತಾರೆ ಅತ್ತೆ. ಸ್ಟೈನ್ಲೆಸ್ ಸ್ಟೀಲ್ ಫ್ಲಾಸ್ಕು, ಕ್ವಿಲ್ಟು, ಟ್ರಾಲಿ ಸೂಟ್ಕೇಸು ಉಪಯೋಗಿಸೋದು.''

''ವಿಷಯಕ್ಕೆ ಬಾ ಸುಮ್ನೆ. ಬಾಯಿದೆ ಅಂತ ಏನೇನೋ ಹರ್ಟಬೇಡ. ನಿನ್ನೇ ಇಂದ ಫೋನ್ ಮಾಡ್ತಾನೇ ಇದ್ದೀನಿ – ಕ್ಲಬ್ಬು, ಬಾರೂ, ಅದೂ, ಇದೂ ಅಂತ ಎಲ್ಲೆಲ್ಲೋ ಅಲೀತ್ತಿರ್ತೀಯಾ. ಆ ಹಾಳಾದವನು ಇದಾನಲ್ಲ ನಿನ್ನ ಬಲಗೈ ಬಂಟ ಜೀವೂಗೆ ಹೇಳಿ ಹೇಳಿ ಸಾಕಾಯ್ತು. ನಾಳೆ ಸಂಜೆ 5 ಗಂಟೆ ಒಳಗೆ ನಮ್ಮನೇಲಿದ್ರೆ ಸರಿ. ಇಲ್ಲಾಂದ್ರೆ ಅಷ್ಟೆ'' ಎನ್ನುತ್ತಾ ಫೋನನ್ನು ಆ ಕಡೆ ಕುಕ್ಕಿದ್ಳು.

ಅಲ್ಲ, ಈ ಅತ್ತೆ ಮತ್ತು ಆಕೆಯ ವಯಸ್ಸಿಗೆ ಬಂದ ಮಗಳು 'ಚಿತ್ರ' ಜೊತೇಲಿ ಒಂದು ವಾರ ಮುಂಬೈ ಎಲ್ಲಾ ಸುತ್ತಿ ಬಂದು ಇನ್ನೂ ಹದಿನೈದು ದಿನಾನೂ ಆಗಿಲ್ಲ. ಆಗ್ಲೇ ಊರ್ಗೆ ಬಾ ಅಂತಿದಾಳಲ್ಲ! ಯಾಕೆ ಹೇಳಕ್ಕೆ ಬಂದೆ ಅಂದ್ರೆ, ನನ್ನ ಜೊತೆ ಯಾರ್ಗೂ ಸಾಮಾನ್ಯವಾಗಿ ಎರಡು ದಿನಕ್ಕೂ ಹೆಚ್ಚಿಗೆ ಇರಲು ಆಗೋಲ್ಲ! ನಂಗೂ ಅಷ್ಟೇ ಒಗ್ಗಲ್ಲ. ಹಾಗಿದ್ದು, ಮತ್ತೆ ನನ್ನ ದರ್ಶನ ಯಾಕೆ ಇವರಿಗೆ ಬೇಕು?

''ಜೀವೂ''

''ಸಾರ್''

''ಅಲ್ಲಾ ಏನಿದ್ದೀತೂ ಅಂತ ಮತ್ತೆ ಈ ಬುಲಾವ್ ನಂಗೆ? ಚಿತ್ರಾ ಮದ್ವೆ ನಮ್ ತರ್ಕಲಾಂಡಿ ಶಿವೂ ಜೊತೆಗೆ ಸೆಟ್ಲಾಗಿದೆ, ಜಾನಕಿರಾಮ್ ಸೋದರಮಾವಾಗೆ ಬೀಪಿ, ಶುಗರು, ಇನ್ಕಂಟ್ಯಾಕ್ಸು ಎಲ್ಲಾ ಓಕೇ. ಚಿಕ್ಮಗ್ಳೂರಲ್ಲಿ ಪ್ರವಾಹ, ಸರ್ಕಸ್ ದುರಂತ, ಜ್ವಾಲಾಮುಖಿ, ಹಗಲು ದರೋಡೆ, ಸೀರಿಯಲ್ ಕೊಲೆಗಳು, ಹುಲಿ ನುಗ್ಗಾಟ ಇತ್ಯಾದಿ ಎಂಥದೂ ಆಗಿಲ್ಲ?''

''ಹಾಗೇನೂ ಇಲ್ಲ ಸಾರ್. ಆದ್ರೆ, ಚಿತ್ರಕ್ಕ ಅವ್ರ ನಿಶ್ಚಿತಾರ್ಥ ಶಿವೂ ಅವ್ರ ಜೊತೆ ಮುರಿದುಬೀಳೋ ಪರಿಸ್ಥಿತಿ ಇದೆ.''

''ಹಾಗಂತ ಪೇಪರ್ನಲ್ಲಿ ಹಾಕಿದ್ರಾ ಜಾನು ಮಾವ?''

''ಇಲ್ಲ. ನಿನ್ನೆ ಶಿವಕುಮಾರ್ ಸಾರ್ ಅವ್ರು ಇಲ್ಲಿಗೆ ಬಂದಿದ್ರು. ಅವ್ರೇ ಹೇಳಿದ್ದು.''

''ಮತ್ತೆ, ನಂಗ್ಯಾಕ್ ಹೇಳಿಲ್ಲ?''

''ಸಾರ್, ಅವ್ರು ನನ್ನ ಸಲಹೆ ಕೇಳೋಕ್ಕೆ ಬಂದಿದ್ದು. ತುರ್ತು ಕಾರ್ಯ ಅಂತ ಊಟಾನೂ ಮಾಡ್ದೆ ಹೊರಟು ಬಿಟ್ರು.''

''ಹಂಗಾ?'' ಈ ಮೂರ್ಖ ಶಿಖಾಮಣಿಗೆ ಹುಡ್ಗೀರ್ ಜೊತೇಲಿ ಹೇಗೆ ನಡ್ಕೋಬೇಕು ಅನ್ನೋದು ಗೊತ್ತಾಗದೆ ಇರೋದೇ ಈ ಸಮಸ್ಯೆಗೆ ಕಾರಣ. ಅಲ್ಲ ಜೀವೂ, ಇಪ್ಪತ್ನಾಲ್ಕು ಗಂಟೇನೂ ಲ್ಯಾಬರೋಟರೀಲಿ ಮೀನುಗಳ ಜೊತೇಲೆ ಇದ್ದು ಪ್ರಪಂಚವೇ ಕಾಣೊಲ್ಲಾ ಇವನಿಗೆ. ಮೀನುಗಳ ಮೇಲೆ ಮಾಡೋ ಪ್ರಯೋಗಾನ ಆಕೆ ಮೇಲೂ ಮಾಡ್ತಾ ಇರ್ಬೇಕು ಅಂತ ಕಾಣುತ್ತೆ ಈ ಮರ್ಕಟಕುಮಾರ್! ಮೀನುಗಳ್ನ ಬಿಟ್ಟು ಅವ್ನು ಊರ್ಬಿಟ್ ಹೋದವನೇ ಅಲ್ಲ.

''ಮೀನುಗಳು ಮತ್ತು ಹೆಣ್ಣುಗಳ್ಗೂ ಏನೋ ಸಂಬಂಧ ಇದೆ ಅಂತ ಡೀವೀಜಿ ಬರೆದಿದ್ರು ಅಂತ ಎಲ್ಲೋ ಕೇಳಿದ್ದು ನೆನಪು.''

''ಡೀವೀಜಿ ಅಲ್ಲ ಸಾರ್, ಸರ್ವಜ್ಞ ಕವಿ ಹೆಣ್ಣಿನ ಮನಸ್ಸಿನ ಚಂಚಲತೆ ಬಗ್ಗೆ ವಿವರಿಸುವಾಗ ನೀರಿನಲ್ಲಿಯ ಮೀನಿನ ಚಲನೆಗೆ ಹೋಲಿಸಿ 'ಗುಂಡಿ ನೀರಲಿ ಕಿರಿ ಮೀನ ಹೆಜ್ಜೆ ಕಂಡಾತನಾರು ಸರ್ವಜ್ಞ' ಎಂದು ಬರೆದಿದ್ದಾನೆ. ಸಂಸ್ಕೃತದ ಸುಭಾಷಿತಗಳಲ್ಲೂ ಹಾಗೆ ಆಡ್ಕೊಂಡಿದಾರೆ.''

''ಈ ಸರ್ವಜ್ಞಂಗೆ ಯಾರೋ ಹೆಣ್ಣುಗಳು ಚೆನ್ನಾಗಿ ಚಳ್ಳೇಕಾಯಿ ತಿನ್ನಿಸಿರ್ಬೇಕು, ಅದಕ್ಕೆ ಹೀಗೆಲ್ಲಾ ಬರ್ಕೊಂಡಿದಾನೆ, ಪಾಪ! ಈ ಸರ್ವಜ್ಞಂ ಬಹುಷಃ ತಮಿಳ್ನಾಡಿನವನಿರಬೇಕು. ಹೋಗ್ಲಿ, ಈತ ಕೊನೆಗೂ ಮದ್ವೆ ಮಾಡ್ಕೊಂಡ್ನ, ಇಲ್ವಾ.''

''ಗೊತ್ತಿಲ್ಲ ಸಾರ್, ಆತ ಕವಿಯಾಗಿದ್ರಿಂದ ಹಾಗೆ ಬರೆದಿರ್ಬೇಕು. ರವಿ ಕಾಣದ್ದು ಕವಿ ಕಂಡ ಅಂತ ಗಾದೇನೇ ಇದೆ. ಈತನ ಬಗ್ಗೆ ಅಷ್ಟೇನೂ ತಿಳಿದಿಲ್ಲ. ಕನ್ನಡನಾಡಿನವ್ರೆ ಹದಿನಾರನೇ ಶತಮಾನದವರು.''

''ಸರ್ವಜ್ಞಂ ಇಂದ ನಂಗೇನ್ ಆಗ್ಬೇಕಾಗಿದೆ. ವಿಷಯಕ್ಕೆ ಬಾ. ನಮ್ಮವರಿಬ್ಬರ ವಿರಸ ಏನಕ್ಕಂತೆ?''

''ಮೊನ್ನೆ ನಿಮ್ಮ ಸೋದರತ್ತೆ ಮನೇಗೆ ಅಳಿಯಾ ಆಗೋ ಶಿವೂ ಅವರನ್ನ ಊಟಕ್ಕೆ ಕರೆದಿದ್ರಂತೆ. ಮಾತಿಗೆ ಮಾತು ಬಂದು ರೇಗಿಸಕ್ಕೋಸ್ಕರ 'ಹುಡ್ಗೀರ್ ಬುದ್ಧಿ ಊರ್ಗೆ ಸುದ್ದಿ, ನಿನ್ನ ಬುದ್ಧಿ ಶೂನ್ಯಕ್ಕೆ ಸುದ್ದಿ' ಅಂತ ನಿಮ್ಮ ಸ್ನೇಹಿತರು ಪ್ರಾಸವಾಗಿ ಹೇಳಿದ್ರರಂತೆ, ಅದಕ್ಕೆ ಆಕೆ 'ನಿನ್ನ ತಲೇಲೀ ಬರೀ ಕೆಸರು ಗದ್ದೆ, ಗೊತ್ತಿದ್ದೂ ನಾನ್ ಟೋಪಿ ಬಿದ್ದೆ' ಅಂತ ಹೇಳಿದರಂತೆ. ಆತ 'ಅದಕ್ಕೆ ನಿಮ್ಮಂತ ಹುಡ್ಗೀರ್ಗೆ ಬ್ರಹ್ಮ ಬರೀ ತಲೆ ಕೊಟ್ಟ, ನಮ್ಗಳಿಗೆ ಅದರಲ್ಲಿ ಮೆದುಳು ತುಂಬಿ ಕೊಟ್ಟ' ಆಕೆ 'ಆದರೇನು, ಆ ಮೆದುಳ್ನ ಉಪಯೋಗಿಸ್ಕೊಳ್ಳೋ ಬುದ್ಧಿ ಹುಡ್ಗೀರ ಕೈಲಿ ಇಟ್ಟ' ಹೀಗೆ ಇವರ ದ್ವಂದ್ವ – 'ಅಪ್ಪ, ಅಮ್ಮ, ಅವ್ರು, ಇವ್ರು, ಜಾತಿ, ಕುಲ, ಗೋತ್ರ, ಊರು, ಕೇರಿ' ಹೀಗೆ ಎಲ್ಲೆಲ್ಲೋ ಹೋಗಿ ಚಿತ್ರಕ್ಕಾ 'ಈ ಮೊಸಳೆ ಬುದ್ಧಿಯ, ಮೀನಿನ ಸಹ್ವಾಸದವ್ನ ಮದ್ವೆ ಸುತರಾಂ ಬೇಡ ಅಂತ ಹಠ ಹಿಡಿದಿದ್ದಾರಂತೆ.''

''ಹಿಗಾಗ್ಬಾರದಿತ್ತು. ಅದಕ್ಕೇ ನಂಗೆ ಬುಲಾವ್ ಬಂದಿರೋದು. ಈ ವೇಳೇಲೀ ಸಹಾಯಕ್ಕೆ ನಾನ್ ಇರಬೇಕಾದ್ದು ನ್ಯಾಯ, ನೀ ಏನ ಸಲಹೆ ಕೊಟ್ಟೆ ಈ ಪೆದ್ದುಗ್ದೆ? ಯಥಾ ಪ್ರಕಾರ ನಿನ್ನ ಮನಶಾಸ್ತ್ರ ಪ್ರಯೋಗಾನ?''

''ಹೌದು ಸಾರ್, ಈ ವ್ಯಾಜ್ಯ ಕೇವಲ ಮನಸ್ಸಿಗೆ ಸಂಬಂಧಿಸಿದ್ದು. ಇಲ್ಲಿ ಚರ್ಚೆಗೆ ವಸ್ತುವೇ ಇಲ್ಲ, ಕೇವಲ ಕಾಲು ಎಳೆಯಕ್ಕೆ ಹೋಗಿ ನಿಮ್ಮ ಸ್ನೇಹಿತರು ಮುಡುಕಿದ್ರು, ಅಷ್ಟೇಯ. ಶಿವೂ ಸಾರ್ ವಿಜಯದಶಮಿವರೆಗೂ ಅಂದ್ರೆ ಇನ್ನೂ ನಾಲ್ಕು ದಿನ ಅವ್ರ ಮನೇಲೆ ಇರ್ತಾರೆ. ತಿಂಡಿ ವೇಳೆ, ಊಟದ ವೇಳೆ ಎಲ್ಲರೂ ಹಬ್ಬದ ಸ್ಪೆಷಲ್ ಒಟ್ಟಾಗಿ ತಿಂತಿದ್ರೆ, ಇವ್ರು ಉಪವಾಸ ಇರಬೇಕು. ಅದನ್ನ ನೋಡೀ, ನೋಡೀ ಆಕೆಗೆ ಕರುಳು ಚುರುಕ್ ಎನ್ನತ್ತೆ, ತಾನು ದುಡ್ಕುಬಾರ್ದಿತ್ತು ಅನ್ಸುತ್ತೆ. ಆಮೇಲೆ ಎಲ್ಲ ಸರಿ ಹೋಗುತ್ತೆ.''

''ಶಿವೂ ನಾಲ್ಕು ದಿನ ಅಲ್ಲ, ನಾಲ್ಕು ಗಂಟೇನೂ ಖಾಲಿ ಹೊಟ್ಟೆ ಇರಲ್ಲ! ಊರ್ಗೇ ಬಕಾಸುರ ಇವ್ನು. ಮದ್ವೆ ಮುರ್ದುಬಿದ್ದೋಗತ್ತೆ ಅಷ್ಟೇಯಾ. ನಿಂಗೇನ್ ಗೊತ್ತು ಅವ್ನ ಹೊಟ್ಟೆ ಸಮಾಚಾರ. ನಮ್ಮ ಹಾಸ್ಟೆಲ್ನಿದ್ದಾಗ, ದಿನಕ್ಕೆ ಆರ್ಸಲ ತಿಂದ್ರೂ ಅವ್ನ ಹೊಟ್ಟೇಗೆ ಸಾಲ್ತಿರಲಿಲ್ಲ. ಅಡಿಗೆ ಭಟ್ಟ ಐತಾಳ್ನ ಕೈಲಿ ಭಸ್ಮಾಸುರನ ಹೊಟ್ಟೆ ಅಂತ ಟೈಟಲ್ ಪಡೆದಿದ್ದಾನೆ. ನಿನ್ನ ಬೈನು ಈ

ನಡುವೆ ತುಂಬಾ ವೀಕು. ಮೀನು ತಿಂದ್ರೆ ಬ್ರೈನ್ಗೆ ಒಳ್ಳೇದಂತೆ. ಜೀವು, ನಾನು ಈ ಸಮಸ್ಯೆಗೆ ಸಿಂಪಲ್ಲಾಗಿ ಮದ್ದು ಕೊಡ್ತೀನಿ, ನೀನು ಈ ಕೇಸ್ನ ನಂಗೆ ಬಿಟ್ಬಿಡು, ತಿಳೀತಾ. ನನ್ ಜವಾಬ್ದಾರಿ.''

''ಆಯ್ತು ಸಾರ್.''

''ನೀನು ನಾಳೆ ನಿನ್ನ ಭಾವಮೈದ ಚಾಮುಂಡೇಶ್ವರಯ್ಯನ್ನ ನೋಡ್ಬೇಕಂತ ಇದ್ದೆಯಲ್ಲ, ಟಿ. ನರ್ಸೀಪುರಕ್ಕೆ ಹೋಗಿ ಬಂದ್ಬಿಡು.''

''ಇಲ್ಲ ಸಾರ್, ಅವ್ನು ಈಗ ಊರಲ್ಲಿ ಇರೋಲ್ಲ, ಮುಡಿ ಕೊಡಕ್ಕಂತ ತಿರ್ಪತಿಗೆ ಹೋಗ್ಬೇಕಂತಿದ್ದ. ಬರೋದು ಯಾವಾಗ ಅಂತ ಹೇಳಿಲ್ಲ.''

''ಸರಿ, ಐದಾರು ದಿನಕ್ಕಾಗೋಷ್ಟು ಬಟ್ಟೆಗಳನ್ನ ಸೂಟ್ಕೇಸ್ಗೆ ಹಾಕಿ, ನಮ್ಮ ಹೊಂಡ ಕಾರು ಚಿಕ್ಮಗ್ಳೂರ್ಗೆ ಹೋಗೋಕ್ಕೆ ರೆಡಿ ಮಾಡು. ನಾಳೆ ಬೆಳಗ್ಗೇನೇ ಪ್ರಯಾಣ. ಊಟಕ್ಕಲ್ಲಿರ್ಬೋದು. ಅಂದ ಹಾಗೆ ಮಧ್ಯಾಹ್ನ ಕಾಯ್ಬೇಡ, ನಮ್ಮ ಆನಂದ ವಿಹಾರ ಕ್ಲಬ್‌ನ ಚುರಿಮುರಿ ಸಂಘದ ಎಲೆಕ್ಷನ್ ಇಂದು.''

''ಸರಿ ಸಾರ್.''

★★★

''ಚಿಕ್ಕಮಗ್ಳೂರ್ನ ಸೇರೋ ವೇಳೆಗೆ ಎಲ್ಲಾರ ಊಟ ಮುಗೀತಿತ್ತು. ಚಿತ್ರ ಎಸ್ಟೇಟ್ ಮನೇಲಿ ಎಲ್ಲೂ ಕಾಣಲಿಲ್ಲ. ಜಾನಕಿರಾಮ್ ಮಾವ ಇನ್ಕಂಟ್ಯಾಕ್ಸ್ ವಿಷಯ ಸೆಟ್ಲ್ ಮಾಡೋಕ್ಕೆ ಆಡಿಟರ್ ಬಳಿ ಹೋಗಿದ್ರು. ರೇಖಾ ಅತ್ತೆ ಬಳಿ ಎಲ್ಲಾ ವಿಷಯ ತಿಳ್ಕೊಂಡು, ಶಿವೂನ ನೋಡಕ್ಕೆ ಅವ್ನ ರೂಂಗೆ ಬಂದೆ. ಮೈ ಎಲ್ಲಾ ಮುದ್ದೆ ಮಾಡ್ಕೊಂಡು, ಉಗುರು ಕಡಿತಾ, ಕಿಟಕೀಲಿ ನೋಡ್ತಾ ಕೂತಿದ್ದ ಮೂರ್ಖ ಶಿಖಾಮಣಿ. ಒಂದೇ ಸೊಳ್ಳೆ ಬಹುಷಃ ಅದ್ರ ಸಂಗಾತೀನ ಹುಡುಕ್ತಾ ದಾರೀಲಿ ಅವ್ನ ಮೂಗು ಅದಕ್ಕೆ ಏನೋ ಆಕರ್ಷಕವಾಗಿ ಕಂಡಿರ್ಬೇಕು. ಮೂಗಿನ್ ಸುತ್ತಾ ಗಿರಕಿ ಹೊಡೀತಾ ಆಗಾಗ್ಗೆ ತುದೀಲಿ ಕೂರೋದು, ಇವ್ನು ಬಲಗೈಲಿ ಅದಕ್ಕೆ ಹೊಡೆಯೋಕೆ ಕೈಬೀಸೋದು, ಅದು ತಪ್ಪಿಸ್ಕೊಂಡ್ ಇವನ ಮೂಗಿಗೆ ಏಟು ಬೀಳೋದ. ಹೀಗೆ ಅವ್ಯಾಹಿತವಾಗಿ ನಾಸಿಕ ಯಜ್ಞ ನಡೀತಲೇ ಇತ್ತು. ಕೊನೆಗೆ ಅವ್ನ ಈ ಸಮಾಧಿಯಿಂದ ಎಬ್ಬಿಸಿದೆ. ''ಏ ಮಂಕೆ, ಯಾಕೆ ಹೀಗೆ ಕೊರಗ್ತಾ ಕೂತಿದ್ದೀಯಾ, ಪ್ರಪಂಚಾನೇ ಮುಳಗೋದ್ಹಾಗೆ?''

''......''

''ಅರೆ, ಮಾತಾಡಯ್ಯ''

''......''

''ನಾನಯ್ಯ, ಶಿವೂ. ನಿನ್ನ ಬಚಪನ್ಕೆ ದೋಸ್ತ್ ತಿಳೀತ? ನಿನ್ನ ಸಮಾಚಾರ ತಿಳ್ದೆ ಇಲ್ಲಿಗೆ ಓಡ್ಬಂದೆ.''

''ಎಲ್ಲ ಮುಗ್ದ ಮೇಲೆ ಬಂದರೇನು ಪ್ರಯೋಜನ? ಅಷ್ಟಕ್ಕೂ ಪಾಪ, ನಿಂಕೈಲಿ ಏನಾಗುತ್ತೆ? ದೇವ್ರು ನಿನ್ನ ಮಾಡೋ ಅವಸರದಲ್ಲಿ ತಲೇಲಿ ಮೆದುಳಿಡೋದನ್ನ ಮರ್ತಿರಬೇಕು.''

''....??''

''ಇನ್ಮೇಲೆ ನನ್ನ ದಾರಿ ನಂಗೆ, ಅವಳ ದಾರಿ ಅವಳ್ಗೆ. ನಾನ್ ತಪ್ಪು ಮಾಡ್ದೇನಯ್ಯ, ಹುಡ್ಗೀರ್ನ ನಂಬಾರ್ದು ಅನ್ನೋದು ಈಗ ಸ್ವಂತ ಅನುಭವಕ್ಕೆ ಚೆನ್ನಾಗಿ ಬಂತು. ನಿಮ್ಮತ್ತೆ ಮಗಳ್ನ ಗುಡಾಣ್ದಲ್ಲಿ ಇಟ್ಟು ಚೆನ್ನಾಗಿ ಬೆಳಸ್ಕೊಳ್ಳಿ, ಥ್ಯಾಂಕ್ಸ್, ನಾನ್ ಹೊರಡುತ್ತೀನಿ ಮಿತ್ರ.''

ಅಷ್ಟು ಹೊತ್ತಿಗೆ ಸೊಳ್ಳೆ ಹೊಡ್ದು, ಹೊಡ್ದು ಅವ್ನ ಮೂಗು ಕೆಂಪೇರಿತ್ತು. ಸೊಳ್ಳೇನೂ ಬಹುಶಃ ಸ್ವಾರಸ್ಯ ಕಾಣ್ದೆ, ಬೇರೆ ಮೂಗ್ನ ಹುಡ್ಕಂಡು ಜಾಗ ಖಾಲಿ ಮಾಡಿತ್ತು. ಅಲ್ಲ, ನಂ ಮನೇಗೆ ಬಂದು, ನನ್ನೋಡ್ದೆ ಜೀವೂನ ಮಾತಾಡಿಸ್ಕೊಂಡು ಹೋಗಿದಾನೆ ಈ ಛತ್ರಿ. ನನ್ಮೈಲಿ ಏನಾಗುತ್ತೆ ಅಂತಾ ನನ್ನೇ ಜರಿತಾನಲ್ಲಾ, ಇರ್ಲಿ, ಎಷ್ಟೇ ಆಗ್ಲಿ ಸ್ನೇಹಿತ. ದುಃಖದಲ್ಲಿದ್ದಾನೆ. ಇಂಥಾ ಸಮಯದಲ್ಲಿ ಅವ್ನ ಮಾತ್ನ ಮನಸ್ಗೆ ತೊಗೋಬಾರ್ದು. ಆದ್ರೆ, ಯಾವಾಗ ಹುಡ್ಗೀರ್ ಜೊತೆ ಹ್ಯಾಗಿರಬೇಕು ಅನ್ನೋದನ್ನ ತಿಳ್ಕೊಳ್ದೆ ಆಗ್ತಾನೆ ಮದ್ವೆ ಸೆಟ್ಲ್ ಆಗಿರೋ ಹುಡುಗಿ ಜೊತೆ ಚಕ್ಕಂದವಾಗಿರೋದ್ ಬಿಟ್ಟು, ಮೀನಿನ ಜೊತೆ ಆಡೋ ರೀತೀಲಿ ಇವಳ್ನ ಕೀಟ್ಲೆ ಮಾಡಿದ್ರೆ ಈಗಿನ ಹೈ ಸ್ಪಿರಿಟೆಡ್, ಹೈಟೆಕ್, ಅಲ್ಟ್ರಾ ಮಾಡ್ರನ್ ಹುಡ್ಗೀರು ಸಹಿಸ್ತಾರ? ಏನಾಗಬೇಕೋ ಅದೇ ಆಯ್ತು.

''ನೀ ಏನೂ ಯೋಚ್ನೆ ಮಾಡ್ಬೇಡ, ನಾನೊಂದ ಪ್ಲಾನ್ ಹೇಳ್ತೀನಿ, ಎಲ್ಲಾ ಸರಿ ಹೋಗಿ ಮತ್ತೆ ನಿನ್ನ ಅವ್ಳು ಡಾರ್ಲಿಂಗ್, ಡಾರ್ಲಿಂಗ್ ಅಂತ ಕರ್ಕೊಂಡ್ ಓಡಾಡ್ತಾಳೆ. ತಾಳಿ ಕಟ್ಟೋದ್ ಒಂದ್ ಬಾಕಿ ಅಷ್ಟೇಯ. ನಿಜ ಹೇಳ್ಬೇಕಂದ್ರೆ ಶೀ ವರ್ಷಿಪ್ಸ್ ಯು.''

''ಡಿಯರ್ ಮಿಸ್ಟರ್ ರಾಜೀವ್, ದಯವಿಟ್ಟು ಇಂಥ ಉಪಕಾರ ಮಾಡಕ್ಕೆ ಬರ್ಬೇಡಾ. ಇದೊಂದು ಕೆಟ್ಟ ಕನ್ಸು ಅಂತ ಮರ್ತು ಬಿಡ್ತೀನಿ. ನಿಜವಾದ ಸ್ನೇಹಿತ ಅನ್ನೋದಾದ್ರೆ ಈ ವಿಷಯದಲ್ಲಿ ಮೂಗ್ನ ತೂರಿಸ್ಬೇಡ. ನೀನಾಯ್ತು, ನಿನ್ ಐಡ್ಲರ್ಸ್ ಕ್ಲಬ್ ಆಯ್ತು ಅಂತ ಇದ್ಬಿಡು. ಜೀವೂ ಗೈಡೆನ್ಸ್ ನಂಬಿದೀನಿ. ಅಯ್ಯೋ, ಇದು ನಂ ಜೀವನದ ಪ್ರಶ್ನೆ'' ನಿಂಗೇನು ಗೊತ್ತು, ನನ್ನ ಸ್ಕೀಮಿನ ಯೋಗ್ಯತೆ? ಜೀವು ಈ ನಡುವೆ ಮೊದಲ ತರಹ ಇಲ್ಲ. ಸೆರಿಬಲ್ಲಂ ಪೂರಾನೇ ಕೊರತೆ. ತುಂಬಾ ಮಂಕಾಗಿ, ಟೇಕ್ಸ್ ರಾಂಗ್ ಡಿಸಿಷನ್ಸ್.''

''ಹಾಗಂತಾ ಯಾರ್ ಹೇಳಿದ್ರು? ನಿಂಗೇನಾದ್ರೂ ಯಾರಾದ್ರೂ ಟೆಕ್ಸ್ಟ್ ಮಾಡಿದ್ರ?''

''ಹಾಗೇನಿಲ್ಲ, ಆದ್ರೆ ಅವ್ನ ಚಟುವಟಿಕೆಗಳ್ನ ಸೆಂಟರ್ ಸ್ಟೇಜಿನಲ್ಲಿದ್ದು ಸದಾ ನೋಡೋವ್ನು ನಾನೇ ಅಲ್ವಾ, ಭೋಳೇ ಶಿವ?''

'ಏನೋಪ್ಪಾ, ಏನಾದ್ರೂ ಮಾಡ್ಕೊಳ್ಳಿ. ಆದ್ರೆ, ಐ ವಿಲ್ ನಾಟ್ ಫಾಲ್ ಅಟ್ ಹರ್ ಫೀಟ್.''

★★★

ಮಾರನೇ ದಿನ ಚಿತ್ರ ತೋಟದಲ್ಲಿ, ತಾವರೆ ಕೊಳದ ಬಳಿ, ಅವಳ ಸ್ನೇಹಿತೆ ಜೊತೆ ಮಾತಾಡ್ತಾ ಇದ್ದಾಗ ಸಿಕ್ಕಿದ್ಲು.

''ಚಿತ್ರಾ, ನಿನ್ ಹತ್ರ ಮಾತಾಡಬೇಕಿದೆ ಸ್ವಲ್ಪ ಅವಕಾಶ ಮಾಡ್ಕೊಂಡು ಬರ್ತೀಯಾ?''

''ಅದೇನು? ಶಿವೂ ಬಗ್ಗೆ ತಾನೇ? ಅವ್ನೇನ್ ನಿನ್ನ ಸ್ನೇಹಿತಾನ ಇಲ್ಲ ಹಳೇ ಶಿಲಾಯುಗದಿಂದ ಎದ್ಬಂದ ಆದಿಮಾನವನೋ?''

''ನೋ, ನೋ, ಹಿ ಇಸ್ ಅಲ್ರೈಟ್. ಇಷ್ಟೇನಾ ಅವ್ನ ನೀನು ಅರ್ಥಮಾಡ್ಕೊಂಡಿರೋದು? ಡೋಂಟ್ ವರಿ ಚಿತ್ರ, ಇವೆಲ್ಲಾ ಪ್ರೇಮಿಗಳ ಮಧ್ಯೆ ಕಾಮನ್. ನಿಜ ಹೇಳ್ಬೇಕಂದ್ರೆ ಹೀ ವರ್ಶಿಪ್ಸ್‌ಯು, ನಿನ್ ಬಿಟ್ರೆ ಇಲ್ಲಾಂತ ಹೇಳ್ತಾನೆ ಇರ್ತಾನೆ. ಸ್ವಲ್ಪ ಮಾತ್ನಲ್ಲಿ ನೀವಿಬ್ರೂ ಸರಸ್ಕೊಂಡು ಹೋಗ್ಬೇಕಷ್ಟೇಯಾ, ಲೀವ್ ಇಟ್ ಟು ಮೀ.''

''ನೋಡು ರಾಜೀವ್ ಮಾಮ, ನಿಮ್ ಕಾಲುದ್ದಕ್ಕೂ ನಮಸ್ಕಾರ ಮಾಡಿ ಹೇಳ್ತೀನಿ, ನಾ ಅವ್ನಗೆ ಸರಂಡರೂ ಆಗೋಲ್ಲ, ಅವ್ನ ಮುಖಾನೂ ನೋಡೋಕ್ಕೆ ಇಷ್ಟಪಡಲ್ಲ. ಈ ಬುಡ್ಬುಡ್ಕೆ ಮಾತಿಗೆ ಫುಲ್‌ಸ್ಟಾಪ್ ಹಾಕು.''

''ಸರೆಂಡರ್ ಪ್ರಶ್ನೇನೇ ಇಲ್ಲ, ಬುಡ್ಬುಡ್ಕೇನೂ ಅಲ್ಲ. ಚಿತ್ರಾ ನೀನ್ ಸುಮ್ನಿದ್ಬಿಡು ಏನೂ ಆಗ್ಲಿಲ್ಲ ಅನ್ನೋ ತರಹ, ನಾನ್ ಮುಂದಿಂದು ನೋಡ್ಕೊಳ್ತೀನಿ ಬೈ.''

★★★

ಪರಿಸ್ಥಿತಿ ತೀರ ಹದಗೆಡ್ತಾ ಇತ್ತು ಯೋಚಿಸಿ, ಯೋಚಿಸಿ ನಾಲ್ಕು ಗೋಲ್ಡ್ ಪ್ಯಾಕ್ ಸಿಗರೇಟ್ ಸುಟ್ಟು ಭಸ್ಮ ಆಯ್ತಷ್ಟೆ ಏನೂ ಹೊಳೆಯಲಿಲ್ಲ.

ಅತ್ತೆ ಹತ್ರ ಮತ್ತೆ ದೀರ್ಘವಾಗಿ ವಿಚಾರ ವಿನಿಮಯ ಮಾಡಿಕೊಂಡೆ.

''ಯಾಕೆ ಯೋಚ್ನೆ ಮಾಡ್ತಿ. ಖಾಲಿ ತಲೆಗೆ ಯಾಕೆ ಕೆಲಸ? ನಾನು ಜೀವಣ್ಣನ ಹತ್ರ ಮಾತಾಡಿ ಅದಕ್ಕೆ ಒಂದ್ ದಾರಿ ಮಾಡಿದೀನಿ. ಅವ್ನು ಎಲ್ಲೋ ಊರಿಗೆ ತುರ್ತಾಗಿ ಹೋಗ್ಬೇಕಂತಿದ್ದ. ಅದಕ್ಕೆ ನಿಂಗೆ ಹೇಳಿ ಅವ್ನು ಇಲ್ಲಿಗೆ ಬರೋ ಹಾಗೆ ಮಾಡಿದ್ದು.''

ನಂಗೆ ನಿಜವಾಗ್ಲೂ ನಖಶಿಖಾಂತ ಕೋಪ ಬಂತು. ನಿಜ, ನನ್ನ ಬಿಟ್ಟು ಅವ್ನ ಒಬ್ಬನೇ ಅಲ್ಲಿಗೆ ಕರ್ಸಿಕೊಳ್ಳೋದು ಸಾಧ್ಯವಲ್ಲ, ಅದಕ್ಕೆ ನಮ್ಮಿಬ್ರುಗೂ ಬುಲಾವ್. ಆದ್ರೆ, ಇಲ್ಲಿ ಒಂದು ಸತ್ಯ ಸಂಗತಿ ಹೇಳ್ಳೇಬೇಕು. ನಮ್ಮ ಆತ್ಮೀಯ ಬಂಧುಗಳು ಮತ್ತು ಆಪ್ತ ಸ್ನೇಹಿತರಲ್ಲಿ ಈ ಜೀವು ಏನೋ ಮೋಡಿ ಮಾಡಿದಾನೆ. ಅವರಿಗೆಲ್ಲಾ ಏನಾದ್ರೂ ಸಮಸ್ಯೆಗಳು ಬಂದ್ರೆ, ಮೊದಲಿಗೆ ಇವನ ಹತ್ರ ಓಡಿ ಬರ್ತಾರೆ. ಅದೇನೋ ಸರಳವಾದ ಮನೋಶಾಸ್ತ್ರದ ಮೂಲ ತಂತ್ರ ಅಂತೆ, ಇವನು ಕೊಡೋ ಸಲಹೆಗಳು ಅವರಿಗೆಲ್ಲಾ ಯಂತ್ರ, ತಾಯ್ತ ಕಟ್ಟಿಸ್ಕೊಂಡ ಹಾಗೆ ಪರಿಹಾರ ಸಿಗುತ್ತವೆ. ನನ್ನ ಗೃಹ ಕೃತ್ಯಗಳ ಕೆಲಸ ಹೊರುವುದಲ್ದೆ ನನ್ನ ಪರಿಚಾರಕನಾಗಿದ್ರೂವೆ, ಎಲ್ಲಾ ವಿಷಯಗಳು ಮತ್ತು ಸಾಹಿತ್ಯದ ಬಗ್ಗೆನೂ ಬಹುಳಷ್ಟು ತಿಳ್ಕೊಂಡಿದಾನೆ. ನನಗೂ ಅವ್ನ ಐಡಿಯಾಗಳಿಂದ ಪ್ರಯೋಜನ ಆಗಿರೋದು ನಿಜ. ಆದ್ರೆ, ಈ ರೀತಿ ನನ್ನನ್ನೇ ಎಲ್ಲಾರೂ ದುಷ್ಮನ್ ಮಾಡೋದು ಸಭ್ಯತೆ ಅಲ್ಲ. ಇವ್ರುಗಳ್ದು 'ಮೀನ್ ಮೆಂಟಾಲಿಟಿ' ಅಷ್ಟೇ. ನಾನು ಏನು ಅನ್ನೋದು ಇವರಿಗೆ ತೋರ್ಸಿಯೇ ಬಿಡ್ತೀನಿ. ''ರಾಜೀವ, ಹೇಳೋದ್ ಮರ್ತುಬಿಟ್ಟಿದ್ದೆ. ನಿಂದೊಡ್ ಮಾವನೂ ನಾಳಿದ್ದು ಬರ್ತಿದಾರೆ. ನೀನು ನಿನ್ನ ಸ್ನೇಹಿತನ್ನೂ ನೋಡೋಕ್ಕೆ ಪೆದ್ದಣ್ಣ! ನಿನ್ ಕಂಡ್ರಂತೂ ಅವ್ರಿಗೆ ಅದೇನ್ ಪ್ರೀತೀನೋ!! ಅಲ್ವಾ?'' ಇದೀಗ ನಾನು ನಿಜವಾಗ್ಲೂ ಹೌಹಾರಿದೆ. ಯಾಕಂದ್ರೆ, ಈ ಸೋದರತ್ತೆ ಗಂಡನ ಅಣ್ಣ ಕೇಶು-ಮಾವ ನಾವುಗಳು

ಕರೆಯೋದು 'ಹುಚ್ಚಾವ' ಅಂತಲೇ – ಅವರಿಗೂ ನನಗೂ ಅಷ್ಟಕ್ಕಷ್ಟೇಯ. ಹೇಳಿಕೇಳಿ ಅವ್ರು ಮನಃಶಾಸ್ತ್ರ ಡಾಕ್ಟ್ರು. ಅವ್ರು ಮೊದಲಿಗೆ ಯಾರನ್ನ ನೋಡಿದ್ರೂ ಮೊದ್ಲು ತಲೇನ್ ನೋಡೋದು. ಆಮೇಲೆ ಮುಂಡ, ಕೈ ಕಾಲು, ಎಕ್ಸೆಟ್ರಾ. ಮನಸ್ನಲ್ಲೇ ನಿಮ್ಮ ತಲೆ ಉದ್ದ ಅಗಲ, ಗಾತ್ರ ಎಲ್ಲಾ ಅಳೆದೂ ಸುರಿದೂ ನೀವಿಷ್ಟೇ, ನಿಮ್ಮ ಬುದ್ಧಿ ಇಷ್ಟೇ ಅಂತ ಕರಾರುವಕ್ಕಾಗಿ ಗುರ್ತು ಮಾಡ್ಕೊಳ್ತಾರೆ. ಮತ್ತೆ ನೀವ್ ಏನ್ ಮಾಡಿದ್ರೂ ಅಭಿಪ್ರಾಯ ಬದ್ಲಾಯ್ಸೊಲ್ಲಾ. ಹಿಂದೆ ಒಂದ್ಸಲ, ನಾನು ಚಿತ್ರಾಳ ಅಣ್ಣ ಶ್ರೀಕಂಠೂ ಇಬ್ಬರೂ ಏನೋ ತಮಾಷೆ ಮಾಡಕ್ಕೆ ಹೋಗಿ ನಂ ಪ್ಲಾನು ಎಡ್ವಟ್ಟಾಗಿದ್ದರ ಪರಿಣಾಮ ಕಣ್ಣಾರೆ ನೋಡಿ ಆತ ನನ್ನ 'ಅರೆ ಹುಚ್ಚ' ಅಂತ ನಿರ್ಧರಿಸಿ, ಅವ್ರ್ನ ಹುಚ್ಚಾಸ್ಪತ್ರೆಗೆ ಕಳ್ಸೋದಿಕ್ಕೆ ಏರ್ಪಾಟು ಮಾಡ್ತಿದ್ರು. ನಮ್ಮತ್ತೆ ಆತನಿಗೆ ಏನೋ ಸಮಾಧಾನ ಹೇಳಿ ನನ್ನ ಬಿಡ್ಸಿದ್ರು. ಮತ್ತೆ ನಮ್ಮಿಬ್ಬರ ಮುಖಾಮುಖಿ ಭೇಟಿ ಅಂದ್ರೆ ಇಬ್ಬರಿಗೂ ಕಸಿವಿಸಿ! ನಾಡಿದ್ದು ಬರೋದು ಅಂತ ತಿಳ್ಕೊಂಡು ಸಮಾಧಾನ ಆಯ್ತು. ಅಷ್ಟರಲ್ಲಿ ನನ್ನ ಪ್ಲಾನ್ ಕೂಡ್ಲೆ ಮುಗ್ಸಬೇಕು.

★★★

ರಾತ್ರಿಯೆಲ್ಲಾ ಯೋಚ್ನೆಮಾಡ್ದೆ. ಏನೂ ಪ್ರಯೋಜನವಾಗ್ಲಿಲ್ಲ. ಕೊನೆಗೆ 'ಫ್ಲಾಶ್' ಅಂತಾರಲ್ಲಾ ಹಾಗೆ, ಇದ್ದಕ್ಕಿದ್ದ ಹಾಗೇ ಬೆಳಗಿನ ಜಾವದಲ್ಲಿ 'ಪಡೋಸನ' ಸಿನಿಮಾ ಜ್ಞಾಪಕಕ್ಕೆ ಬಂತು. ಹೌದಲ್ಲ! ಸುನೀಲ್ ದತ್ ಮೇಲೆ ಸಾಯಿರ ಬಾನು ಪ್ರೇಮ ಮತ್ತೆ ಚಿಗುರೋ ಹಾಗೆ ಈ ಎಬ್ಬಂಕ ಶಿವೂಗು ನಮ್ಮ ಚಿತ್ರಾಗೂ ಕಿಶೋರನ ಅದೇ ಪ್ಲಾನ್ ಮಾಡ್ಬಹುದಲ್ವ? ಸಾವ್ರ ಸುಳ್ಳು ಹೇಳಿ ಮದ್ವೆ ಮಾಡಿಸಬಹುದಾದ್ರೆ, ಇಬ್ರು ಪ್ರೇಮಿಗಳಿಗೂ ಸ್ವಲ್ಪ ಹಸಿ ಸುಳ್ಳು ಹಂಚಿ ಯಾಕೆ ಒಂದ್ ಮಾಡ್ಬಾರದು? ಬೆಳಗಾಗುತ್ತೂ್ಲವೆ ಶಿವೂನ ನೋಡಕ್ಕೆ ಹೊರಟೆ. ರೂಮ್ನಲ್ಲಿ ಮುತ್ತಾಳ ಹಾಸ್ಗೆ ಮೇಲೆ ಬಿದ್ಕಂಡು ಛಾವಣಿ ನೋಡ್ತಾ, ಏನೋ ಒದರ್ಕೊಳ್ತಾ ಇದ್ದ. ರಾತ್ರಿ ಎಲ್ಲಾ ನಿದ್ದೆ ಇಲ್ಲವರ ಹಾಗೆ ಕಣ್ಣು ಕೆಂಪಗಾಗಿತ್ತು. ನನ್ನ ನೋಡತ್ಲೂವೆ ಸರಕ್ ಅಂತ ಎದ್ದು ''ರಾಜೀವ ನಿನ್ನ ಅಲ್ಲ, ಜೀವೂನ ಮಾತ್ಗೆ ಬೆಲೆ ಕೊಟ್ಟು ಈ ಒಂದಿನ ಇರ್ತೀನಿ. ನಾಳೇ ನನ್ನ ದಾರಿ ನಂಗೆ'' ಅಂದು ಎದ್ದು ಕೂತ. ''ಡೋಂಟ್‌ವರಿ, ಉಪಹಾರಕ್ಕೆ ಬರ್ತೀಯಲ್ಲ, ಆವಾಗ ಮಾತಾಡೋಣ'' ನನ್ನ ದುರ್ಗುಟ್ಕೊಂಡು ನೋಡ್ದ. ಸಮಯ ಸರಿ ಇಲ್ಲ ಅಂತ ಅಲ್ಲಿಂದ ಎದ್ಬಂದೆ. ಆದ್ರೆ, ಉಪಹಾರದ ವೇಳೆ ಚಿತ್ರ, ಅವಳ ಅಣ್ಣ ಅವರುಗಳ ಸ್ನೇಹಿತರನ್ನ ಪರಿಚಯ ಮಾಡ್ಕೊಳ್ಳೋದ್ರಲ್ಲಿ ಇವನ ವಿಷಯ ಗಮನಕ್ಕೆ ಬರಲಿಲ್ಲ. ಊಟದ ವೇಳೇಲಿ ನಾನು ಜಾನಕಿರಾವ್ ಮಾವ ಯಾವುದೋ ತುರ್ತು ಗೃಹ ಕೃತ್ಯದ ಕೆಲಸದ ಮೇಲೆ ಪಟ್ನಕ್ಕೆ ಹೋಗಿದ್ವಿ. ಸಂಜೆ, ಜೀವೂನ ಕರೆದು ಅವ್ನು ರೂಮ್ನಲ್ಲಿದ್ದಾನ, ನೋಡು ಬಾ ಎಂದು ಕಳಿಸಿದೆ. ''ಇಲ್ಲ ಸಾರ್, ಅವ್ನು ಎಸ್ಟೇಟ್ ಕಡೆ ಹೋಗಿದಾರೆ. ಬರೋದು ಊಟದ ಟೈಂಗಷ್ಟೆ ಅಂತ ಆಳುಗಳು ಹೇಳಿದರು'' ನಾನು, ಈ ಭಡವನ್ಗೆ ನನ್ನ ಪ್ಲಾನ್ ಹೇಳ್ಬೇಕು ಅನ್ನೋಷ್ಟರಲ್ಲಿ ಅವ್ನೆ ಪತ್ತೆ ಇಲ್ಲ! ಕೊನೆಗೆ ರಾತ್ರಿ ಊಟಕ್ಕೆ ಮುಂಚೆ ಅವ್ನ ರೂಮ್ನಲ್ಲಿ ಸಿಕ್ದ. ನನ್ನ ಪ್ಲಾನ್ ವಿವರವಾಗಿ ಅವನಿಗೆ ತಿಳಿದಿದೆ.

''ನೋಡು, ನೀನು ಇಷ್ಟೇ ಮಾಡ್ಬೇಕಾಗಿರೋದು. ನಿನ್ನ ಹಾಸ್ಗೆ ಮೇಲೇ ಸರಿಯಾಗಿ ಫ್ಯಾನ್ ಇದೆ. ನೀನು ಯಾವಾಗ್ಲಾದ್ರೂ ಪ್ರಾಣಾಯಾಮ ಮಾಡಿದ್ದೀಯಾ ಇಲ್ವಾ, ಹೋಗ್ಲಿ ಶವಾಸನ ಗೊತ್ತ? ಅದೇ ಸ್ಟೈಲಲ್ಲಿ, ಆದ್ರೆ ಕಾಲು ಒಂದ್ಕಡೆ, ಕೈ ಒಂದ್ಕಡೆ ಇರೋತರ ಕೆಳಮುಖ

ಮಾಡ್ಕಂಡು ಬೋರಲು ಬಿದ್ದಿರು. ಉಸಿರಾಡೋದೊಂದ್ ಬಿಟ್ರೆ, ಸತ್ತಿದೀಯೋ, ಬಿಟ್ಟಿದ್ದೀಯೋ ಗೊತ್ತಾಗಬಾರ್ದು. ನೋಡ್ದೋರ್ಗೆ ಉರುಳಾಕ್ಕೊಂಡು ನೀನ್ ರಭಸದಿಂದ ಹಾಸ್ಗೆ ಮೇಲೆ ಬಿದ್ದು ಸತ್ತೋದ್ ತರಹ ಕಾಣ್ಬೇಕು. ನಿನ್ ಬೆಡ್‌ಷೀಟ್ನ ಫ್ಯಾನ್ಗೆ ಭದ್ರವಾಗಿ ಕಟ್ಟಿ ಅದ್ರ ಇನ್ನೊಂದ್ ಕೊನೆ ನಿನ್ ಕತ್ತಿನ ಮೇಲೆ ಕಟ್ಟಿರ್ಬೇಕು. ಫ್ಯಾನ್ಗೂ ಹಾಸ್ಗೇಗೂ ಮಧ್ಯ ಬೆಡ್‌ಷೀಟ್ನ ಒಂದ್ ಸ್ವಲ್ಪ ಹರ್ದಿರ್ಬೇಕು. ಬೆಳಗ್ಗೆ 7ಗಂಟೆ ಹೊತ್ತಿಗೆ ಕಾಫಿ ತರೋ ಆಳು ನಿನ್ನ ನೋಡಿದ ತಕ್ಷಣವೆ ಎಲ್ಲಾರ್ಗೂ ವಿಷಯ ತಿಳಿಯತ್ತೆ. ಮುಂದಿನ ವಿಷ್ಯ ನಂಗೆ ಬಿಡು.''

''ಜೀವೂಗೆ ಹೇಳಿದಿಯಾ ತಾನೇ?''

''ಅವ್ನು ಈ ಸ್ಕೀಮ್ನಲ್ಲೇ ಇಲ್ಲ.. ನಾನು ಹೇಳ್ದ ಮೇಲೆ ಅವ್ನು ಒಪ್ಕೊಂಡು ಕೀಪಿಂಗ್ ಅವೆ...''

ರಾತ್ರಿ ಎಲ್ಲಾ ಏನೇನ್ ಆಗ್ಬೋದು, ಅದಕ್ಕೆ ಯಾವ ರೀತಿಲಿ ಸುಖಾಂತ್ಯ ಮಾಡ್ಸಿ, ಮತ್ತೆ ಎಲ್ಲ ಸರಿ ಹೋಗಿ ನಾನು ಊರ್ಗೆ ಹೊರಡಬೇಕು. ಜೀವಣ್ಣಂಗೆ, ಎಲ್ಲರ್ಗಿಗೂ ನಾನು ಏನು ಅಂತ ತೋರಿಸಬೇಕು ಅನ್ನೋ ಯೋಚ್ನೇಲಿ, ಯಾವಾಗಲೋ ನಿದ್ದೆ ಆವರ್ಸಿತ್ತು. ಬೆಳಿಗ್ಗೆ ನಂಗೆ ಕಾಫಿ ಕೊಡಲು, ಅಡಿಗೆ ಸಹಾಯಕ ಶಂಭು ಬಾಗ್ಲು ತಟ್ಟಿದಾಗ, ಆಗ್ಲೇ 7 ಗಂಟೆ ಆಗಿತ್ತು. ನಾನ್ ಶಂಭು ಮುಖ ನೋಡ್ದೆ. ಏನಾದರೂ ವಿಷಯ ತಿಳಿಯುತ್ತೆ ಅಂತ. ಅವ್ನು ಕಾಫಿ ಗ್ಲಾಸನ್ನ ಟೇಬಲ್ ಮೇಲಿಟ್ಟು ನಿಶ್ಶಬ್ಧವಾಗಿ ಹೊರಟ. ಕುತೂಹಲ ತಡೀಲಾರ್ದೆ, ನಾನೇ ಎದ್ದು ಶಿವೂ ರೂಮ್ಗೆ ಹೊರಟೆ. ದಾರೀಲಿ, ಜೀವಣ್ಣ ಸಿಕ್ದ. ''ಸಾರ್, ನಿಮ್ಮನ್ನೇ ಕಾಣಲು ಹೊರಟಿದ್ದೆ.''

''ಏನ್ ವಿಶೇಷ?''

''ನಿಮ್ಮ ಶಿವೂ ನಿಮಗೆ ತುಂಬಾ ಥ್ಯಾಂಕ್ಸ್ ಹೇಳು ಅಂತ ಹೇಳಿ ಈಗತಾನೆ ಊರ್ಗೆ ಹೊರಟರು.''

''?...?''

''ಅವ್ರ ಸಮಸ್ಯೆ ಎಲ್ಲಾ ಸುಖಾಂತ್ಯವಾಗಿ, ಎಲ್ಲರೂ ಖುಷಿಯಾಗಿದ್ದಾರೆ. ನಿಮ್ಮ ಅತ್ತೆ ಅವ್ರು ಈ ಹೊತ್ತು ನಿಮಗೋಸ್ಕರ ಸ್ಪೆಷಲ್ ಪಾರ್ಟಿ ಕೊಡಕ್ಕೆ ತಯಾರಿ ಮಾಡ್ತಿದ್ದಾರೆ. ಹಾಗೆ ನಾವು ಊರ್ಗೆ ವಾಪಸ್ಸು ಹೊರಡೋದೇ ವಾಸಿ ಅಂತ ಹೇಳಿದ್ರು. ಕಾರಣ, ನಿಮ್ಮ ದೊಡ್ಮಾವ ಈ ಸಂಜೇನೇ ಇಲ್ಲಿ ಇರ್ತಾರೆ.''

''ಶಿವೂ ಕೊರಳಿಗೆ ಸರಿಯಾಗಿ ಬೆಡ್‌ಷೀಟ್ನ ಸುತ್ತಿಕೊಂಡಿದ್ನ? ಯಾರ್ಗೂ ಅನುಮಾನ ಬರಲಿಲ್ವ? ಚಿತ್ರ ಏನ್ ಹೇಳಿದಳು.'' ''ಇಲ್ಲ, ಆ ಸಂದರ್ಭಾನೇ ಬರಲಿಲ್ಲ. ನಿನ್ನೆ ಮಧ್ಯಾಹ್ನ ಊಟದ ವೇಳೆ ಶಿವೂ ಅವ್ರು ತಲೆ ತಿರುಗಿ ಬಿದ್ರು, ಡಾಕ್ಟರ್ನ ಕರ್ಸಿದ್ರಂತೆ. 'ಈತ ಯಾವುದೋ ಯೋಚ್ನೇಲಿ ತಲೆಕೆಡಿಸ್ಕೊಂಡು 3-4 ದಿನಗಳಿಂದ ಉಪವಾಸ ಇರ್ಬೇಕು. ಅದಕ್ಕೇ ಹೀಗಾಗಿರ್ಬೇಕು. ಇದಕ್ಕೆ ಕಾರಣ ನಿಮ್ಮಲ್ಲಿ ಯಾರಿಗಾದ್ರೂ ಗೊತ್ತಿರ್ಬಹುದಾ?' ಅಂತ ಕೇಳಿದ್ರಂತೆ, ಅದಕ್ಕೆ ಎಲ್ಲರೂ ಚಿತ್ರಕ್ಕಾ ಕಡೆ ನೋಡಿದ್ರಂತೆ. 'ಈಗ ಇವರ ತಲೆ, ಹೊಟ್ಟೆ ಎರಡೂ ಖಾಲಿ. ಕೂಡ್ಲೆ ಟ್ರೀಟ್ಮೆಂಟ್ ಕೊಡಬೇಕು. ತಡ ಮಾಡಿದ್ರೆ ಜೀವಕ್ಕೆ ಅಪಾಯ' ಅಂತ ಹೇಳಿ ಅವರನ್ನ ರೂಮ್ಗೆ ಕರ್ಕೊಂಡು ಚಿಕಿತ್ಸೆ ಕೊಟ್ಟ ಮೇಲೆ ಸಂಜೆಗೆ ಸರಿಹೋದ್ರಂತೆ. ಚಿತ್ರ ಅಕ್ಕಾವ್ರೆ ರಾತ್ರಿ ಮಲಗೋವಾಗ ಅವರಮ್ಮನ್ನ ಎಬ್ಬಿಸಿ, ಶಿವೂನ ಕರೆಸಿಕೊಂಡು ಅವರ ಮುಂದೆ ಗೋಳೋ

ಅಂತ ಅತ್ತು ರಾಜಿ ಮಾಡ್ಕೊಂಡ್ರಂತೆ. ಈಗ ಇಬ್ಬರೂ ವಿಜದಶಮಿ ಆದ್ಮೇಲೆ ಕೊಡಗಿನ ಪ್ರವಾಸಕ್ಕೆ ಹೋಗ್ತಾರಂತೆ. ಮದುವೆ ಉಗಾದಿಗೆ ಮುಂಚೇನೆ ಅಂತ ನಿಮ್ಮ ರೇಖಾ ಅತ್ತೆ ಅವ್ರು ಹೇಳಿದ್ದನ್ನ ಕೇಳಿದೀನಿ.''

ನನಗೆ ಏನ್ ಹೇಳ್ಬೇಕೂಂತಲೆ ತೋಚಲಿಲ್ಲ. ಇಲ್ಲಿ ಏನೋ ಗೋಲ್ಮಾಲ್ ನಡೆದಿರೋದ್ರಲ್ಲಿ ಸಂಶಯವೇ ಇಲ್ಲ. ನನ್ ಕಣ್ಮುಂದೇನೇ ಇವರುಗಳು ನನ್ನ ಪ್ಲಾನ್ನ ಸಬೊಟೇಜ್ ಮಾಡಿ, ನಂಗೇ ಚಳ್ಳೆಕಾಯಿ ತಿನಿಸ್ತಿದಾರೆ. ''ಜೀವೂ'' ಗಡುಸಿನಿಂದಲೇ ಹೇಳ್ದೆ. ''ಈ ಬಕಾಸುರನ್ನ ಪರೀಕ್ಷೆ ಮಾಡೊಕ್ಕೆ, ಸಮಯಕ್ಕೆ ಸಿಕ್ಕೋ ಡಾಕ್ಟರು ಯಾರಿರ್ಬೋದು ಅಂತ ಚೆನ್ನಾಗಿ ಗೊತ್ತಿದೆ. ನಿನ್ನ ವೇಷ ನಿನ್ನೆ ಯಾರ್ದಾಗಿತ್ತು ಸ್ವಲ್ಪ ಪ್ರಾಮಾಣಿಕವಾಗಿ ಹೇಳ್ತೀಯಾ?'' ''ಸಾರ್, ನಿಮ್ಮತ್ತೆ ಅವರ ಮಾತೆ ನಡೆಯೋದು ಇಲ್ಲಿ ಅಲ್ವಾ ಸಾರ್? ಅಲ್ಲಿ ನೋಡಿ ನಿಮ್ಮ ಅತ್ತೆ ಬಂದು ನಿಮ್ಮನ್ನ ಕರೀತಿದಾರೆ'' ಎಂದ.

ರೇಖಾ ಅತ್ತೆ ''ನೋಡು ರಾಜೀವ, ನಿನ್ ಪ್ಲಾನ್ ನಡೆಯೋದಿಕ್ಕೆ ಸಾಧ್ಯ ಆಗೋದೇ ಇಲ್ಲ ಅಂತ್ಲೇ ಜೀವಣ್ಣನ ಮಾತು ಕೇಳಿದ್ದು. ಅಕಸ್ಮಾತ್ ನಿನ್ನ ಸ್ನೇಹಿತ ಏನೋ ಮಾಡಕ್ಕೆ ಹೋಗಿ ನಿಜಕ್ಕೂ ಊರ್ಲುರ್ ಹಾಕ್ಕೊಂಡಿದ್ರೆ ನೀನು ಮೊದ್ಲು, ಆಮೇಲೆ ನಾವೆಲ್ಲಾ ಜೈಲ್ಗೆ ಹೋಗ್ಬೇಕಾಗಿತ್ತು. ಶಿವೂ ನಿನ್ಮಾತೆ ಎದುರು ಹೇಳ್ದೆ ಸುಮ್ನಿದ್ದುದ್ದು. ನಿಮ್ಮಾವ ನಿನ್ನೆ ಊಟದ ವೇಳೇಲಿ ನಿನ್ನ ಪಟ್ಣಕ್ಕೆ ಕರ್ಕೊಂಡು ಹೋಗಿ, ಆ ಸಮಯದಲ್ಲಿ ಈ ನಾಟಕ ಮಾಡಿದ್ದು ನಿಜ. ಯಾರು ಡಾಕ್ಟರ್ ಪಾರ್ಟ್ ಮಾಡಿದರೇನು, ಈಗೆಲ್ಲಾ ಸುಖಾಂತ್ಯವಾಯ್ತಲ್ವ? ನಿಂಗೆ ಗೊತ್ತಿರೋ ಹಾಗೆ ನಿಮ್ಮ ದೊಡ್ಮಾವ ನಿನ್ನ, ನಿನ್ ಸ್ನೇಹಿತರನ್ನ ಅನುಮಾನ್ವಾಗೇ ನೋಡೋದು ನಿಂಗೂ ಗೊತ್ತು. ಇದೇ ವೇಳೇಲಿ ನಿಮ್ ದೊಡ್ಮಾವಾನೂ ಇದ್ದಿದ್ರೆ ಪರಿಸ್ಥಿತಿ ಇನ್ನೂ ಕುಲಗೆಟ್ಟು ಹೋಗ್ತಾ ಇತ್ತಲ್ವ? ಚಿತ್ರ ಸುಖವಾಗಿರ್ಬೇಕು ಅನ್ನೋದ್ ತಾನೇ ನಿನ್ನ, ನನ್ನ ಎಲ್ಲರ ಆಶೆ. ಸಂತೋಷ ಪಡೋದ್ ಬಿಟ್ಟು ಕ್ವಾಪ ಯಾಕೆ? ಅಷ್ಟಕ್ಕೂ ಯಾವಾಗ್ಲೂ ನಮ್ಗೆಲ್ಲಾ ಸಮಯಕ್ಕೆ ಆಗೋದು ಜೀವೂನೇ ಅಲ್ವ?

''ಸರಿ ಹಾಗಾದ್ರೆ, ಎಲ್ಲಾ ಒಳ್ಳೇದಕ್ಕೇ. ಸರಿಹೋಯ್ತು ಬಿಡಿ ಅತ್ತೆ.''

''ಜೀವು''


''ಸಾರ್''

ಇಂಗ್ಲೀಷ್ ಕವಿ ಬೈರೋನ್ ಹೇಳ್ತಾನಲ್ಲ ''ಆಲ್ ಇಸ್ ವೆಲ್‌ದಟ್ಸ ಎಂಡ್ಸ್‌ವೆಲ್'' ಹುಚ್ಮಾವ ಬರೋಷ್ಟರಲ್ಲಿ ಊಟ ಮುಗಿಸಿ, ನಾವು ಹೈವೇ ದಾಟಿರೋಣ. ಕಾರು, ಲಗ್ಗೇಜು ರೆಡಿ ಮಾಡು.

''ಸರಿ ಸಾರ್. ಆದ್ರೆ, ಆ ಇಂಗ್ಲೀಷ್ ಕವಿ ಬೈರೋನ್ ಅಲ್ಲ ಸಾರ್. ಶೇಕ್ಸ್ಪಿಯರ್ ತಮ್ಮ 'ಕಾಮೆಡಿ' ನಾಟಕಕ್ಕೆ ಆ ಹೆಸರು ಇಟ್ಟಿದಾರೆ. 'ಆದದ್ದೆಲ್ಲಾ ಒಳಿತೇ ಆಯ್ತು' ಅಂತ ದಾಸರು ಕೂಡ ಹಾಡಿದ್ದಾರೆ.''

''ಹೋಗ್ಲಿ ಬಿಡು. ಯಾರಾದ್ರೇನು, ನಮ್ಮ ಶಿವೂ ಇನ್ಮೇಲೆ ಮೀನುಗಳ ಜೊತೆ ಅಲ್ದೆ ಚಿತ್ರ ಜೊತೇನೂ ಈಜ್ಬೇಕು! ಜೀವನ ಅಂದ್ರೆ ಇದಲ್ವ? ಚಿತ್ರ ವಿಚಿತ್ರ!

✤




ಕಿವಿ – ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.

**ಡಾ|| ಜಿ. ಪುರುಷೋತ್ತಮ ಇಡಿ.ಡಿ.**

**ವಾಕ್ – ಶ್ರವಣದೋಷ ತಜ್ಞ, ವಿಸ್ಪರ್ ವಾಕ್ – ಶ್ರವಣ ಕೇಂದ್ರ**

# ಮನಸ್ಸಿಗೆ ವಿರಾಮ......

- ಎಚ್. ಗೋಪಾಲಕೃಷ್ಣ

**ನ**ಗರದಿಂದ ದೂರದಲ್ಲಿ ಬಡಾವಣೆ ಶುರುವಾದಾಗ ಬಂದು ಸೇರಿಕೊಂಡವರು ಅಲ್ಲಿನ ಹೆಚ್ಚಿನ ನಿವಾಸಿಗಳು. ಅಲ್ಲೇ ಮನೆ ಮಠ ಮಾಡಿಕೊಂಡರು, ಮಕ್ಕಳನ್ನ ಪೋಷಿಸಿ ಬೆಳೆಸಿದರು. ಬಡಾವಣೆ ಬೆಳೆದ ಹಾಗೆಯೇ ಅವರೂ ಬೆಳೆದರು. ಬಡಾವಣೆಗೆ ರಸ್ತೆ ಬಂತು, ರಸ್ತೆ ಬಂದ ಮೇಲೆ ಬಸ್ಸುಗಳೂ ಬಂದವು, ಬಡಾವಣೆ ಬೆಳೀತಾ ಬೆಳೀತಾ ಬೇರೆ ಬೇರೆ ಕಡೆಯಿಂದ ಜನರೂ ಬಂದು ಸೇರಿಕೊಂಡರು. ಬೇರೆ ಬೇರೆ ಭಾಷೆ, ಬೇರೆ ಬೇರೆ ರೀತಿ ನೀತಿ ರಿವಾಜು ಇದನ್ನೆಲ್ಲವನ್ನೂ ಅರಗಿಸಿಕೊಂಡು ಬಡಾವಣೆ ಬೆಳೀತು.

ಅಲ್ಲೇ ಕೆಲಸದ ತಾಣ ಹತ್ತಿರ ಇದೆ ಅಂತ ಇಲ್ಲಿ ಮನೆ ಕಟ್ಟಿಕೊಂಡು ಬಂದವರೇ ಹೆಚ್ಚು. ಕೆಲಸದ ಸ್ಥಳ ಹತ್ತಿರ, ಮನೆಗೆ ಅಗತ್ಯ ಬಿದ್ದಾಗಲೆಲ್ಲಾ ಪರಿಶ್ರಮವಿಲ್ಲದೇ ಹೋಗಿಬರಬಹುದು ಅಂತ ಅವರ ಯೋಚನೆ. ಕಾಲ ಮುಂದುವರೆದಂತೆ ಮೊದಮೊದಲು ಬಂದು ಸೇರಿಕೊಂಡವರಿಗೂ ವಯಸ್ಸು ಆಗುತ್ತಾ ಬಂದಿತು. ಹಾಗೇ ಕೆಲಸದಿಂದ ನಿವೃತ್ತರೂ ಆದರು.

ಬಡಾವಣೆ ಶುರುವಾದಾಗ ಬಂದವರು ಆಗಿನಿಂದಲೇ ಪರಸ್ಪರ ಪರಿಚಿತರು ಮತ್ತು ಸಹೋದ್ಯೋಗಿಗಳು. ಅದರಿಂದ ಅವರವರ ಸಂಸಾರವೂ ಒಂದುರೀತಿಯಲ್ಲಿ ನಿಕಟವಾಗಿದ್ದವು. ಮಕ್ಕಳೂ ಸಹ ಒಂದೇ ಓರಿಗೆಯವು. ಅವರೂ ಹಿರಿಯರ ಹಾಗೆ ಸ್ನೇಹ ಹೊಂದಿದ್ದವು. ಮಕ್ಕಳು ಬೆಳೆದವು, ಓದಿದವು, ದೊಡ್ಡ ದೊಡ್ಡ ಕೆಲಸಗಳನ್ನ ಹುಡುಕಿಕೊಂಡವು. ರೆಕ್ಕೆ ಪುಕ್ಕ ಬಲಿತ ಹಾಗೆಯೇ ಹಾಗೇ ಹೊರಗೂ ಹಾರಿಬಿಟ್ಟವು. ಬಂಡಿಗಟ್ಟಲೆ ಹಣ ಸಂಪಾದಿಸಿ ಅದರಲ್ಲಿ ಕೊಂಚ ಭಾಗವನ್ನು ಇಲ್ಲಿನ ಹೆತ್ತವರಿಗೆ ಆಗಾಗ ರವಾನೆ ಮಾಡುತ್ತಿದ್ದವು. ಹಣಕಾಸು ಕೊಟ್ಟರೆ ಸಾಕು ತಮ್ಮ ಜವಾಬ್ದಾರಿ ಅಲ್ಲಿಗೇ ಮುಗಿಯುತ್ತದೆ ಎಂದು ನಂಬಿದ್ದ ಜನಾಂಗ. ಇಲ್ಲಿ ವಯಸ್ಸಾದವರು ಅದು ಹೇಗೆ ಒಂಟಿ ಜೀವನ ನಡೆಸುತ್ತಾರೆ ಅನ್ನುವ ಯೋಚನೆಗೆ ಅವರು ಹೊರತು! ಮೊದಲಿನಿಂದಲೂ ಹಣಕಾಸಿನ ಪರಿಸ್ಥಿತಿ ಉತ್ತಮ ಅಂತಲೇ ಹೇಳಬಹುದಾಗಿದ್ದ ಮಧ್ಯಮ ವರ್ಗದವರೇ ನಿವಾಸಿಗಳು. ಈಗ ಮಕ್ಕಳಿಂದ ಬರುತ್ತಿದ್ದ ಹಣವೂ ಸೇರಿ ಆರ್ಥಿಕವಾಗಿ ಸಬಲರು ಅಂತ ಹೇಳಬಹುದಾದ ಸ್ಥಿತಿ ಮುಟ್ಟಿದ್ದರು. ವಾರದಲ್ಲಿ ಎರಡು ಮೂರು ಸಲ ಬ್ಯಾಂಕಿಗೆ ಭೇಟಿ, ಎರಡು ಸಲ ಹಣಕಾಸಿನ ಲೆಕ್ಕಾಚಾರಕ್ಕೆ ಫೈನಾನ್ಸ್ ಕಂಪನಿಗಳಿಗೆ ಭೇಟಿ, ಬೆಳಿಗ್ಗೆ ಹೊತ್ತು ದೇವಸ್ಥಾನಗಳಿಗೆ ವಿಸಿಟ್ಟು.... ಹೀಗೆ ಅವರ ಸಮಯ ಹಂಚಿಹೋಗುತ್ತಿದ್ದರೂ ಯಾವಾಗಲೂ ಆತಂಕ, ದುಗುಡ ಇವರ ಮುಖದಲ್ಲಿ - ಒಂದು ರೀತಿಯ ಇನ್ ಸೆಕ್ಯೂರ್ಡ್ ಭಾವನೆ.

ಬಡಾವಣೆಯಲ್ಲಿ ಬರೇ ಹಿರಿಯರೇ ತುಂಬಿಹೋಗಿ ಎಳೆಯ ಜೀವಗಳು ಬಹಳ ಅಪರೂಪ ಆಗಿಬಿಟ್ಟಿತ್ತು. ಈ ಹಿರಿಯರೇ ಸಂಜೆ ಹೊತ್ತು ಭೇಟಿಯಾಗಲು ಕೆಲವು ಸ್ಥಳಗಳನ್ನು

ಗೊತ್ತು ಮಾಡಿಕೊಂಡಿದ್ದರು. ಬಸ್ ಸ್ಟಾಪು, ಪಾರ್ಕಿನ ಒಂದು ಮೂಲೆ, ಬ್ಯಾಂಕುಗಳ ಜಗಲಿ, ಸಂಜೆ ಮುಚ್ಚುವ ಅಂಗಡಿಗಳ ಮುಂಗಟ್ಟು... ಹೀಗೆ ಅವರವರ ಅನುಕೂಲಕ್ಕೆ ತಕ್ಕಹಾಗೆ ಜಾಗಗಳನ್ನು ಹುಡುಕಿಕೊಂಡು ಅಲ್ಲಿ ಸೇರುತ್ತಿದ್ದರು. ಅಲ್ಲಿ ಸೇರಿದಾಗಲೂ ಅವರವರ ಕಷ್ಟ ಸುಖದ, ದುಃಖ ದುಮ್ಮಾನಗಳ, ನೋವಿನ ಮಾತುಗಳೇ ಹೊರತು ಬೇರೆಯದಿಲ್ಲ... ಹೀಗೆ ಗುಂಪಾಗುವವರೂ ಸಹ ಅವರವರ ಗಡಿರೇಖೆಗಳನ್ನು ನಿರ್ಧಾರ ಮಾಡಿಕೊಂಡುಬಿಟ್ಟಿದ್ದರು – ಒಂದು ಗುಂಪು ಮತ್ತೊಂದು ಗುಂಪಿನ ಜತೆಗೆ ಸೇರುವುದಿಲ್ಲ, ಇವರ ಸ್ನೇಹಿತರು ಅವರ ಸ್ನೇಹಿತರು ಅಲ್ಲ! ಹೀಗೆ.. ಇದೇನು ಯಾರೂ ನಿರ್ಧಾರ ತೆಗೆದುಕೊಂಡು ಮಾಡಿರಲಿಲ್ಲವಾದರೂ ಅವರಿಗೇ ತಿಳಿಯದಂತೆ ಕಟ್ಟುಪಾಡಿಗೆ ಒಳಗಾಗಿದ್ದರು.

ಹಿರಿಯರೊಬ್ಬರು ಬೇರೆಕಡೆಗೆ ತಮ್ಮ ವಾಸಸ್ಥಾನವನ್ನು ಬದಲಾಯಿಸಿದರು. ಅವರು ವಾಸವಿದ್ದ ಮನೆಯನ್ನು ಕೊಂಡವರು ಮಿಲಿಟರಿಯಿಂದ ಸ್ವಯಂ ನಿವೃತ್ತಿ ಪಡೆದು ಬಂದಿದ್ದವರೊಬ್ಬರು. ಮನೆಗೆ ವಾಸಕ್ಕೂ ಬಂದರು. ಬೆಳಿಗ್ಗೆ ಹೊತ್ತು ದೇವಸ್ಥಾನಕ್ಕೇ ಹೋಗುವ ಜನರನ್ನ ಗಮನಿಸಿದರು. ಮಧ್ಯಾಹ್ನದ ಹೊತ್ತು ಕೈಯಲ್ಲಿ ಬ್ಯಾಗುಹಿಡಿದು ಬ್ಯಾಂಕಿಗೆ ಹೋಗುವ ಜನರನ್ನು ಕಂಡರು, ಸಂಜೆ ಹೊತ್ತಿನಲ್ಲಿ ವಯಸ್ಸಾದವರೆಲ್ಲರೂ ಅವರವರದ್ದೇ ಗುಂಪು ಮಾಡಿಕೊಂಡು ಕೂತಿರೋದನ್ನ ಗಮನಿಸಿದರು.

ಪಾಪ ಜನ ಯಾಕೋ ದುಗುಡದಲ್ಲಿ ಜೀವನ ಸವೆಸ್ತಿದಾರೆ ಅಂತ ಅವರಿಗನ್ನಿಸಿತು. ನಿಧಾನಕ್ಕೆ ನಿವಾಸಿಗಳ ಸ್ನೇಹ ಸಂಪಾದಿಸಿದರು. ಪ್ರತಿಯೊಬ್ಬರ ಹಿನ್ನೆಲೆಯನ್ನೂ ಅವರವರ ಸಾಂಸಾರಿಕ ತಾಪತ್ರಯಗಳನ್ನೂ ತಿಳಿಯಲು ಪ್ರಯತ್ನ ಮಾಡಿದರು. ಪಾಪ ವಯಸ್ಸಾಗಿರುವ ಎಲ್ಲರೂ ಹತ್ತಿರದಲ್ಲಿ ತಮ್ಮವರು ಯಾರೂ ಇಲ್ಲದೇ ಇರುವುದರಿಂದ ದುಗುಡಕ್ಕೆ ಒಳಗಾಗಿದ್ದಾರೆ ಅಂತ ಕಂಡುಕೊಂಡರು. ಅದರ ಜತೆಗೆ ಎಲ್ಲರಿಗೂ ಸರಿಹೊತ್ತಿನಲ್ಲಿ ತಮಗೇನಾದರೂ ಆದರೆ ತಮ್ಮ ನೆರವಿಗೆ ಯಾರು ಬರ್ತಾರೆ ಅನ್ನುವ ಭಯ! ಸಮಾಜಕ್ಕೆ ತಾವು ಭಾರವಾಗಿದ್ದೀವೇನೋ ಎಂಬುವ ಭಾವನೆ...

ಆ ಜನರ ಭಯ ಹೋಗಿಸಿದರೆ ಅವರ ಆತಂಕ ಕಡಿಮೆಯಾಗುತ್ತೆ ಅನಿಸಿತು. ನಿಧಾನಕ್ಕೆ ಒಂದೊಂದೇ ಗುಂಪಿನವರ ಹತ್ತಿರ ಪರಿಚಯ ಬೆಳೆಸಿದರು. ತಮ್ಮ ಪರಿಚಯ ಹೇಳಿಕೊಂಡರು – ತಾವು ಮಿಲಿಟರಿಯಲ್ಲಿ ಇದ್ದದ್ದು ಅಲ್ಲಿ ಸೇವೆ ಸಲ್ಲಿಸಿದ್ದು – ವಿವರಗಳನ್ನ ಕಣ್ಣಿಗೆ ಕಟ್ಟಿದ ಹಾಗೆ ಬಣ್ಣಿಸಿದರು. ನೋಡಿ ನಿಮ್ಮ ತಲ್ಲಣಗಳಿಗೆ ಕಾರಣ ಅಂದರೆ ನಿಮ್ಮ ಭಯ ಅಷ್ಟೇ. ಎಷ್ಟೊಂದು ಸೆಕ್ಯೂರ್ ಆಗಿದ್ದೀರಿ ನೀವು ಇಲ್ಲಿ ಆದರೂ ನಿಮಗೆ ಒಂದು ರೀತಿ ಭಯ ಕಾಡ್ತಾ ಇದೆ. ಅದಕ್ಕೊಂದು ಪ್ಲಾನ್ ಮಾಡಿದೀನಿ ನಾನು. ಯಾರು ಯಾರಿಗೆ ತುಂಬಾ ತಡವಾಗಿ ನಿದ್ದೆ ಬರುತ್ತೋ ಅವರೆಲ್ಲಾ ಇವತ್ತು ರಾತ್ರಿ ಹನ್ನೊಂದಕ್ಕೆ ನಮ್ಮನೇಲಿ ಸೇರೋಣಾ. ಬರ್ತಾ ಒಂದೊಂದು ದೊಣ್ಣೆ ಹಿಡಕೊಂಡು ಬನ್ನಿ, ರಾತ್ರಿ ನಮ್ಮ ಏರಿಯಾನ ಒಂದು ರೌಂಡು ಹೊಡಿಯೋಣಾ....

ರಾತ್ರಿ ವಯಸ್ಸಾದವರೆಲ್ಲರೂ ಮಿಲಿಟರಿಯವರ ಮುಖಂಡತ್ವದಲ್ಲಿ ಬಡಾವಣೆಯನ್ನ ಬೆಳದಿಂಗಳ ರಾತ್ರಿ ಸುತ್ತು ಹಾಕಿದರು. ಅದೇನೋ ಹೊಸಾ ಚೈತನ್ಯ ಬಂದ ಹಾಗೆ ಅನಿಸಿತು.

ಮಾರನೇ ದಿವಸ ರಾತ್ರಿ ಮತ್ತೂ ಒಂದಷ್ಟು ಜನ ಇವರ ಜತೆಗೆ...! ಎರಡು ವಾರ ಇವರು ಹೀಗೆ ಸುತ್ತಿದರೋ ಇಲ್ಲವೋ ಬಡಾವಣೆಯಲ್ಲಿನ ಕ್ರೈಮ್ ರೇಟು ಕಡಿಮೆಯಾಗಿದೆ ಅಂತ ಏರಿಯಾದ ಪೋಲಿಸಿನವರು ಇವರಿಗೆ ವರದಿ ಕೊಟ್ಟರಂತೆ..!

ರಾತ್ರಿ ವಾಕಿಂಗಿನ ನಂತರ ಹತ್ತಿರದ ಅನಾಥಾಶ್ರಮಕ್ಕೆ ಇವರನ್ನ ಮಿಲಿಟರಿಯವರು ಒಯ್ದರು. ಎರಡು ಮೂರು ವಾರ ಅಲ್ಲೀಗೆ ಭೇಟಿಕೊಟ್ಟ ನಂತರ ಒಂದು ಗುಂಪು ಪ್ರತಿದಿವಸ ಅಲ್ಲೀಗೆ ಭೇಟಿ ನೀಡಿ ಏನಾದರೂ ಸಹಾಯ ನೀಡುವ ಮಟ್ಟಕ್ಕೆ ಏರಿತು.

ಆ ಕಾಲದಲ್ಲಿಯೇ ಕಾಲೇಜು ಹತ್ತಿದ್ದ ಒಂದು ಗುಂಪಿನಿಂದ ದೂರದ ಶಾಲೆಯಲ್ಲಿ ಸಂಜೆ ಹೊತ್ತು ಟುಟೋರಿಯಲ್ ತರಗತಿ ನಡೆಸುವ ಯೋಜನೆ ಹಮ್ಮಿಕೊಂಡು ಅದರಂತೆ ಸುಮಾರು ಮಕ್ಕಳಿಗೆ ವೃದ್ಧರು ಪಾಠ ಹೇಳಿಕೊಟ್ಟರು. ಶಾಲೆಯ ವಾತಾವರಣ ಬದಲಾಗಿಬಿಟ್ಟಿತಂತೆ – ಪಾಸ್ ರೇಟು ಹೆಚ್ಚಿದೆ ಅಂತ ಶಾಲೆಯ ಹೆಡ್ ಮಾಸ್ಟರು ಹೇಳಿದಾಗ ಪಾಠ ಮಾಡಿದ ನಿವೃತ್ತರಿಗೆ ಸ್ವರ್ಗ ಒಂದೇ ಗೇಣು ಅನಿಸಿತಂತೆ...

ಅದೇ ಶಾಲೆಯಲ್ಲಿಯೇ ಖಾಲಿಯಿದ್ದ ಜಾಗದಲ್ಲಿ ಹಿರಿಯರೇ ನಿಂತು ಒಂದು ಬ್ಯಾಸ್ಕೆಟ್ ಬಾಲ್ ಕೋರ್ಟು ನಿರ್ಮಿಸಿದರು. ಹಿರಿಯರಲ್ಲಿ ಒಬ್ಬಾತ ಹಿಂದೆ ಈ ಆಟ ಆಡಿದವನು. ಪುಟ್ಟ ಮಕ್ಕಳಿಗೆ ಈ ಆಟ ಹೇಳಿಕೊಡುತ್ತಾ ಆತನೇ ಐವತ್ತು ವರ್ಷಕಿರಿಯನಾಗಿಬಿಟ್ಟೆ ಅಂತ ಹೇಳಿದ....! ಹೀಗೆ ಸಮಾಜಕ್ಕೆ ತಾವು ಹೊರೆ ಅಂತ ಭಾವಿಸಿದ್ದವರು ಸಮಾಜದ ಒಂದು ಭಾಗವಾಗಿ ತಮ್ಮ ಜೀವನ ರೂಪಿಸಿಕೊಂಡಿದ್ದು ಒಂದು ಭಾರೀ ಬದಲಾವಣೆ.

ಒಂದೇ ವರ್ಷದಲ್ಲಿ ಈ ಬದಲಾವಣೆಗಳು ಬಡಾವಣೆಯಲ್ಲಿ ಕಂಡಿತ್ತು. ಈಗಲೂ ಅಲ್ಲಿನ ವೃದ್ಧರು ಬಸ್ ಸ್ಟಾಪಿನಲ್ಲಿ ಕೂತು ಮಾತು ಆಡುವರಾದರೂ ಈಗ ಅವರ ಯೋಚನೆ ಮುಂದೆ ತಾವೇನು ಕಾರ್ಯಕ್ರಮ ಹಮ್ಮಿಕೊಳ್ಳಬೇಕು ಅಂತಿರುತ್ತೆ... ಮುಂದೆ ಮಕ್ಕಳಿಗೆ ಕಬಡ್ಡಿ ಆಟ ಹೇಳಿಕೊಡುವ ಹುಮ್ಮಸ್ಸು ಒಬ್ಬರಲ್ಲಿದ್ದರೆ, ಮತ್ತೊಬ್ಬರು ಪೇಪರ್ ಕಟ್ಟಿಂಗ್‌ನಲ್ಲಿ ನಾನು ಎಕ್ಸ್‌ಪರ್ಟು – ಅದನ್ನೇ ಹೇಳಿಕೊಡ್ತೀನಿ.. ಅಂತ ತಮ್ಮ ಮನೋಭಾವನೆ ಹರಿದುಬಿಡುತ್ತಾರೆ......

ಇದೇ ಬಡಾವಣೆಗೆ ನನ್ನ ಸಂಬಂಧಿಯೊಬ್ಬರು ಅವರು ನಿವೃತ್ತರಾದ ನಂತರ ಮನೆಕೊಂಡು ನೆಲೆಸಿದರು. ಅವರು ಇಲ್ಲೀಗೆ ಬರುವ ವೇಳೆಗೆ ಈ ಪುಟ್ಟ ಕ್ರಾಂತಿ ನಡೆದುಹೋಗಿತ್ತು. ಅವರ ನೆರೆಮನೆಯವರು – ಅವರಿಗೆ ಇವರಿಗಿಂತಲೂ ಹೆಚ್ಚು ವಯಸ್ಸು – ಒಮ್ಮೆ ಇವರ ಜತೆ ಮಾತಿಗೆ ಸಿಕ್ಕಿದರು. ಇವರು ಮಾತಾಡುತ್ತಾ ಬಸ್ ಸ್ಟಾಪಿನಲ್ಲಿ ಸಂಜೆ ಹೊತ್ತು ನಿವೃತ್ತರ ಸಂಗಡ ಕೂತು ಸಮಯ ಕಳೆಯೋದನ್ನ ಹೇಳಿದರು, ನೀವು ಅಲ್ಲಿ ಕಾಣಿಸೋದಿಲ್ಲವಲ್ಲಾ? ಅಂದರಂತೆ.

''ಅಲ್ಲಿ ಬರೀ ಮುದುಕರು ಕೂತ್ಕೋತಾರೆ ಇವರೇ ನನಗೆ ಅದು ಸರಿಹೋಗುಲ್ಲ..'' ಅಂದರಂತೆ ನೆರೆಮನೆಯವರು! ಮನಸ್ಸಿಗೆ ವಿರಾಮ ಸಿಕ್ಕಿದರೆ ಅದು ದೆವ್ವದ ವರ್ಕ್‌ಶಾಪ್ ಅಂತೆ ಅದಕ್ಕೇ ಮನಸ್ಸಿಗೆ ವಿರಾಮ ಕೊಡಬಾರದಂತೆ....!

✤

ಬ್ರೇಕಿಂಗ್ ನ್ಯೂಸ್

# ಶುದ್ಧ ಅಸುದ್ದಿ

- ಎಚ್ಚೆನ್ಎ

## ಮಾಸ್ತರರ (ಅ) ಸಾಮರ್ಥ್ಯ

**ಹೇ**ಗೆ ಮಾಡಿದೀಯಾ ಪರೀಕ್ಷೇಲಿ? ಚೆನ್ನಾಗಿ ಮಾಡಿದ್ದೀನಿ. ಏನು ಚೆನ್ನಾಗಿ ಮಾಡಿದ್ದೀ, ನಿನ್ನ ಮುಂಡಾಮೋಚ್ತು. ಇದು ಮಾಸ್ತರರು ವಿದ್ಯಾರ್ಥಿಗೆ ಬೈಯ್ಯುವ ಡೈಲಾಗ್ ಅಲ್ಲ. ಬಿಹಾರ್ ಸರ್ಕಾರ ಶಿಕ್ಷಕರನ್ನು ತರಾಟೆಗೆ ತೆಗೆದುಕೊಂಡ ಪರಿ. ಅಲ್ಲಿನ ಶಿಕ್ಷಣ ಇಲಾಖೆ ಮಾಸ್ತರರ ಸಾಮರ್ಥ್ಯ ಪರೀಕ್ಷಿಸಲು ಇಂಗ್ಲಿಷ್, ಗಣಿತ, ಹಿಂದಿ ಮತ್ತು ಜನರಲ್ ನಾಲೆಡ್ಜ್ ವಿಷಯಗಳ ಬಗ್ಗೆ ಅವರಿಗೆ ಒಂದು ಪರೀಕ್ಷೆ ಏರ್ಪಡಿಸಿತ್ತು. ಒಟ್ಟು 44,000 ಶಿಕ್ಷಕರು ಈ ಪರೀಕ್ಷೆಗೆ ಕೂತರು ಅಥವಾ ಕೂರಿಸಲಾಯಿತು. ಪಾಸಾದವರ ಸಂಖ್ಯೆ 33,000. ಉಳಿದವರು ಡುಮುಕಿ. ಈ ಡುಮುಕಿ ಹೊಡೆದವರಿಗಾಗಿ ಒಂದು ಸಪ್ಲಿಮೆಂಟರಿ ಪರೀಕ್ಷೆ ನಡೆಸಲಿದ್ದು ಅದರಲ್ಲೂ ನಪಾಸಾದವರನ್ನು ಮನೆಗೆ ಕಳಿಸಲಾಗುವುದು ಎಂದು ಸರ್ಕಾರ ಘೋಷಿಸಿದೆ. ಆದರೆ ನಮಗೆ ಎರಡು ಸಂದೇಹಗಳಿವೆ. ಒಂದು, ಪಾಸಾದವರಲ್ಲಿ ನಕಲು ಮಾಡಿ ಪಾಸಾದವರು ಎಷ್ಟು ಮಂದಿ? ಎರಡು, ಫೇಲಾಗಿರುವ ಶಿಕ್ಷಕರ ಬಳಿ ಕಲಿತ (?) ಹೈಕಳುಗಳ ಪಾಡೇನು?

★★★

## ಅಳದ ಈರುಳ್ಳಿ

**ಬಾ**ಯಿಯಲ್ಲಿ ನೀರೂರಿಸುವ ಈರುಳ್ಳಿ ಕಣ್ಣಿನಲ್ಲೂ ನೀರು ತರಿಸುತ್ತದೆ ಅಲ್ಲವೆ. ನಾವು ಬೆಲೆಯ ವಿಷಯ ಹೇಳುತ್ತಿಲ್ಲ. ಅದರಲ್ಲಿರುವ ರಸಾಯನಿಕದ ಬಗ್ಗೆ ಹೇಳುತ್ತಿದ್ದೇವೆ. ಈಗ ವಿಜ್ಞಾನಿಗಳು ಆ ರಸಾಯನಿಕದ ಪ್ರಮಾಣ ಕಡಿಮೆ ಇರುವಂತಹ ಈರುಳ್ಳಿಯನ್ನು ಬೆಳೆಯುವಲ್ಲಿ ಯಶಸ್ವಿಯಾಗಿದ್ದಾರೆಂದು ಸುದ್ದಿ. ಆದರೆ ಬೆಲೆ ಹೀಗೇ ಏರುತ್ತಿದ್ದರೆ ಆ ಈರುಳ್ಳಿಯಿಂದಲೂ ಕಣ್ಣೀರು ಗ್ಯಾರಂಟಿ – ಹೆಚ್ಚುವಾಗ ಅಲ್ಲ, ಕೊಳ್ಳುವಾಗಲೇ.

★★★

## ಮಾ ಮೊ ಕಳ್ಳ

**ನಿ**ಮ್ಮ ಮೊಬೈಲ್ ಕಳೆದು ಹೋದರೆ ಏನು ಮಾಡುತ್ತೀರಿ? ಮತ್ತೆ ಇನ್ನೊಂದು ಕೊಳ್ಳಬಹುದು. ನಿಜ, ಅದೇನು ದೊಡ್ಡ ವಿಷಯವಲ್ಲ. ಕಳೆದು ಹೋದ ಮೊಬೈಲ್ ಬಗ್ಗೆ ಚಿಂತಿಸುವುದಕ್ಕಿಂತ ಈಗಾಗಲೇ ಅದರಲ್ಲಿ ಅಡಗಿಸಿದ್ದ ಫೋನ್ ನಂಬರ್‌ಗಳನ್ನು ಮತ್ತೆ ಸಂಗ್ರಹಿಸುವುದು ಹೇಗೆ ಎಂಬುದೇ ಹೆಚ್ಚು ಆತಂಕ ತರುವ ವಿಷಯ ಅಲ್ಲವೆ? ಈ ಚಿಂತೆಯಲ್ಲಿ ಮುಳುಗಿದ್ದಾಗ ಇದ್ದಕ್ಕಿದ್ದಂತೆ ನಿಮಗೆ ಅಂಚೆಯಲ್ಲಿ ಆ ಮಾಹಿತಿ ಬಂದರೆ? ಅಂದರೆ ನೀವು ಅಡಗಿಸಿದ್ದ ಫೋನ್ ನಂಬರ್‌ಗಳನ್ನು ಮೊಬೈಲ್ ಕದ್ದವ ನಿಮಗೆ ಕಳಿಸಿದರೆ? ಇದು ಸಾಧ್ಯವೆ

ಎಂದು ನಿಮ್ಮದೇ ಮೂಗಿನ ಮೇಲೆ ಬೆರಳಿಟ್ಟುಕೊಳ್ಳಬೇಡಿ. ಏಕೆಂದರೆ ಸಾಧ್ಯವಾಗಿದೆ ಚೀನಾದಲ್ಲಿ. ಮೊಬೈಲ್ ಕದ್ದ ಮಹಾಶಯ ಅದರಲ್ಲಿದ್ದ ಸುಮಾರು 1000 ಫೋನ್ ನಂಬರ್‌ಗಳನ್ನು ಪಟ್ಟಿ ಮಾಡಿ ಸಿಮ್ ಕಾರ್ಡ್ ಸಮೇತ ಮಾಲೀಕನಿಗೆ ವಾಪಸ್ ಮಾಡಿದ್ದಾನೆ. ಇವನನ್ನು 'ಮಾನವೀಯತೆಯುಳ್ಳ ಮೊಬೈಲ್ ಕಳ್ಳ' ಎಂದು ಕರೆಯಬಹುದು.

★★★

## ಪತಿ, ಪತ್ನಿ ಮತ್ತು 'ಅವಳು'

**'ಪ**ತಿ ಪತ್ನಿ ಔರ್ ವೊ' ಚಿತ್ರ ನೆನಪಿದೆಯೆ? ಪತಿ, ಪತ್ನಿ ಮತ್ತು 'ಅವಳು' ಈ ಮೂರು ಮಂದಿಯ ಸುತ್ತ ಹೆಣೆದ ಒಂದು ಕೌಟುಂಬಿಕ ಕತೆ. ಇಂತಹುದೇ ಕತೆಯೊಂದು ವಿವಾದವಾಗಿ ನ್ಯಾಯಾಲಯದ ಮುಂದೆ ಬಂದರೆ? ನ್ಯಾಯಾಧೀಶರು ನಿರ್ದೇಶಕರಾಗಿ ಇದನ್ನು ಹೇಗೆ ನಿಭಾಯಿಸಬಹುದು? ಮಧ್ಯ ಪ್ರದೇಶದ ನ್ಯಾಯಾಧೀಶರೊಬ್ಬರು ಒಂದು ತಿಂಗಳ ಅವಧಿಯನ್ನು ಪತ್ನಿ ಮತ್ತು 'ಅವಳ' ನಡುವೆ ಹಂಚಿ ತೀರ್ಪು ನೀಡಿದ್ದಾರೆ. ಅಂದರೆ ತಿಂಗಳಿನಲ್ಲಿ 15 ದಿನ ಈ (ಪೂರ್?) ಪತಿ ಪತ್ನಿಯ ಜತೆ, ಉಳಿದರ್ಧ 'ಅವಳ' ಜತೆ ಕಳೆಯಬೇಕೆಂಬ 'ಶಿಕ್ಷೆ' ವಿಧಿಸಿದ್ದಾರೆ ಸಾರಿ ತೀರ್ಪು ನೀಡಿದ್ದಾರೆ. ಮನೆ ಒಂದೇ ಇದ್ದು ಅದರಲ್ಲಿ ಮೂರು ಕೋಣೆಗಳಿವೆಯಂತೆ. ಒಂದು ಕೋಣೆ ಅವಳಿಗೆ, ಇನ್ನೊಂದು ಕೋಣೆ ಪತ್ನಿಗೆ. ಒಂದೊಂದು ಕೋಣೆಯಲ್ಲಿ ತಲಾ 15 ದಿನ. ಆ ಅವಧಿಯಲ್ಲಿ ಮುನಿಸಿಕೊಂಡರೆ? ಖಾಲಿ ಇರುವ ಕೋಣೆಗೆ ಇವನು ಹೋಗಬಹುದು ಎಂದು ನ್ಯಾಯಾಲಯ ಹೇಳಿಲ್ಲ, ಇದು ನಮ್ಮ ಊಹೆ ಅಷ್ಟೆ. ಕಟ್ಕೊಂಡೋಳು ಕೊನೆ ತನಕ, ಇಟ್ಕೊಂಡೋಳು ಇರೋತನಕ ಎನ್ನುವ ಹಾಗಿಲ್ಲ. ಏಕೆಂದರೆ ಇಲ್ಲಿ ಇಬ್ಬರಿಗೂ ಸಮಾನ ಅವಧಿ.

★★★

## ಲೋಹವಾದ

**ಲೋ**ಹಿಯಾವಾದದಿಂದ ಲೋಹವಾದ ಎಷ್ಟು ದೂರ? ಇದೇನು ಪ್ರಶ್ನೆ ಎಂದು ಹುಬ್ಬೇರಿಸದಿರಿ. ಉಕ್ಕು ಎಂಬ ಲೋಹದ ಮನುಷ್ಯ ಸರ್ದಾರ್ ಪಟೇಲ್ ಒಬ್ಬರೆ. ಅವರನ್ನು ಉಕ್ಕಿನ ಮನುಷ್ಯ ಎಂದೇ ಪರಿಗಣಿಸಲಾಗಿದೆ. ಆದರೆ ಅಡ್ವಾಣಿ ಅವರನ್ನು ಲೋಹ ಪುರುಷ ಎಂದು ಬಿಂಬಿಸಲು ಪ್ರಯತ್ನ ಮಾಡಲಾಯಿತು. ಯಾವ ಲೋಹ ಎಂದು ಮಾತ್ರ ಹೇಳಲಿಲ್ಲ. ಈಗ ನರೇಂದ್ರ ಮೋದಿ ಲೋಹ ಪುರುಷ ಎಂದು ಕೆಲವರು ನಂಬಿದ್ದಾರೆ. ಮತ್ತೆ ಮುಲಾಯಂ ಸಿಂಗ್ ಯಾದವ್ ಏನು ಕಡಿಮೆ? ಅವರನ್ನು ಲೋಹದಂತೆ ಛಲವುಳ್ಳ (ಆದರೆ ಕುಸುಮದಂತೆ ಮೃದು ಹೃದಯವುಳ್ಳ) ನಾಯಕ ಎಂದು ಉ.ಪ್ರ.ದಲ್ಲಿ ಪೋಸ್ಟರ್‌ಗಳು ಹೇಳುತ್ತಿವೆ. ಮುಲಾಯಂಜಿ ಲೋಹಿಯಾ ಗರಡಿಯಲ್ಲಿ ಒಮ್ಮೆ ಪಳಗಿದ್ದವರು. ಆದರೆ ಈಗ ಅಲ್ಲಿಂದ ಬಹು ದೂರ ಸಾಗಿ ಬಂದು ಈಗ ಲೋಹ ಮನುಷ್ಯರಾಗಿದ್ದಾರೆ. ಆದುದರಿಂದಲೇ ಲೋಹಿಯಾವಾದದಿಂದ ಲೋಹವಾದ ಎಷ್ಟು ದೂರ ಎಂದು ಕೇಳಿದ್ದು.

✤